ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 3 ಸಂಚಿಕೆ 50

ಡಿಸೆಂಬರ್ 13, 2009

ರೂ. 5/-

ಗಣಿಗಳ್ಳರು - ಗಡಿಗಳ್ಳರಿಗಾಗಿ ತಡಕಾಟ



ಆರ್‌ಎಸ್‌ಎಸ್ ಕಪಿಮುಷ್ಟಿಯಲ್ಲಿ ಬಿಜೆಪಿ



ಬಾಬಾಬುಡನ್ ಗಿರಿ

ಸರ್ಕಾರದಿಂದ ನ್ಯಾಯಾಲಯದ ಆದೇಶ ಉಲ್ಲಂಘನೆ



ನಕ್ಸಲ್‌ವಾದ : ಎಡಪಂಥೀಯವಾದಿ ವಿಕೃತಿ

ನೆರೆಸಂತ್ರಸ್ತರ ಗಾಯದ ಮೇಲೆ ಬರೆ




ಸಂದರ್ಶನ

ಬಾಬ್ರಿಮಸೀದಿ ಧ್ವಂಸ : ಕ್ರಮ ಕೈಗೊಳ್ಳಲು ಕಾಂಗ್ರೆಸ್‌ಗೆ ಇಚ್ಛಾಶಕ್ತಿ ಇಲ್ಲ

ಪ್ರಕಾಶ್ ಕಾರಟ್

ಆಹಾರದ ಹಕ್ಕಿನ ಆಂದೋಲನದ ರ್‍ಯಾಲಿಗೆಂದು ಮೊನ್ನೆ ಬೆಂಗಳೂರಿಗೆ ಬಂದಿದ್ದ ಕಾಂ. ಪ್ರಕಾಶ್ ಕಾರಟ್‌ರವರೊಂದಿಗೆ ಲಿಬರಾನ್ ಆಯೋಗದ ವರದಿ ಮತ್ತು ಮುಸ್ಲಿಮರ ಸ್ಥಿತಿಗತಿ ಕುರಿತಾಗಿ ಸಂದರ್ಶನ

ಸಂದರ್ಶಕರು : **ಜಿಯ**



ಪ್ರಶ್ನೆ: ನ್ಯಾಯಮೂರ್ತಿ ಲಿಬರ್ಹಾನ್ ಆಯೋಗವು ಇತ್ತೀಚೆಗೆ ತಾನೆ ತನ್ನ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದೆ. ಈ ವರದಿಯ ಕುರಿತು ನಿಮ್ಮ ಅಭಿಪ್ರಾಯವೇನು?

ಪ್ರಕಾಶ್ ಕಾರಟ್: ಲಿಬರ್ಹಾನ್ ಆಯೋಗವನ್ನು ನೇಮಿಸಿದ 17 ವರ್ಷಗಳ ನಂತರ ಈ ವರದಿಯನ್ನು ಸಲ್ಲಿಸಲಾಗಿದೆ. ಈ ವರದಿಯು ಬಿಜೆಪಿ-ಆರ್‌ಎಸ್‌ಎಸ್- ವಿಹೆಚ್‌ಪಿ ಸಂಘಟನೆಗಳನ್ನು ತಪಿತಸ್ಥರೆಂದು ನೇರವಾಗಿ ಪ್ರಬಲ ಸಾಕ್ಷ್ಯಾಧಾರಗಳ ಸಮೇತ ಹೊಣೆಗಾರರನ್ನಾಗಿ ಮಾಡಿದೆ. ಕೇಂದ್ರ ಸರ್ಕಾರವು ಈ ವರದಿಯು ಹೇಳಿರುವ ಆಧಾರದ ಮೇಲೆ ಆರೋಪಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ನಾವು ಬಯಸುತ್ತೇವೆ. ಆದರೆ ಸರ್ಕಾರವು ಈ ವರದಿಯ ಆಧಾರದ ಮೇಲೆ ತಾನು ಕೈಗೊಳ್ಳಬೇಕಾದ ಕ್ರಮಗಳನ್ನು ಕುರಿತಾದ ವರದಿಯನ್ನು ನೋಡಿದರೆ ಅದೇನೂ ಅಷ್ಟು ಗಂಭೀರವಾಗಿಲ್ಲ. ಸರ್ಕಾರಕ್ಕೆ ಇಚ್ಛಾ ಶಕ್ತಿ ಇಲ್ಲ. ಈ ದುಷ್ಕೃತ್ಯಕ್ಕೆ ಕಾರಣರಾದ ಎಲ್ಲರನ್ನೂ ಅದರಲ್ಲಿ ನಮೂದಿಸಿಲ್ಲ. ಸರ್ಕಾರ ಅಪರಾಧಿಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ನಾವು ಬಯಸುತ್ತೇವೆ.

ಲಿಬರ್ಹಾನ್ ಆಯೋಗವೂ ಪರಿಪೂರ್ಣವಾಗಿಲ್ಲ. ಬಾಬ್ರಿ ಮಸೀದಿ ಧ್ವಂಸಕ್ಕೆ ಅಂದಿನ ಪ್ರಧಾನಿ ಪಿವಿ ನರಸಿಂಹರಾವ್‌ರವರ ಸರ್ಕಾರವೂ ಕಾರಣ. ಏಕೆಂದರೆ, ದುಷ್ಕೃತ್ಯ ನಡೆಯುವಾಗ ಅದು ತಡೆಯದೆ ಬರೆ ಮೂಕ ಪ್ರೇಕ್ಷಕನಂತೆ ಕುಳಿತಿತ್ತು. ನಾವು ಸರ್ಕಾರಕ್ಕೆ ಎಚ್ಚರಿಕೆ ನೀಡುತ್ತಲೇ ಇದ್ದೆವು. ಕರಸೇವಕರು ಕೇವಲ ಪೂಜೆ ಮಾತ್ರ ಮಾಡುತ್ತಾರೆಂದು ನಮಗೆ ಹೇಳಲಾಯಿತು. ನಾವು ಹಲವು ಬಾರಿ ಸರ್ಕಾರಕ್ಕೆ ಹೇಳಿದ್ದೆವು. ಲಿಬರ್ಹಾನ್ ಆಯೋಗವು ಈ ಕುರಿತು ಏನೂ ಚಕಾರ ಎತ್ತಿಲ್ಲ.

ಈ ಪ್ರಕರಣದಲ್ಲಿ ನಂಬರ್ ಒನ್ ಅಪರಾಧಿ ಆರ್‌ಎಸ್‌ಎಸ್-ಬಿಜೆಪಿಯೇ. ನಂಬರ್ ಟು ಅಪರಾಧಿ ಕೇಂದ್ರ ಸರ್ಕಾರ. ರಕ್ಷಣೆ ನೀಡಲು ಅದು ಯಾವುದೇ ಜವಾಬ್ದಾರಿ ನಿಭಾಯಿಸಲಿಲ್ಲ.

17 ವರ್ಷಗಳ ನಂತರ ಈ ವರದಿಯು ಸಾರ್ವಜನಿಕರ ಮುಂದೆ ಬಂದಿರುವುದು ನಮ್ಮ ದೇಶದ ನ್ಯಾಯಾಂಗ ವ್ಯವಸ್ಥೆಯ ಹುಳುಕನ್ನು ಎತ್ತಿ ಹಿಡಿಯುತ್ತದೆ. ಶ್ರೀ ಕೃಷ್ಣ ವರದಿಯನ್ನು ಇಂದಿಗೂ ಕೂಡ ಕಾಂಗ್ರೆಸ್ ಸರ್ಕಾರ ಅನುಷ್ಠಾನ ಮಾಡಿಲ್ಲ. ನಾವು ಈ ಕುರಿತು ವಿಶೇಷವಾಗಿ ಹೇಳುತ್ತಲೇ ಬಂದಿದ್ದೇವೆ.

ಕೇಂದ್ರ ಸರ್ಕಾರ ಈ ವರದಿಗಳ ಅನುಷ್ಠಾನವನ್ನು ಹೇಗೆ ಮಾಡುತ್ತೇನೆಂದು ಸ್ಪಷ್ಟಪಡಿಸಬೇಕು.

ಪ್ರಶ್ನೆ: ಬಿಜೆಪಿ-ಆರ್‌ಎಸ್‌ಎಸ್-ವಿಹೆಚ್‌ಪಿ ಹೇಗೆ ವಂಚಿಸಿ ಈ ದುಷ್ಕೃತ್ಯ ಎಸಗಿದವು?

ಪ್ರಕಾಶ್ ಕಾರಟ್: ಕೇಂದ್ರ ಸರ್ಕಾರ ಈ ಕಾರ್ಯಕರ್ತರು ಮಸೀದಿಯೊಳಗೆ ರಾಮನ ವಿಗ್ರಹಗಳನ್ನು ಇಟ್ಟುಕೊಳ್ಳಲು ಅವಕಾಶ ನೀಡಿತು. ನಾವು ಇದನ್ನು ವಿರೋಧಿಸಿದಾಗ ಇದು ಕೇವಲ ತಾತ್ಕಾಲಿಕ ಏರ್ಪಾಟು ಎಂದು ಕೇಂದ್ರ ಸರ್ಕಾರವೇ ವಾದಿಸಿತು. ಇದರಿಂದ ಇನ್ನಷ್ಟು ಉತ್ಸುಕಗೊಂಡ ಬಿಜೆಪಿ- ಆರ್‌ಎಸ್‌ಎಸ್- ವಿಹೆಚ್‌ಪಿ ತಮ್ಮ ದುಷ್ಟ ಕಾರ್ಯವನ್ನು ಯಶಸ್ವಿಗೊಳಿಸಿದವು. ನಮ್ಮ ವಿರೋಧದಂತೆ ಕೇಂದ್ರ ಸರ್ಕಾರ ಅವುಗಳಿಗೆ ಅವಕಾಶ ನೀಡದೆ ಇರುವುದು ಧರ್ಮಕ್ಕೆ ಎಸೆದ ಸವಾಲೆಂದು ಬಿಂಬಿಸಿದವು. ಇಂದಿಗೂ ಕೂಡ ಅವು ಉತ್ತರಪ್ರದೇಶದಲ್ಲಿ ಪ್ರತಿ ಚುನಾವಣೆಯಲ್ಲೂ ಈ ವಿಷಯವನ್ನು ಮುಂದೆ ತರುತ್ತವೆ.

ಪ್ರಶ್ನೆ: ಪಕ್ಷದಿಂದ ಯಾವುದಾದರೂ ಆಂದೋಲನವನ್ನು ಈ ಕುರಿತು ಮಾಡಲಾಗುವುದೇ?

ಪ್ರಕಾಶ್ ಕಾರಟ್: ನಾವು ಕೋಮುವಾದಿಗಳ ಈ ದುಷ್ಕೃತ್ಯ ಕುರಿತು ನಿರಂತರವಾಗಿ ಪ್ರಶ್ನೆಗಳನ್ನು ಎತ್ತುತ್ತಲೇ ಬಂದಿದ್ದೇವೆ. ಖಂಡಿತವಾಗಿಯೂ ನಾವು ಇತರೆ ಪಕ್ಷಗಳೊಂದಿಗೆ ವರದಿಯ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ಹೋರಾಟ ಹಮ್ಮಿಕೊಳ್ಳುತ್ತೇವೆ.

ಪ್ರಶ್ನೆ: ವರದಿಯನ್ನು ಲೋಕಸಭೆಯಲ್ಲಿ ಮಂಡಿಸುವ ಮೊದಲೇ ಸೋರಿಕೆಯಾಗಿದೆಯೆಂದು ಕೂಗಾಟ ನಡೆಯುತ್ತಿದೆಯಲ್ಲ?

ಪ್ರಕಾಶ್ ಕಾರಟ್: ಹೌದು ವರದಿ ಸೋರಿಕೆಯಾಗಿದೆ. ಆದರೇನು ಮಾಡುವುದು? ಆಗಿದ್ದೇನೋ ಆಗಿದೆ. ಆದರೆ, ಬಿಜೆಪಿಯು ಈ ವರದಿಯ ಮಂಡನೆಯನ್ನು ಒಂದು ದಿಕ್ಕುತಪ್ಪಿಸುವ ತಂತ್ರಗಾರಿಕೆ ಎಂದು ಹೇಳುತ್ತಿದೆ. ಸರ್ಕಾರ ತಾನು ವರದಿಯನ್ನು ಚಳಿಗಾಲದ ಅಧಿವೇಶನದಲ್ಲಿ ಮಂಡಿಸುವುದಾಗಿ ಹೇಳಿತ್ತು. ಈಗ ಕೇಂದ್ರ ಸರ್ಕಾರ ವರದಿಯ ಅನುಷ್ಠಾನಕ್ಕಾಗಿ ತಾನು ಏನು ಕ್ರಮ ಕೈಗೊಳ್ಳುತ್ತೇನೆಂದು ಹೇಳಬೇಕಿದೆ.

ಪ್ರಶ್ನೆ: ಲಿಬರ್ಹಾನ್ ಆಯೋಗಕ್ಕೂ ಕೂಡ ಶ್ರೀ ಕೃಷ್ಣ ಆಯೋಗಕ್ಕೆ ಆದಂತೆ ಮೂಲೆ ಸೇರುವ ಗತಿ ಒದಗಿ ಬರುವುದೇ?


ಪ್ರಕಾಶ್ ಕಾರಟ್: ಎರಡೂ ವರದಿಗಳನ್ನು ಅನುಷ್ಠಾನಗೊಳಿಸಬೇಕೆಂದು ನಾವು ಒತ್ತಾಯಿಸುತ್ತೇವೆ. ಈ ದುಷ್ಕೃತ್ಯಗಳಲ್ಲಿ ಭಾಗಿಯಾಗಿರುವ ಪೊಲೀಸರು, ಅಧಿಕಾರಿಗಳು, ರಾಜಕಾರಣಿಗಳು ಎಲ್ಲರ ವಿರುದ್ಧ ಕ್ರಮ ಜರುಗಿಸಬೇಕು. ಈ ಪ್ರಕರಣದಲ್ಲಿ ಹಲವು ಅಡೆತಡೆಗಳು ಬಂದಿವೆ. ಲಕ್ನೋ ನ್ಯಾಯಾಲಯದಲ್ಲಿ ಮೊದಲಿಗೆ ದೋಷಾರೋಪಣೆ ಪಟ್ಟಿ ಸಲ್ಲಿಸಲಾಗಿತ್ತು. ಆದರೆ, ತಾಂತ್ರಿಕ ಕಾರಣವೊಡ್ಡಿ, ಉಚ್ಚ ನ್ಯಾಯಾಲಯದಲ್ಲಿ ಹೊಸ ದೋಷಾರೋಪಣಾ ಪಟ್ಟಿ ಸಲ್ಲಿಸಲಾಯಿತು. ಇಲ್ಲಿ ಮೊದಲಿನ ದೋಷಾರೋಪಣಾ ಪಟ್ಟಿಯಲ್ಲಿದ್ದ ಹಲವು ಅಂಶಗಳನ್ನು ಕೈಬಿಡಲಾಯಿತು. ಒಟ್ಟಿನಲ್ಲಿ ಕಾಂಗ್ರೆಸ್ ಪಕ್ಷ ತಾನೊಂದು ಧರ್ಮನಿರಪೇಕ್ಷಿತ ಪಕ್ಷವೆಂದು ಕರೆದುಕೊಂಡರೂ ಅದಕ್ಕೆ ಕೋಮುವಾದಿಗಳ ವಿರುದ್ಧ ಕ್ರಮ ಕೈಗೊಳ್ಳುವ ಯಾವುದೇ ಇಚ್ಛಾ ಶಕ್ತಿ ಇಲ್ಲ.

ಪುಟ 15 ಕ್ಕೆ

ಲಿಬರ್ಹಾನ್ ಆಯೋಗದ ಮುಂದೆ ಕಾಂ. ಜ್ಯೋತಿಬಸು ನೀಡಿದ ಹೇಳಿಕೆ

"ಅಯೋಧ್ಯೆಯಲ್ಲಿರುವ ಬಾಬ್ರಿ ಮಸೀದಿಯನ್ನು ಕರಸೇವಕರು ಧ್ವಂಸ ಮಾಡಲಿದ್ದಾರೆ ಎಂಬ ವರದಿಗಳು ದಟ್ಟವಾಗಿ ಕೇಳಿಬಂದಿತ್ತು. ಈ ಹಿನ್ನೆಲೆಯಲ್ಲಿ 1992ರ ನವೆಂಬರ್ 23ರಂದು ರಾಷ್ಟ್ರೀಯ ಸಮಗ್ರತಾ ಮಂಡಳಿ ಸಭೆಯನ್ನು ಆಗಿನ ಪ್ರಧಾನ ಮಂತ್ರಿ ಪಿ.ವಿ. ನರಸಿಂಹ ರಾಯರು ಕರೆದಿದ್ದರು. ಸಿಪಿಐಎಂ ಪರವಾಗಿ ಪ್ರಧಾನ ಕಾರ್ಯದರ್ಶಿ ಹರಕಿಷನ್ ಸಿಂಗ್ ಸುರ್ಜಿತ್ ಹಾಗೂ ನಾನು ಭಾಗವಹಿಸಿದ್ದೆವು. ಬಿಜೆಪಿಯಿಂದ ಯಾರೊಬ್ಬರೂ ಭಾಗವಹಿಸಿರಲಿಲ್ಲ. ಬಾಬರಿ ಮಸೀದಿಯನ್ನು ರಕ್ಷಿಸಲು ಸಾಧ್ಯವಿರುವ ಎಲ್ಲ ಅಗತ್ಯ ಕ್ರಮ ಕೈಗೊಳ್ಳುವ ಅಧಿಕಾರವನ್ನು ಈ ಸಭೆಯಲ್ಲಿ ಪ್ರಧಾನಿ ನರಸಿಂಹರಾವ್‌ಗೆ ಅವಿರೋಧವಾಗಿ ನೀಡಲಾಯಿತು. ಒಂದು ವೇಳೆ, ಅಂತಹ ಕಠಿಣ ಪರಿಸ್ಥಿತಿ ಒದಗಿ ಬಂದಲ್ಲಿ ಉತ್ತರ ಪ್ರದೇಶದಲ್ಲಿ ಸಂವಿಧಾನದ 356ನೇ ವಿಧಿಯನ್ನು ಬಳಸುವಂತೆ ಸಿಪಿಐಎಂ ಪರವಾಗಿ ನಾವು ಸೂಚಿಸಿದೆವು. ಸಾಮಾನ್ಯವಾಗಿ ಇತರ ಸಂದರ್ಭಗಳಲ್ಲಿ ಈ ವಿಧಿಯ ಬಳಕೆಗೆ ನಮ್ಮ ಪಕ್ಷದಿಂದ ವಿರೋಧವಿತ್ತು.

ಘೋರ ದುರಂತದ ಎರಡು ದಿನಗಳ ಮೊದಲು, ಅಂದರೆ 1992ರ ಡಿಸೆಂಬರ್ 4ರಂದು ನಾನು ಪ್ರಧಾನಿಗೆ ದೂರವಾಣಿ ಕರೆ ಮಾಡಿ ಅಯೋಧ್ಯೆಯಲ್ಲಿ ಕರಸೇವಕರು ಸೇರುತ್ತಿರುವ ಬಗ್ಗೆ ಆತಂಕ ವ್ಯಕ್ತಪಡಿಸಿದ್ದೆ. ಮಸೀದಿಯನ್ನು ರಕ್ಷಿಸಲು ತಕ್ಷಣ ಏನಾದರೂ ಕ್ರಮ ಕೈಗೊಳ್ಳುವ ಮನವಿಯನ್ನೂ ಮಾಡಿದ್ದೆ. ಆಗ ನರಸಿಂಹರಾವ್ ಅವರು, ಕಾಂಗ್ರೆಸ್‌ನ ಕಾರ್ಯಕಾರಿ ಸಮಿತಿ ಈ ವಿಷಯ ಚರ್ಚಿಸಲು ಸಭೆ ಸೇರುತ್ತಿದೆ ಎಂದು ಹೇಳಿದರು. ಆ ಬಳಿಕ ಏನಾಯಿತು ಎಂಬುದು ನಿಮಗೂ ಚೆನ್ನಾಗಿಯೇ ತಿಳಿದಿದೆ.



ಪುಟ 4 ಕ್ಕೆ


ಸಂಪಾದಕೀಯ

ಯೋಜಿತ ಕೃತ್ಯಗಳಿಗಾಗಿ ನ್ಯಾಯಾಲಯದ ಆದೇಶ ಉಲ್ಲಂಘನೆ

ಬಾಬಾಬುಡನ್‌ಗಿರಿಯಲ್ಲಿ ಸಂಘ ಪರಿವಾರದ ದತ್ತ ಜಯಂತಿ ಹೆಸರಿನ 'ಅತಿಕ್ರಮ'ದ ಚಟುವಟಿಕೆಗಳಿಗೆ ಅವಕಾಶವನ್ನು ನೀಡುವುದರ ಮೂಲಕ ರಾಜ್ಯದ ಬಿಜೆಪಿ ಸರ್ಕಾರವು ಸರ್ವೋಚ್ಛ ನ್ಯಾಯಾಲಯದ ತೀರ್ಪನ್ನು ಉಲ್ಲಂಘಿಸಿದೆ. ಆರ್‌ಎಸ್‌ಎಸ್‌ನ ಯೋಜಿತ ಕುಕೃತ್ಯಗಳಿಗೆ ಆಡಳಿತ ಯಂತ್ರವನ್ನು ದುರ್ಬಳಕೆ ಮಾಡಿದೆ.

ಡಿಸೆಂಬರ್ 1 ಮತ್ತು ಅದರ ಹಿಂದಿನ ದಿನಗಳಲ್ಲಿ ಬಾಬಾಬುಡನ್‌ಗಿರಿಯ ಶ್ರೀ ಗುರು ದತ್ತಾತ್ರೇಯ ಬಾಬಾಬುಡನ್ ಸ್ವಾಮಿ ದರ್ಗಾ ಪೀಠದ ಪರಿಸರದಲ್ಲಿ ದತ್ತಮಾಲೆ ಶೋಭಾಯಾತ್ರೆ, ದತ್ತಯಜ್ಞ, ದತ್ತ ವಿಗ್ರಹ ಪೂಜೆ, ಅನಸೂಯ ಜಯಂತಿ, ದತ್ತ ಜಯಂತಿ ಆಚರಣೆಗಳಿಗೆ ಅವಕಾಶ ಕಲ್ಪಿಸಿದ್ದು ಕಾನೂನು ಹಾಗೂ ಅಲ್ಲಿಯ ಪರಂಪರೆಗೆ ವಿರುದ್ಧವಾದುದು. ವಿಶೇಷವಾಗಿ ಗುಹೆ ಕುಸಿದಿರುವ ಹಿನ್ನೆಲೆಯಲ್ಲಿ ಈ ವರ್ಷ ಗುಹೆಯಲ್ಲಿರುವ ದರ್ಗಾ ಪೀಠದಲ್ಲಿದ್ದ ಪಾದುಕೆಗಳನ್ನು ತನ್ನ ವಶದಲ್ಲಿರಿಸಿಕೊಂಡಿದ್ದ ಜಿಲ್ಲಾಡಳಿತವು ಅವುಗಳನ್ನು ಬಜರಂಗದಳ, ವಿಶ್ವ ಹಿಂದೂ ಪರಿಶತ್‌ಗಳ ಒತ್ತಾಯದಂತೆ ಗುಹೆಯ ಹೊರಗೆ ವಿಶೇಷ ಮಂಟಪದಲ್ಲಿ ಪೂಜೆಗೆ ನೀಡಿದೆ. ಇದು 'ದರ್ಗಾ ಪೀಠ'ದ ಪರಂಪರೆಗೂ, ಯಥಾಸ್ಥಿತಿ ಕಾಯ್ದುಕೊಳ್ಳಬೇಕು ಎಂಬ ನ್ಯಾಯಾಲಯದ ಆದೇಶಕ್ಕೂ ವಿರುದ್ಧವಾದುದು.

ಮೊದಲನೆಯದಾಗಿ 'ದತ್ತಜಯಂತಿ' ಮತ್ತು ಅದಕ್ಕೆ ಹೊಂದಿಕೊಂಡು ನಡೆಸಲಾಗುತ್ತಿರುವ ಸಂಘ ಪರಿವಾರದ ಹಲವು ಆಚರಣೆಗಳು ಹಿಂದೆಂದೂ ಇಲ್ಲದ, ಹೊಸದಾಗಿ ಹುಟ್ಟುಹಾಕಿದ್ದಾಗಿವೆ. ಸೂಫಿ, ಸಂತ ಪರಂಪರೆಯ ಈ ಗಿರಿಯಲ್ಲಿ ನೂರಾರು ವರ್ಷಗಳಿಂದ ನಡೆದುಬಂದದ್ದು ವರ್ಷಕ್ಕೊಮ್ಮೆ ಉರುಸ್ ಮಾತ್ರ. ಅಯೋಧ್ಯೆಯ ಬಾಬ್ರಿ ಮಸೀದಿ ವಿವಾದದ ಹೊತ್ತಿನಲ್ಲಿ, ನೂರಾರು ಅಯೋಧ್ಯೆಗಳನ್ನು ಸೃಷ್ಟಿಸುವ ಸಂಘ ಪರಿವಾರದ ಕೃತ್ಯಗಳ ಹಿನ್ನೆಲೆಯಲ್ಲಿ ಇಲ್ಲಿ ವಿವಾದ ಹುಟ್ಟಿಸಲಾಯಿತಲ್ಲದೇ ಅದಕ್ಕಾಗಿ ದತ್ತ ಜಯಂತಿಯಂತಹ ಹೊಸ ಆಚರಣೆಗಳನ್ನು ಆರಂಭಿಸಲಾಯಿತು. ಇಲ್ಲಿನ ಹಿಂದಿದ್ದ ಆಚರಣೆಗಳ ಬಗ್ಗೆ ರಾಜ್ಯದ ಹೈಕೋರ್ಟ್ ನಂತರ ಸುಪ್ರಿಂ ಕೋರ್ಟ್‌ಗಳೂ ಸಹ ಎಲ್ಲವನ್ನೂ ವಿವರವಾಗಿ ಪರಿಶೀಲಿಸಿ ಧಾರ್ಮಿಕ ದತ್ತಿ ಆಯುಕ್ತರು 1989 ಫೆಬ್ರವರಿ 25 ರಂದು ಅಲ್ಲಿದ್ದ ಆಚರಣೆಗಳ ಬಗ್ಗೆ ಪಟ್ಟಿ ಮಾಡಿದ್ದನ್ನೂ ಮಾನ್ಯ ಮಾಡಿದೆ ಮತ್ತು 1975ರ ಹಿಂದಿದ್ದ ಆಚರಣೆಗಳಿಗೆ ಮಾತ್ರವೇ ಸೀಮಿತಗೊಳ್ಳಬೇಕೆಂದೂ ಆದೇಶಿಸಿದೆ. ಇದರದಲ್ಲಿ ದತ್ತ ಜಯಂತಿ ಇತ್ಯಾದಿಗಳು ಇಲ್ಲವೇ ಇಲ್ಲ. 2008 ರ ಡಿಸೆಂಬರ್ 1 ರಂದು ಸುಪ್ರಿಂ ಕೋರ್ಟ್‌ನ ದ್ವಿಸದಸ್ಯ ಪೀಠವೂ ಸಹ ಬಾಬಾಬುಡನ್‌ಗಿರಿಯ ಧಾರ್ಮಿಕ ಸ್ವರೂಪದ ಬಗ್ಗೆ ಎತ್ತಿದ ಪ್ರಶ್ನೆಯ ಹಿನ್ನೆಲೆಯಲ್ಲಿ ತಾನು ಮುಂದಿನ ತೀರ್ಪು ನೀಡುವವರೆಗೂ ಯಾವುದೇ ಹೊಸ ಆಚರಣೆಗೆ ಅವಕಾಶ ನೀಡಬಾರದೆಂದೂ, 1975ರ ಹಿಂದಿನ ಆಚರಣೆಗಳಿಗೆ ಮಾತ್ರ ಸೀಮಿತವಾಗಿ ಯಥಾಸ್ಥಿತಿಯನ್ನು ಕಾಯ್ದುಕೊಳ್ಳಬೇಕೆಂದೂ ಆದೇಶಿಸಿದೆ. ಹಿಂದೆ ನ್ಯಾಯಾಲಯ ನೀಡಿದ ತೀರ್ಪಿನ ನಂತರವೂ ಸೌಹಾರ್ದತೆಯ ಈ ಕೇಂದ್ರವನ್ನು ಕೋಮುವಾದೀಕರಣಗೊಳಿಸಲು ಪ್ರತಿಸಲವೂ ಹೊಸ ಆಚರಣೆಗಳನ್ನು ಹುಟ್ಟುಹಾಕುತ್ತಲೇ ಬರಲಾಗಿದೆ. ಆದ್ದರಿಂದ ಇದಕ್ಕೆ ಸಂಬಂಧಿಸಿದ ಯಾವುದೇ ಹೊಸ ಆಚರಣೆಗಳು ಗಿರಿಯ ಮೇಲಾಗಲಿ, ಜಿಲ್ಲೆಯ ಪರಿಸರ ಹಾಗೂ ರಾಜ್ಯದ ಎಲ್ಲೇ ಆಗಲಿ ನಡೆಸುವುದು ಕಾನೂನು ಬಾಹೀರ. ಆದ್ದರಿಂದ ಧಾರ್ಮಿಕತೆ ಹೆಸರಿನಲ್ಲಿ ಹೊಸ ಆಚರಣೆಗಳ ಮೂಲಕ ಕೋಮುವಾದಿ ಉದ್ರಿಕ್ತತೆ ಹೆಚ್ಚಿಸುವ ಸಂಘ ಪರಿವಾರದ ಚಟುವಟಿಕೆಗಳನ್ನು ಕಟ್ಟುನಿಟ್ಟಾಗಿ ನಿರ್ಬಂಧಿಸುವುದು ಸರ್ಕಾರದ ಹೊಣೆಯಾಗಿದೆ.




ಗುಹೆಯ ಒಳಗೆ ಇರುವ 'ದರ್ಗಾ - ಪೀಠ' ವಿರುವ ಪಾದುಕೆ ಸ್ಥಳಕ್ಕೆ ಕೇವಲ ಅಲ್ಲಿಯ ಆರಾಧನೆ ನಡೆಸುವ ಮುಜಾವರ್, ಶಾಖಾದ್ರಿಯಾಗಿರುವ ಮುಖ್ಯಸ್ಥ ಸಜಾದ್ ಎನಿಶಾನ್ ಹೊರತುಪಡಿಸಿದರೆ ಬೇರಾರಿಗೂ ಪ್ರವೇಶವಿಲ್ಲ. ಒಂದು ವೇಳೆ ಯಾವುದಾದರೂ ಧಾರ್ಮಿಕ ಮುಖ್ಯಸ್ಥರು ಪ್ರವೇಶಿಸುವುದಿದ್ದರೂ ಅದು ಶಾಖಾದ್ರಿಗಳ ಜೊತೆಯಲ್ಲಿ. ಆದರೆ ಇವರಾರೂ ಇಲ್ಲದೇ ಈಗ

ಪುಟ 10 ಕ್ಕೆ

ಪರಿಷತ್ ಚುನಾವಣೆ ಕಸರಸ್ತು

ಸ್ಥಳೀಯ ಸಂಸ್ಥೆಗಳಿಂದ ಕರ್ನಾಟಕದ ವಿಧಾನ ಪರಿಷತ್‌ಗೆ ಚುನಾವಣೆಗಳು ಘೋಷಿತಗೊಂಡ ಹಿನ್ನೆಲೆಯಲ್ಲಿ ರಾಜಕೀಯ ಚಟುವಟಿಕೆಗಳಲ್ಲೀಗ ಚುರುಕು. ಡಿಸೆಂಬರ್ 19 ರಂದು 25 ಸ್ಥಾನಗಳಿಗೆ ಮತದಾನ, ನಾಮಪತ್ರ ಸಲ್ಲಿಕೆಯಂತಹ ಚುನಾವಣೆ ಪ್ರಕ್ರಿಯೆಗಳೂ ಆರಂಭ. ಹೀಗಾಗಿ ಪ್ರಮುಖ ರಾಜಕೀಯ ಪಕ್ಷಗಳಲ್ಲಿ ಸ್ಥಾನ ಹೊಂದಾಣಿಕೆ, ಅಭ್ಯರ್ಥಿಗಳ ಆಯ್ಕೆಯ ಕಸರತ್ತು ಜೋರಾಗಿಯೇ ನಡೆಯಿತು. ಪ್ರಸಕ್ತವಾಗಿ ಪರಿಷತ್‌ನಲ್ಲಿ ಒಟ್ಟು 75 ರಲ್ಲಿ ಕಾಂಗ್ರೆಸ್ 29, ಜೆಡಿ(ಎಸ್)ನ 12, ಬಿಜೆಪಿಯಿಂದ 25 ಶಾಸಕರಿದ್ದಾರೆ. ಜಿಲ್ಲಾ ಪಂಚಾಯತ್, ತಾಲ್ಲೂಕು, ಗ್ರಾಮ ಪಂಚಾಯತ್ ಹಾಗೂ ಪುರ, ನಗರಸಭೆ ಸದಸ್ಯರು ಒಳಗೊಂಡು ಒಟ್ಟು ಮತದಾರರು 99,788. (ಮಹಿಳೆಯರು 42,891, ಪುರುಷರು 56,897) ಇದರಲ್ಲಿ ಜಿಲ್ಲಾ, ತಾಲ್ಲೂಕು ಪಂಚಾಯತ್ ಹಂತದಲ್ಲಿ ಪಕ್ಷದ ಚಿಹ್ನೆಗಳಿಂದ ಆಯ್ಕೆಯಾದ ಸದಸ್ಯರಿದ್ದಾರೆ. ಗ್ರಾಮ ಪಂಚಾಯ್ತಿ ಹಂತದಲ್ಲಿ ಪಕ್ಷ ಚಿಹ್ನೆಗಳಿಲ್ಲ. ಆದಾಗ್ಯೂ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಮೊದಲ ಸ್ಥಾನ ಕಾಂಗ್ರೆಸ್, ಜೆಡಿ(ಎಸ್) ಎರಡನೆ, ಇದರ ಹತ್ತಿರದಲ್ಲಿ ಬಿಜೆಪಿ ಮೂರನೆಯ ಸ್ಥಾನದಲ್ಲಿತ್ತು. ವಿಧಾನಸಭಾ ಶಾಸಕರ ಸಂಖ್ಯೆಗೆ ಅನುಗುಣವಾಗಿ ಬಿಜೆಪಿಯು ಸ್ಥಳೀಯ ಮಟ್ಟದಲ್ಲಿ ತನ್ನ ಬಲ ಹೊಂದಿರಲಿಲ್ಲ ಎಂಬುದು ಸ್ಪಷ್ಟವಾಗಿತ್ತು. ಆದರೆ ಈಗ ಹಲವಾರು ಬದಲಾವಣೆಗಳಾಗಿವೆ. ಬಿಜೆಪಿಯ ಆಪರೇಷನ್ ಕಮಲ, ಪಕ್ಷಾಂತರ, ಭ್ರಷ್ಟತೆಗಳು ಪರಿಸ್ಥಿತಿಯನ್ನು ಸಾಕಷ್ಟು ಮಲೀನಗೊಳಿಸಿವೆ. ಈ ನಡುವೆ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಸ್ವಂತ ಬಲದ ಮೇಲೆ ಅಧಿಕಾರ ಹಿಡಿದಿದೆ. ಕಿತ್ತಾಟದ ನಡುವೆಯೂ ಆಡಳಿತ ನಡೆಸಿದೆ. ಹೀಗಾಗಿ ಅಧಿಕಾರ, ಹಣ, ಅಕ್ರಮ ಅನೈತಿಕೆಗಳ ಬಲವಿರುವ ಬಿಜೆಪಿಯನ್ನು ಎದುರಿಸಬೇಕಿರುವುದು ಉಳಿದ ಪಕ್ಷಗಳಿಗೆ ಸಾಕಷ್ಟು ಒತ್ತಡ ಸೃಷ್ಟಿಸಿದೆ.



ಸ್ಥಾನ ಹೊಂದಾಣಿಕೆ:

ಈ ವಿಧಾನಪರಿಷತ್‌ನ ಚುನಾವಣೆಯಲ್ಲಿ ಬಿಜೆಪಿಗೆ ಎದುರಾಗಿ ಕಾಂಗ್ರೆಸ್ ಹಾಗೂ ಜೆಡಿ(ಎಸ್) ಪಕ್ಷಗಳು ಸ್ಥಾನ ಹೊಂದಾಣಿಕೆಯ ಮೈತ್ರಿಯನ್ನು ಮಾಡಿಕೊಂಡಿವೆ. ಅದರಂತೆ 17 ಸ್ಥಾನಗಳಲ್ಲಿ ಕಾಂಗ್ರೆಸ್, 8 ರಲ್ಲಿ ಜೆಡಿ(ಎಸ್) ಎಂಬುದು ಪ್ರಾಥಮಿಕ ಒಪ್ಪಂದವಾಗಿದೆ. ಆದರೂ ಬೆಂಗಳೂರು ಗ್ರಾಮಾಂತರ, ಚಿತ್ರದುರ್ಗ ಕ್ಷೇತ್ರಗಳಲ್ಲಿ ಎರಡು ಪಕ್ಷಗಳು 'ಸ್ನೇಹಪೂರ್ವಕ' (!)ವಾಗಿ ಸ್ಪರ್ಧಿಸಲಿವೆಯಂತೆ. ಈ ಹೊಂದಾಣಿಕೆಗೆ ಎರಡೂ ಪಕ್ಷಗಳು ನೀಡುವ ಕಾರಣ 'ಕೋಮುವಾದಿ ಬಿಜೆಪಿ ವಿರುದ್ಧ ಸಂಘಟಿತ ಚುನಾವಣಾ ಹೋರಾಟ ಎಂದು ಹೇಳಿಕೊಂಡಿವೆ.

ಇದು ಒಂದೆಡೆ ಪರಸ್ಪರರ ಶಕ್ತಿ ಹಂಚುಹೋಗದೇ ಒಂದೆಡೆ ಸೇರಿ ಗೆಲುವಿನ ಸಾಧ್ಯತೆ ಬಲ ಹೆಚ್ಚಲಿದೆಯೆಂಬುದು ಒಂದು ಲೆಕ್ಕಾಚಾರವಾದರೆ, ಬಿಜೆಪಿ ಬಲವಿರುವಲ್ಲಿ ಎದುರಿಸಲು ಇದರಿಂದ ಸಾಧ್ಯ ಎಂಬುದು ಮತ್ತೊಂದು. ಈ ಹಿಂದೆ ಕೆಲವು ಕ್ಷೇತ್ರಗಳಲ್ಲಿ ಕಾಂಗ್ರೆಸ್, ಜೆಡಿ(ಎಸ್) ನಡುವೆ ಪ್ರಬಲ ಪೈಪೋಟಿ ನಡೆಯುತ್ತಿತ್ತು. ಈಗಿನ ಮೈತ್ರಿಯಿಂದಾಗಿ ಎಲ್ಲಾ ಕ್ಷೇತ್ರಗಳಲ್ಲಿಯೂ ಬಹುತೇಕ ಬಿಜೆಪಿಯು 'ಜಾತ್ಯಾತೀತರ' ಮೈತ್ರಿಗೆ ಪ್ರಬಲ ಸ್ಪರ್ಧಿಯಾಗಲಿದೆ. ಅಲ್ಲೆಲ್ಲಾ ಕಾಂಗ್ರೆಸ್ ವಿರುದ್ಧವಾಗಿರುವ ಶಕ್ತಿಗಳು ಹೇಗೆ ಮತದಾನ ಮಾಡಲಿವೆಯೆಂಬುದು ಒಂದು ಸಾಮಾನ್ಯ ಕುತೂಹಲದ ಅಂಶವಾಗಿದೆ.

ಜನರ ಪ್ರಶ್ನೆಗಳಿಲ್ಲ:

ಇಂತಹ ಸ್ಪರ್ಧೆಗೆ ಮಿಶ್ರ ಪ್ರತಿಕ್ರಿಯೆಗಳಿವೆ. ಆದರೆ ಬಂಡಾಯವನ್ನು ಮೂರು ಪಕ್ಷಗಳೂ ಅನುಭವಿಸಿವೆ. ಅಧಿಕಾರದ ಹಂಬಲದಲ್ಲಿರುವವರನ್ನು ಬಿಜೆಪಿ ಸೆಳೆಯಲು ಮುಂದಾಗಿವೆ. ಇದಕ್ಕೆ ಹುಮ್ನಾಬಾದ್‌ನ ಕಾಂಗ್ರೆಸ್ ಹಿರಿಯ ನಾಯಕ ಬಸವರಾಜಪಾಟಿಲ್ ಒಂದು ಉದಾಹರಣೆ. ಇಂತಹ ಬಂಡಾಯ, ಪಕ್ಷಾಂತರಕ್ಕೆ ಯಾವುದೇ ರಾಜಕೀಯ ನೀತಿ ಕಾರಣಗಳಿಲ್ಲ. ಅಧಿಕಾರದಾಹವಷ್ಟೇ ಎಂಬುದು ಈಗಲೂ ಮುಖ್ಯ ಅಂಶವಾಗಿದೆ.

ಗಮನಿಸಬೇಕಾದ ಅಂಶಗಳು:

ಈ ಮೈತ್ರಿ ಸಂದರ್ಭದಲ್ಲಿಯೂ ಈ ಎರಡು ಪಕ್ಷಗಳಿಗೂ, ಬಿಜೆಪಿಗೂ ಚುನಾವಣಾ ಹೋರಾಟಕ್ಕೆ ಮುಖ್ಯವಾಗಿ ಜನತೆಗೆ-ರಾಜ್ಯಕ್ಕೆ ಸಂಬಂಧಿಸಿದ ವಿಷಯಗಳು ಇಲ್ಲ. ಬಹಳಷ್ಟು ಸಲ ವಿಧಾನ ಪರಿಷತ್‌ನ ಸ್ಥಾನ ರಾಜಕೀಯ ಪುನರ್ವಸತಿ ಕಲ್ಪಿಸುವ ಅಥವಾ ತೃಪ್ತಿಪಡಿಸುವ ತಾಣಗಳಾಗಿಯೂ ಮಾರ್ಪಟ್ಟು, ಹೇಳಿಕೊಂಡಷ್ಟಾದರೂ ಪ್ರಬುದ್ಧತೆ ಕಾಣೆಯಾಗಿರುವುದು ಸಾಮಾನ್ಯ.

ಹಿಂದೆ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಜೆಡಿ(ಎಸ್) ಪಕ್ಷವು ಕಾಂಗ್ರೆಸ್‌ನೊಂದಿಗೆ ಒಪ್ಪಂದ ಮಾಡಿಕೊಳ್ಳಲು, ಒಂದು ಹಂತದಲ್ಲಿ ಯತ್ನಿಸಿತ್ತು. ಜೊತೆಗೆ ಕಾಂಗ್ರೆಸ್, ಬಿಜೆಪಿಗೆ ಪರ್ಯಾಯವಾಗಿ ಮೂರನೆಯ ಶಕ್ತಿಯನ್ನು ಬಲಪಡಿಸಲೆಂದು ಎಡಪಕ್ಷಗಳೊಂದಿನ ಮೂರನೆಯ ಪರ್ಯಾಯದೊಂದಿಗೆ ಗುರುತಿಸಿಕೊಂಡಿತ್ತು. ಚುನಾವಣಾ ಫಲಿತಾಂಶದ ಬಳಿಕ ಮತ್ತೆ ಯು.ಪಿ.ಎ ಮೈತ್ರಿಗೆ ಹಾತೊರೆದು ಸಚಿವ ಸ್ಥಾನಕ್ಕೆ ಯತ್ನಿಸಿ ವಿಫಲವಾಗಿತ್ತು. ಹೀಗೆ ಒಳಗೊಳಗೆ ನಡೆಯುತ್ತಿದ್ದ ಕಸರತ್ತುಗಳು ಈಗ ಈ ಚುನಾವಣೆಯಲ್ಲಿ ಬಹಿರಂಗವಾಗಿ ಏರ್ಪಟ್ಟಿದೆ.

ಪುಟ 10 ಕ್ಕೆ

ಡಬಲ್ ಗಿಫ್ಟ್ ದಮಾಕ

ರೈತರಿಗೆ ಮುಗಸಟ್ಟೆ ಕರೆಂಟ್ ಕೊಡ್ತೀವಿ ಅಂತ ಕಿವಿಗೆ ಹೂವಿಟ್ಟು, ಪಟ್ಟಕ್ಕೇರಿದ ಬಿ ಜೇ ಪಿ ಕೊಟ್ಟಿರುವ ಇನ್ನೊಂದು ಡಬಲ್ ಗಿಫ್ಟ್ ನೋಡಿ ಹೇಗಿದೆ. ಒಂದು ಸಿಕ್ಕಾಪಟ್ಟೆ ಕರೆಂಟ್ ಕಟ್ಟು! ಇನ್ನೊಂದು ಕರೆಂಟ್ ರೇಟ್ ಏರಿಕೆಯ ಪೆಟ್ಟು!! ಕರೆಂಟ್ ಕಟ್ಟಿನಿಂದಾಗಿ ರೈತರಿಗೆ ಒಳ್ಳೆಯದೇ ಆಗಿದೆ. ರೈತರು ಏನೂ ಬೆಳೆ ಬೆಳೆಯದೆ ಇರುವುದರಿಂದ ಮಳೆ, ಗಿಳೆ ಬಂದು ಅವರ ಬೆಳೆ ಹಾನಿಯಾಗುವುದು ತಪ್ಪಿದೆ. ಕರೆಂಟ್ ಬೆಲೆ ಜಾಸ್ತಿಯಾದರೂ ಕರೆಂಟೇ ಇಲ್ಲದಿರುವುದರಿಂದ ರೈತರ ಮೇಲೆ ಬೆಲೆಯೇರಿಕೆ ಪರಿಣಾಮ ಇಲ್ಲ ಅಂತ ಕರೆಂಟ್ ಮಂತ್ರಿ ಹೇಳಿದ ಬಗ್ಗೆ ವರದಿಯಾಗಿಲ್ಲ.

★ ★ ★

ಅಪ್ಪಾ

ಏನ್ ಮಗು?

ಚಿನ್ನದ ಬೆಲೆ ದಾಖಲೆ ಮಟ್ಟಕ್ಕೆ ಏರಿದೆಯಂತೆ.

ಹೌದು ಮಗು.

ಬೆಳ್ಳಿ ಬೆಲೆ ದಾಖಲೆ ಮಟ್ಟಕ್ಕೆ ಏರಿದೆಯಂತೆ.

ಹೌದು ಮಗು. ಚಿನ್ನ ಬೆಳ್ಳಿ ಬೆಲೆ ದಾಖಲೆ ಅಂತ ದಿನಾ ಪೇಪರಲ್ಲಿ ಬರುತ್ತೆ. ಆದರೆ ಅಕ್ಕಿ, ಬೇಳೆ, ಬೆಲ್ಲ, ತರಕಾರಿ ಬೆಲೆಗಳು ದಿನ ದಿನವೂ ಏರುತ್ತಿದ್ದರೂ ಅದರ ಬಗ್ಗೆ ಪತ್ರಿಕೆಗಳಲ್ಲಿ ಸುದ್ದಿನೇ ಇರಲ್ವಲ್ಲ ಯಾಕೆ?

ಗೊತ್ತಿಲ್ಲ ಮಗು.

★ ★ ★

ಸರಕಾರವೇ ಹಾಲು, ವಿದ್ಯುತ್ತು, ಬಸ್ ದರಗಳನ್ನು ಏರಿಸಿದ ಸುದ್ದಿ ಹೀಗೆ ಬಂದು ಹಾಗೆ ಹೋಗುತ್ತಲ್ಲ ಯಾಕೆ?

ಶ್ರೀ

ಗೊತ್ತಿಲ್ಲ ಮಗು.

ದೇಶದ ಅತ್ಯಂತ ಶ್ರೀಮಂತರು ಯಾರು? ಅವರದು ಎಷ್ಟೆಷ್ಟು ಕೋಟಿ ಅಂತ ದೊಡ್ಡ ದೊಡ್ಡ ಸುದ್ದಿ ಬರ್ತಿರುತ್ತೆ.

ಹೌದು ಮಗು.

ಆದರೆ ಎಷ್ಟೆಷ್ಟು ಕೋಟಿ ಜನ ಹಸಿವಿನಿಂದ ಸಾಯ್ತಿದ್ದಾರೆ ಎಷ್ಟು ಕೋಟಿ ಜನರಿಗೆ ಒಪ್ಪತ್ತಿನ ಕೂಳಿಗೂ ಗತಿಯಿಲ್ಲ ಅಂತ ಸುದ್ದಿನೇ ಇರಲ್ವಲ್ಲ ಯಾಕೆ?

ಗೊತ್ತಿಲ್ಲ ಮಗು.

★ ★ ★

ಒಂದೊಂದು ಸಿನಿಮಾಕ್ಕೂ ಎಷ್ಟೆಷ್ಟು ಕೋಟಿ ಖರ್ಚಾಯ್ತು, ಒಬ್ಬೊಬ್ಬ ನಾಯಕ ನಟನಿಗೂ ಎಷ್ಟೆಷ್ಟು ಲಕ್ಷ ಸಂಭಾವನೆ, ಸಿನಿಮಾ ಗೋತಾ ಹೊಡೆದು ಎಷ್ಟು ನಷ್ಟ ಅಂತೆಲ್ಲ ಸುದ್ದಿ ಬರ್ತಾನೆ ಇರುತ್ತೆ.

ಹೌದು ಮಗು.

ರೈತರಿಗೆ ಬೆಳೆ ಬರದೆ, ಬಂದ ಬೆಳೆಗೆ ಸರಿಯಾದ ಬೆಲೆ ಸಿಗದೆ ಎಷ್ಟೆಷ್ಟು ನಷ್ಟ ಆಗ್ತಿದೆ ಅಂತ ಸುದ್ದಿನೇ ಇರಲ್ವಲ್ಲ ಯಾಕೆ?

ಗೊತ್ತಿಲ್ಲ ಮಗು.

ಕ್ರಿಕೆಟ್ ಆಟಗಾರರು ಏನೇನು ದಾಖಲೆ ಮಾಡಿದರು, ಎಷ್ಟೆಷ್ಟು ಕೋಟಿ ಸಂಪಾದಿಸಿದರು ಅಂತ ಸುದ್ದಿ ಬರ್ತಿರುತ್ತೆ.

ಹೌದು ಮಗು.

ಎಷ್ಟು ಕೋಟಿ ಜನ ಉದ್ಯೋಗ ಇಲ್ಲದೆ ಪರದಾಡುತ್ತಿದ್ದಾರೆ ಅಂತ ಸುದ್ದೀನೇ ಇರಲ್ಲವಲ್ಲ ಯಾಕೆ?

ಗೊತ್ತಿಲ್ಲ ಮಗು.

○

ಅಬರ್ಹಾನ್ ಮುಂದೆ ಜ್ಯೋತಿಬಸು ಹೇಳಿಕೆ

ಪುಟ 2 ರಿಂದ

ಉತ್ತರ ಪ್ರದೇಶ ಸರ್ಕಾರವನ್ನು ವಜಾಗೊಳಿಸಿದ ಬಳಿಕ, 1993 ಫೆಬ್ರವರಿ 3ರಂದು ಬಿಜೆಪಿ ನಾಯಕ ಕಲ್ಯಾಣ್ ಸಿಂಗ್ ಕೊಲ್ಕತಾದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡಿದರು. ಪೊಲೀಸ್ ಇಲಾಖೆ ಈ ಭಾಷಣವನ್ನು ದಾಖಲಿಸಿತ್ತು. ಅದರ ಹಿಂದಿ ಪಠ್ಯ ಮತ್ತು ಭಾಷಾಂತರಿಸಿದ ಇಂಗ್ಲಿಷ್ ಪಠ್ಯ ನನ್ನಲ್ಲಿದೆ. ಇದನ್ನು ನಾನು ಆಯೋಗಕ್ಕೆ ನೀಡುತ್ತಿದ್ದೇನೆ. ಮಸೀದಿ ಧ್ವಂಸಗೊಳಿಸಿದ ಬಗ್ಗೆ ಆ ಭಾಷಣದಲ್ಲಿ ಉಲ್ಲೇಖಿಸಿದ ಕೆಲ ಭಾಗಗಳನ್ನು ನಾನು ಇಲ್ಲಿ ತಮ್ಮ ಗಮನ ಸೆಳೆಯಲು ಬಯಸುತ್ತೇನೆ.

"ನನಗೆ ಈ ಘಟನೆಯ ಬಗ್ಗೆ ಎಳ್ಳಷ್ಟೂ ವಿಷಾದವಿಲ್ಲ ಅಥವಾ ಮಸೀದಿಯನ್ನು ಕೆಡವಿದ ಬಗ್ಗೆ ಬೇಸರವೂ ಇಲ್ಲ ಎಂದು ನಿಮ್ಮ ಮುಂದೆ ಹೇಳಲು ಬಯಸುತ್ತೇನೆ. ಮಸೀದಿ ಧ್ವಂಸಗೊಳಿಸಿದ ಆ ದಿನ ಒಂದು ಚಾರಿತ್ರಿಕ ದಿನ ಎಂದು ಘೋಷಿಸಲು ನನಗೆ ಹೆಮ್ಮೆ ಎನಿಸುತ್ತಿದೆ. ಮಿತ್ರರೇ, ಯಾವುದೇ ಸ್ಫೋಟಕಗಳನ್ನು ಬಳಸದೆ ಕೇವಲ ಐದು ಗಂಟೆ ಕರಸೇವಕರು ನಡೆಸಿದ ಕಾರ್ಯಾಚರಣೆಯಲ್ಲಿ ಮಸೀದಿಯನ್ನು ನಾಮಾವಶೇಷ ಮಾಡಲಾಯಿತು. ಇದು ದೇವರ ದಯೆಯಿಲ್ಲದೆ ನಡೆಯಲು ಸಾಧ್ಯವಿರಲಿಲ್ಲ. ನಾವು ಈ ಕೆಲಸಕ್ಕೆ ಒಂದು ವೇಳೆ ಗುತ್ತಿಗೆದಾರರು ಮತ್ತು ಕಾರ್ಮಿಕರನ್ನು ಬಳಸುತ್ತಿದ್ದರೆ, ಭಾರೀ ಪ್ರಮಾಣದ ಅವಶೇಷಗಳನ್ನು ತೆಗೆಯುವುದು ಸೇರಿದಂತೆ ಈ ಕಾರ್ಯಕ್ಕೆ ಅವರು ಕನಿಷ್ಟ ಒಂದೂವರೆ ತಿಂಗಳು ತೆಗೆದುಕೊಳ್ಳುತ್ತಿದ್ದರು. 1992ರ ಡಿಸೆಂಬರ್ 6ರ ಘಟನೆ ಭಾರತದ ಸುವರ್ಣ ಯುಗದ ಹೊಸ ಅಧ್ಯಾಯದ ಆರಂಭವಾಗಿದೆ. ದೇಶಕ್ಕೆ ಉಜ್ವಲ ಭವಿಷ್ಯವನ್ನು ಈ ಘಟನೆ ಖಾತ್ರಿಪಡಿಸುತ್ತದೆ. ಧ್ವಂಸಗೊಳಿಸಲಾದ ಮಸೀದಿಯ ಸ್ಥಳ ಈಗ ದೇಶದ ಹೆಮ್ಮೆಯ ಪ್ರತೀಕವಾಗಿದೆ"

1993ರ ಡಿಸೆಂಬರ್ ಮೂರನೇ ವಾರದಲ್ಲಿ, ನಾನು ಮತ್ತು ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರಧಾನಿಯವರನ್ನು ಭೇಟಿ ಮಾಡಿ, ಬಾಬ್ರಿ ಮಸೀದಿಯನ್ನು ಉಳಿಸಿಕೊಳ್ಳಲು ಯಾಕೆ ಕ್ರಮ ಕೈಗೊಳ್ಳಲಿಲ್ಲ ಎಂದು ಪ್ರಶ್ನಿಸಿದೆವು. ಆಗ ಪ್ರಧಾನಿ ನರಸಿಂಹ ರಾವ್ ಹೇಳಿದ್ದಿಷ್ಟು- "ಉತ್ತರ ಪ್ರದೇಶದ ಮುಖ್ಯಮಂತ್ರಿ ಕಲ್ಯಾಣ್ ಸಿಂಗ್ ಬಾಬ್ರಿ ಮಸೀದಿಗೆ ಯಾವುದೇ ತೊಂದರೆ ಆಗಲು ಬಿಡುವುದಿಲ್ಲ ಎಂದು ಹೇಳಿದ್ದರು. ಒಂದು ರಾಜ್ಯದ ಮುಖ್ಯಮಂತ್ರಿಯ ಭರವಸೆಯನ್ನು ನಾನು ಹೇಗೆ ನಂಬದೆ ಇರಲಿ" ಎಂದು. ಆಗ ನಾನು ನಿಮಗೆ ನೀಡಿದ ಕಲ್ಯಾಣ್ ಸಿಂಗ್ ಭಾಷಣದ ಕ್ಯಾಸೆಟ್‌ನ್ನು ನೀಡಿ ತಮ್ಮ ಮುಂದೆ ಮಂಡಿಸಿದ ವಿಷಯವನ್ನು ಹೇಳಿದೆ. ಆದರೆ, ಆ ಕ್ಯಾಸೆಟ್ಟನ್ನು ಅವರು ನೋಡಿದ್ದಾರೋ ಇಲ್ಲವೋ ಎಂಬುದು ತಿಳಿದಿಲ್ಲ.

ಈಗಿನ (ಈ ಹೇಳಿಕೆ ನೀಡಿದ ಸಂದರ್ಭದಲ್ಲಿ) ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ 1999ರ ಮಾರ್ಚ್ 20ರಂದು ಕೊಲ್ಕತಾದಲ್ಲಿ ನನ್ನನ್ನು ಭೇಟಿಯಾದರು. ಬಿಜೆಪಿ ಕ್ರೂರ ಮತ್ತು ಅನಾಗರಿಕ ಪಕ್ಷ ಎಂದು ಏಕೆ ಬಣ್ಣಿಸಿದಿರಿ ಎಂಬುದಾಗಿ ನನ್ನನ್ನು ಪ್ರಶ್ನಿಸಿದರು. ನಾನು ಆಗ "ಸಾಮಾನ್ಯವಾಗಿ ನಾನು ಯಾರನ್ನು ಹೆಸರೆತ್ತಿ ಟೀಕೆಗಳನ್ನು ಮಾಡಿಲ್ಲ. ಆದರೆ, ಬಾಬರಿ ಮಸೀದಿ ಧ್ವಂಸದ ಕಾರ್ಯಾಚರಣೆ ಒಂದು ಬರ್ಬರ ಕೃತ್ಯ ಎಂದು ಹೇಳಿದ್ದೆ. ಈ ಘಟನೆ ಹೇಗೆ ನಡೆಯಿತು, ಮತ್ತು ಈ ಘಟನೆಗಳನ್ನು ಖಂಡಿಸಲು ಯಾವ ಶಬ್ದಗಳನ್ನು ಬಳಸಬೇಕಿತ್ತು ಎಂದು ನಾನು ಅವರಲ್ಲಿ ಕೇಳಿದೆ. ಆಗ ಅವರು ಹೇಳಿದ್ದು, ಇದೊಂದು ಆಕಸ್ಮಿಕ ಘಟನೆ, ಮತ್ತು ಯಾವುದೇ ಸಂಘಟಿತ ಕೃತ್ಯ ಅಲ್ಲ ಎಂದು. ಆಗ ನಾನು ಕಲ್ಯಾಣ್ ಸಿಂಗ್ ಅವರ (ಮೇಲೆ ಪ್ರಸ್ತಾಪಿಸಿದ) ಭಾಷಣದ ಬಗ್ಗೆ ಗಮನ ಸೆಳೆದೆ. ಅದಕ್ಕೆ ಅವರಿಂದ ಯಾವುದೇ ಪ್ರತಿಕ್ರಿಯೆ ವ್ಯಕ್ತವಾಗಲಿಲ್ಲ. ಈಗ ಅವರು ಬೇರೆಯೇ ಹೇಳಿಕೆ ನೀಡುತ್ತಿದ್ದಾರೆ. ಇದೊಂದು ರಾಷ್ಟ್ರೀಯ ಭಾವನೆಯ ಅಭಿವ್ಯಕ್ತಿ ಎಂಬ ಹೇಳಿಕೆ ಅವರಿಂದ ಬಂದಿದೆ.

ಇದಿಷ್ಟು ಆಯೋಗದ ಮುಂದೆ ನೀಡುವ ಹೇಳಿಕೆ. ನಾವು ಆಯೋಗದ ವರದಿಗಾಗಿ ಕಾಯುತ್ತೇನೆ.

○

ತೃಣಮೂಲದ ಬೊಬ್ಬೆ ಹಾಗೂ ವಿಧಾನಸಭಾ ಉಪ ಚುನಾವಣಾ ಫಲಿತಾಂಶಗಳು

ಇತ್ತೀಚಿಗೆ ನಡೆದ ವಿವಿಧ ರಾಜ್ಯಗಳ ವಿಧಾನಸಭಾ ಉಪ ಚುನಾವಣೆಗಳ ಫಲಿತಾಂಶ ಬಂದ ಮೇಲೆ ಪಶ್ಚಿಮ ಬಂಗಾಳದಲ್ಲಿ ಎಡರಂಗಕ್ಕೆ ಭಾರಿ ಹಿನ್ನಡೆ ಆಗಿರುವುದರಿಂದ ಎಡರಂಗ ಸರ್ಕಾರವು ವಿಧಾನಸಭೆ ವಿಸರ್ಜಿಸಿ ಈಗಿಂದೀಗಲೇ ಪಶ್ಚಿಮ ಬಂಗಾಳದ ವಿಧಾನಸಭಾ ಚುನಾವಣೆಯನ್ನು ಎದುರಿಸಬೇಕೆಂದು ತೃಣಮೂಲ ಕಾಂಗ್ರೆಸ್ ಪಕ್ಷವು ಗದ್ದಲವೆಬ್ಬಿಸಲು ಪ್ರಯತ್ನಿಸುತ್ತಿದೆ. ಈ ಹಿನ್ನೆಲೆಯಲ್ಲಿ ಮೊದಲು ಚುನಾವಣಾ ಫಲಿತಾಂಶದ ವಸ್ತುನಿಷ್ಠ ವರದಿಯನ್ನು ಓದುಗ ಮುಂದಿಡುವುದು ಅಗತ್ಯವಾಗಿದೆ.

ಉತ್ತರ ಪ್ರದೇಶದಲ್ಲಿ ಚುನಾವಣೆ ನಡೆದ 11 ಸ್ಥಾನಗಳಲ್ಲಿ ಅಧಿಕಾರರೂಢ ಬಿಎಸ್‌ಪಿಯು 9 ಸ್ಥಾನಗಳನ್ನು ಗಳಿಸಿದೆ. ಒಟ್ಟು ಈ 11 ಸ್ಥಾನಗಳಲ್ಲಿ ಈ ಮೊದಲು ಬಿಎಸ್‌ಪಿ ಯು ಕೇವಲ ಒಂದೇ ಒಂದು ಸ್ಥಾನದಲ್ಲಿ ಗೆದ್ದಿತ್ತು. ಹೀಗಾಗಿ ಬಿಎಸ್‌ಪಿಗೆ ಇದು ದೊಡ್ಡ ಗಳಿಕೆ ಉತ್ತರ ಪ್ರದೇಶದಲ್ಲಿ. ಪಶ್ಚಿಮ ಬಂಗಾಳದಲ್ಲಿ 10 ವಿಧಾನಸಭಾ ಸ್ಥಾನಗಳಿಗೆ ಚುನಾವಣೆ ನಡೆದಿತ್ತು. ಈ 10 ಸ್ಥಾನಗಳಲ್ಲಿ ಹಿಂದೆ ಎಡರಂಗ ಗೆದ್ದದ್ದು 3 ಕ್ಷೇತ್ರಗಳಲ್ಲಿ ಮಾತ್ರ. 2 ಸ್ಥಾನ ಸಿಪಿಐ(ಎಂ) ನದ್ದಾಗಿತ್ತು. ಒಂದು ಸ್ಥಾನ ಆರ್.ಎಸ್.ಪಿ. ಗೆ ಸೇರಿತ್ತು. ಇತ್ತೀಚಿನ ಪ್ರಸಕ್ತ ಚುನಾವಣೆಯಲ್ಲಿ ಎಡರಂಗದ ಅಂಗಪಕ್ಷವಾದ ಫಾರ್ವರ್ಡ್ ಬ್ಲಾಕ್ ಒಂದು ಸ್ಥಾನವನ್ನು ಹೊಸದಾಗಿ ಗಳಿಸಿಕೊಂಡಿದೆ. ಆದ ಸಿಪಿಐ(ಎಂ) ಮತ್ತು ಆರ್‌ಎಸ್‌ಪಿಗಳು ತಮ್ಮ ಸ್ಥಾನವನ್ನು ಉಳಿಸಿಕೊಳ್ಳಲು ಸಾಧ್ಯವಾಗಿಲ್ಲ.

ಒಟ್ಟು 10 ಸ್ಥಾನಗಳಲ್ಲಿ ಈ ಮೊದಲು 5 ಸ್ಥಾನಗಳಲ್ಲಿ ಗೆದ್ದಿದ್ದ ತೃಣಮೂಲ ಕಾಂಗ್ರೆಸ್ ಈ ಚುನಾವಣೆಯಲ್ಲಿ 7 ಸ್ಥಾನಗಳಲ್ಲಿ ಗೆಲುವು ಸಾಧಿಸಿದೆ.

ಕೇರಳದಲ್ಲಿ 3 ಸ್ಥಾನಗಳಿಗೆ ಚುನಾವಣೆ ನಡೆದಿದೆ. ಈ ಮೂರು ಸ್ಥಾನಗಳಲ್ಲಿ ಈ ಮೊದಲು ಕಾಂಗ್ರೆಸ್ ಗೆದ್ದಿತ್ತು. ಈಗಿನ ಚುನಾವಣೆಯಲ್ಲಿ ಈ ಸ್ಥಾನಗಳನ್ನು ಕಾಂಗ್ರೆಸ್ ಉಳಿಸಿಕೊಂಡಿದೆ.

ಇದ್ದ ಕೆಲವು ಸ್ಥಾನ ಉಳಿಸಿಕೊಳ್ಳಲಾರದ್ದಕ್ಕೆ ಹಾಗೂ ಹೊಸ ಸ್ಥಾನವನ್ನು ಹೆಚ್ಚಿಸಿಕೊಳ್ಳಲಾರದ್ದಕ್ಕೆ ಕಾರಣ ಏನೆಂದು ಪಶ್ಚಿಮ ಬಂಗಾಳದ ಎಡರಂಗ, ಕೇರಳದ ಎಡ ಪ್ರಜಾಸತ್ತಾತ್ಮಕ ರಂಗಗಳು ಪ್ರಾಮಾಣಿಕವಾಗಿ ಪರಿಶೀಲಿಸಿಕೊಳ್ಳಬೇಕಾದ ಅಗತ್ಯವಿದೆ.

ಆದರೆ ಪಶ್ಚಿಮ ಬಂಗಾಳದಲ್ಲಿ ವಿಧಾನಸಭೆಯನ್ನೇ ವಿಸರ್ಜಿಸಿ ಚುನಾವಣೆಗೆ ಹೋಗಬೇಕಾದ ಸನ್ನಿವೇಶ ಬಂದಿದೆಯೆ ಎಂಬುದಷ್ಟೇ ಇಲ್ಲಿ ಪ್ರಮುಖವಾಗಿ ಕೇಳಿಕೊಳ್ಳಬೇಕಾದ ಪ್ರಶ್ನೆ.

○

ಅಸಂಘಟಿತ ಕಾರ್ಮಿಕರ ಸತತ ಹೋರಾಟದ ಪರಿಣಾಮ ಡಿಸೆಂಬರ್ 3, 2009 ರಂದು ಸಿಐಟಿಯು ನಿಯೋಗ ಮುಖ್ಯಮಂತ್ರಿಗಳೊಂದಿಗೆ, ಮಾತುಕತೆ ನಡೆಸಿದೆ. ಈ ಮಾತುಕತೆ ಫಲಿತಾಂಶವೇನು? ಓದಿ

ಅಸಂಘಟಿತ ಕಾರ್ಮಿಕರ ಬೇಡಿಕೆಗಳು

'ತಜ್ಞರ ಸಮಿತಿ'ಯ ರಾಗದಿಂದ ಪರಿಹಾರ ಸಾಧ್ಯವಿಲ್ಲ

ರಾಜ್ಯದ ಅಸಂಘಟಿತ ಕಾರ್ಮಿಕರ ಬೇಡಿಕೆಗಳ ಮೇಲೆ ಕೊನೆಗೂ ಬಿಜೆಪಿ ಸರಕಾರದ ಮುಖ್ಯಮಂತ್ರಿಗಳ ಸಮ್ಮುಖ ಡಿಸೆಂಬರ್ 3 ರಂದು ಮಾತುಕತೆ ನಡೆಯಿತು. ಆದರೆ ರಾಜ್ಯ ಸರಕಾರ 'ತಜ್ಞರ ಸಮಿತಿ'ಯನ್ನು ನೇಮಿಸಯುವ ಬಗ್ಗೆಯಷ್ಟೇ ಮತ್ತೆ ಮತ್ತೆ ಹೇಳಿತು. ಇದನ್ನು ವಿರೋಧಿಸಿದ ಸಿಐಟಿಯು ಮುಖಂಡರು ಇದಕ್ಕೆ ಯಾವುದೇ ಕಾನೂನಿನಲ್ಲಿ ಮಾನ್ಯತೆಯಿಲ್ಲ, ಆದರಿಂದ ಪರಿಹಾರವೂ ದೊರೆಯುತ್ತಿಲ್ಲ ಎಂದು ನೆನಪಿಸಿದರು. ಒಂದು ತ್ರಿಪಕ್ಷೀಯ ಸಮಿತಿಯನ್ನು ರಚಿಸಬೇಕು ಎಂದು ಅವರು ಆಗ್ರಹಿಸಿದರು.

ಕನಿಷ್ಟ ಕೂಲಿ ಕಾನೂನು, 1948 ರ ಸೆಕ್ಷನ್ 5(1) (ಎ) ಪ್ರಕಾರ ನೇಮಿಸುವ ತ್ರಿಪಕ್ಷೀಯ ಸಮಿತಿ ತನಿಖೆ ನಡೆಸುವ ಮತ್ತು ಸರಕಾರಕ್ಕೆ ಶಿಫಾರಸು ಮಾಡುವ ಅಧಿಕಾರ ಹೊಂದಿದ್ದು, ಸರಕಾರ ಈ ಶಿಫಾರಸಿನ ಆಧಾರದಲ್ಲಿ ಇಡೀ ರಾಜ್ಯಕ್ಕೆ ಸಮಾನ ಕನಿಷ್ಟ ಕೂಲಿಯನ್ನು ನಿಗದಿ ಮಾಡಬಹುದು. ಇನ್ನೊಂದು ದಾರಿಯೆಂದರೆ ಕನಿಷ್ಟ ಕೂಲಿ ಕಾನೂನಿನ ಸೆಕ್ಷನ್ 3(1) (ಬಿ) ಪ್ರಕಾರ ಎಲ್ಲಾ ಉದ್ಯೋಗಗಳಿಗೆ ಅಥವಾ 5 ವರ್ಷಗಳಿಗಿಂತ ಹೆಚ್ಚು ಸಮಯದಿಂದ ಕನಿಷ್ಟ ಕೂಲಿ ನಿಗದಿಯಾಗದ 45 ಉದ್ಯೋಗಗಳಲ್ಲಿಯಾದರೂ ಒಂದು ಕರಡು ಪ್ರಸ್ತಾವದ ಅಧಿಸೂಚನೆ ಹೊರಡಿಸಬಹುದು ಎಂದು ಸಿಐಟಿಯು ಮುಖಂಡರು ಸೂಚಿಸಿದರು. ಆದರೆ ಈ ಯಾವ ವಿಧಾನವನ್ನೂ ಅನುಸರಿಸುವ ಬಗ್ಗೆ ಯಾವುದೇ ಭರವಸೆ ನೀಡದ ರಾಜ್ಯ ಸರಕಾರ "ತಜ್ಞರ ಸಮಿತಿ"ಯನ್ನು ನೇಮಿಸುವ ರಾಗವನ್ನೇ ಪುನರಾವರ್ತಿಸಿತು. ಈಗಾಗಲೇ ಎರಡು ತಜ್ಞರ ಸಮಿತಿಯ ವರದಿಗಳು ಧೂಳು ತಿನ್ನುತ್ತಿವೆ. ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯು (ಎನ್‌ಎಲ್‌ಎಸ್‌ಐಯು) ಗುತ್ತಿಗೆ ಕಾರ್ಮಿಕರ ಕುರಿತಾಗಿ ಮತ್ತು ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಸಂಸ್ಥೆ (ಐಸೆಕ್) ಬೀಡಿ ಕಾರ್ಮಿಕರ ಬಗ್ಗೆ ವರದಿಗಳನ್ನು ಕೊಟ್ಟು ಐದು ವರ್ಷಗಳ ಮೇಲಾದರೂ ಈ ಬಗ್ಗೆ ಏನೂ ಕ್ರಮ ಕೈಗೊಂಡಿಲ್ಲ ಎಂಬುದನ್ನು ಸಿಐಟಿಯು ಮುಖಂಡರು ಮುಖ್ಯಮಂತ್ರಿಗಳ ಗಮನಕ್ಕೆ ತಂದರು. ತಮ್ಮ ಬೇಡಿಕೆಗಳಿಂದ ಹಿಂದೆ ಸರಿಯುವುದಿಲ್ಲ, ಕೂಲಿದರಗಳ ಬಗ್ಗೆ ಮಾತುಕತೆಗಳ ಮೂಲಕ ಇತ್ಯರ್ಥಕ್ಕೆ ಮಾತ್ರ ಸಿದ್ಧ ಎಂದು ಸಿಐಟಿಯು ಮುಖಂಡರು ಮುಖ್ಯಮಂತ್ರಿಗಳಿಗೆ ಸ್ಪಷ್ಟಪಡಿಸಿದರು.

ಈ ಮಾತುಕತೆಗಳಲ್ಲಿ ಸಿಐಟಿಯು ಪ್ರಧಾನ ಕಾರ್ಯದರ್ಶಿ ವಿ.ಜೆ.ಕೆ.ನಾಯರ್ ರವರಲ್ಲದೇ, ಅಂಗನವಾಡಿ ಮತ್ತು ಅಕ್ಷರ ದಾಸೋಹ ನೌಕರರನ್ನು ಪ್ರತಿನಿಧಿಸಿ ಎಸ್.ವರಲಕ್ಷ್ಮಿ ಹಮಾಲಿ ಕಾರ್ಮಿಕರನ್ನು ಪ್ರತಿನಿಧಿಸಿ ಎನ್.ಪ್ರಸನ್ನಕುಮಾರ್, ಬೀಡಿ ಕಾರ್ಮಿಕರ ಪ್ರತಿನಿಧಿಯಾಗಿ ಸೈಯದ್ ಮುಜೀಬ್, ಬೆಂಗಳೂರು ಜಿಲ್ಲಾ ಸಿಐಟಿಯುವನ್ನು ಪ್ರತಿನಿಧಿಸಿ ಕೆ.ಎನ್.ಉಮೇಶ್ ಭಾಗವಹಿಸಿದರು. ಇವರೆಲ್ಲರೂ ರಾಜ್ಯ ಸಿಐಟಿಯುನ ಕಾರ್ಯದರ್ಶಿಗಳು ಇವರಲ್ಲದೆ ತೋಟ ಕಾರ್ಮಿಕರನ್ನು ಪ್ರತಿನಿಧಿಸಿ ರಾಜ್ಯ ಸಿಐಟಿಯು ಉಪಾಧ್ಯಕ್ಷರಾದ ವಿ.ಸುಕುಮಾರ್, ಗ್ರಾಮ ಪಂಚಾಯತ್ ನೌಕರರ ಸಮಘದ ಅಧ್ಯಕ್ಷರಾದ ಮಾರುತಿ ಮಾನ್ಪಡೆ ಮತ್ತು ಬಾಲಕೃಷ್ಣ ಶೆಟ್ಟಿ ಹಾಗೂ ಎನ್‌ಎಸ್‌ಎನ್‌ಎಲ್ ಗುತ್ತಿಗೆ ಕಾರ್ಮಿಕರು ಹಾಗೂ ಹಮಾಲಿ ಕಾರ್ಮಿಕರನ್ನು ಪ್ರತಿನಿಧಿಸಿ ಮಹಾಂತೇಶ್ ಅವರು ಮಾತುಕತೆಗಳಲ್ಲಿ ಭಾಗವಹಿಸಿದರು.

ಸರಕಾರದ ಕಡೆಯಿಂದ ಮುಖ್ಯಮಂತ್ರಿಗಳಲ್ಲದೆ, ಗೃಹಮಂತ್ರಿ ವಿ.ಎಸ್ ಆಚಾರ್ಯ, ಕಾರ್ಮಿಕ ಮಂತ್ರಿ ಬಚ್ಚೇಗೌಡ, ಪಂಚಾಯತ್‌ರಾಜ್ ಮಂತ್ರಿ ಜಗದೀಶ್ ಶೆಟ್ಟರ್, ಮಾರುಕಟ್ಟೆ ಮತ್ತು ಸಕ್ಕರೆ ಮಂತ್ರಿ ಶಿವರಾಜ್ ತಂಗಡಗಿ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಮಂತ್ರಿ ನರೇಂದ್ರಸ್ವಾಮಿ ಭಾಗವಹಿಸಿದ್ದರು. ಅಲ್ಲದೆ ಗೃಹ ಕಾರ್ಯದರ್ಶಿ, ಪ್ರಮುಖ ಕಾರ್ಮಿಕ ಕಾರ್ಯದರ್ಶಿ, ಕಾರ್ಮಿಕ ಆಯುಕ್ತರು, ಪೊಲೀಸ್ ಮಹಾ ನಿರ್ದೇಶಕರು, ಮಾರುಕಟ್ಟೆ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಹಾಗೂ ಆಹಾರ ಪೂರೈಕೆ ಇಲಾಖೆಗಳ ನಿರ್ದೇಶಕರುಗಳು ಕೂಡಾ ಭಾಗವಹಿಸಿದ್ದರು.



ನವೆಂಬರ್ 26 ರಂದು ನಡೆದ ಅಸಂಘಟಿತ ಕಾರ್ಮಿಕರ ರ್‍ಯಾಲಿ

ವಿಪರೀತ ವಿಳಂಬ

ಕನಿಷ್ಟ ಕೂಲಿ ನಿಗದಿಯಲ್ಲಿನ ಕುಂದುಕೊರತೆಗಳ ಬಗ್ಗೆ ಮಾತನಾಡುತ್ತಾ ವಿ.ಜೆ.ಕೆ. ನಾಯರ್‌ರವರು ಒಂದೇ ತೆರನ ಉದ್ಯೋಗಗಳಿಗೆ ಸುಮಾರಾಗಿ ಒಂದೇ ರೀತಿಯ ಕನಿಷ್ಟ ಕೂಲಿಯನ್ನು ನಿಗದಿ ಮಾಡಬೇಕೆಂಬ ಹೈಕೋರ್ಟಿನ ಆದೇಶವನ್ನು ಉಪೇಕ್ಷಿಸಲಾಗುತ್ತಿದೆ. ಎರಡು ವರ್ಷಗಳಿಗೊಮ್ಮೆ ಕೂಲಿ ಪರಿಷ್ಕರಣೆ ನಡೆಯಬೇಕು, ಕನಿಷ್ಟ ಐದು ವರ್ಷಗಳಿಗೊಮ್ಮೆಯಾದರೂ ನಡೆಯಬೇಕು ಎಂಬ ಕಾನೂನಿನ ಅಂಶವನ್ನು ಪಾಲಿಸಲಾಗುತ್ತಿಲ್ಲ ಎಂಬ ಅಂಶದತ್ತ ಗಮನ ಸೆಳೆದರು. ಕನಿಷ್ಟ ಕೂಲಿ ನಿಗದಿಯಲ್ಲಿ ಪ್ರಸ್ತಾವವು ಅಂತಿಮ ಅಧಿಸೂಚನೆಯಾಗಿ ಹೊರ ಬೀಳಲು ಬಹಳ ವಿಳಂಬವಾಗುತ್ತದೆ, ಸರಾಸರಿ 4 ವರ್ಷಗಳೇ ಆಗುತ್ತದೆ. ರಾಮಕೃಷ್ಣ ಹೆಗಡೆ/ ಎಸ್.ಕೆ.ಕಾಂತಾ ಕಾಲದ ಕೆಲವು ಕನಿಷ್ಟ ಕೂಲಿ ಪ್ರಸ್ತಾವನೆಗಳೂ ಇನ್ನೂ ಕಲ್ಲಾಗಿ ಬಿದ್ದ ಅಹಲ್ಯೆಯಂತೆ ಶ್ರೀ ರಾಮಚಂದ್ರನ ಬರವಿಗೆ ಕಾಯುತ್ತಿವೆ. 65 ಉದ್ಯೋಗಗಳಲ್ಲಿ ಹಿಂದಿನ ಪ್ರಸ್ತಾವವನ್ನು ಸೂಚಿಸಿ ಒಂಭತ್ತು ವರ್ಷಗಳೇ ಸಂದಿವೆ ಎಂಬ ಸಂಗತಿಯನ್ನು ಮುಖ್ಯಮಂತ್ರಿಗಳ ಗಮನಕ್ಕೆ ತರಲಾಯಿತು.

ಈಗಿನ ಕನಿಷ್ಟ ಕೂಲಿಯ ಬಗ್ಗೆ ಮಾತಾಡುತ್ತಾ ಶಾಂತಪ್ಪ ಸಮಿತಿಯ ಶಿಫಾರಸುಗಳನ್ನಾದರೂ ಸರಿಯಾಗಿ ಜಾರಿ ಮಾಡಿದ್ದರೆ ಕನಿಷ್ಟ ಕೂಲಿ ರೂ.150 ಆಗಬೇಕಿತ್ತು. ಕಳೆದ ವರ್ಷ ಕಾರ್ಮಿಕ ಮಂತ್ರಿ ಬಚ್ಚೇಗೌಡರೂ 150 ರೂ ಕನಿಷ್ಟ ಕೂಲಿ ನಿಗದಿಪಡಿಸಬೇಕು ಎಂದು ಹೇಳಿದ್ದರು. ಸಿಐಟಿಯು 200 ರೂ. ಕೇಳುತ್ತಿದೆ. ಈ ಬಗ್ಗೆ ಮಾತುಕತೆ ನಡೆಸಿ ಕನಿಷ್ಟ ಕೂಲಿಯನ್ನು ಇತ್ಯರ್ಥ ಮಾಡಬಹುದು ಎಂದು ಮುಖ್ಯಮಂತ್ರಿಗಳಿಗೆ ಸೂಚಿಸಲಾಯಿತು.

ಇತರ ಬೇಡಿಕೆಗಳು :

ಗುತ್ತಿಗೆ ಕಾರ್ಮಿಕರ ಬೇಡಿಕೆಗಳು, ಪಡಿತರ ಚೀಟಿ, ಮನೆ ನಿವೇಶನಗಳು ಇತ್ಯಾದಿ ಬೇಡಿಕೆಗಳ ಬಗ್ಗೆಯೂ ಇನ್ನು ಕೂಡಾ ಗಂಭೀರ ಗಮನ ನೀಡಲಾಗಿಲ್ಲ.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಂಗನವಾಡಿ ನೌಕರರ ವೇತನವನ್ನು ಪರಿಷ್ಕರಿಸುವ ಮತ್ತು ನಿವೃತ್ತಿ ಸೌಲಭ್ಯಗಳನ್ನು ನೀಡುವ ಬಗ್ಗೆ ಕೆಲವು ಪ್ರಸ್ತಾವಗಳನ್ನು ಇಟ್ಟಿದ್ದು ಈ ಬಗ್ಗೆ ಗಂಭೀರ ಚರ್ಚೆ ನಡೆಯಿತು.

ಅದೇ ರೀತಿ ಪಂಚಾಯತ್ ರಾಜ್ ಮಂತ್ರಿ ಜಗದೀಶ ಶೆಟ್ಟರ್‌ರೊಂದಿಗೆ ಪಂಚಾಯತ್ ನೌಕರರ ಬೇಡಿಕೆಗಳ ಬಗ್ಗೆ ಹಾಗೂ ಎಪಿಎಂಸಿ ಹಮಾಲಿಗಳಿಗೆ ಕಲ್ಯಾಣ ಯೋಜನೆಯ ಬಗ್ಗೆ ಚರ್ಚೆ ನಡೆಯಿತು.

ರಾಜ್ಯ ಕಾರ್ಮಿಕ ಇಲಾಖೆಯ ಸಿಐಟಿಯು ವಿರೋಧಿ ಕ್ರಮಗಳನ್ನು ಮುಖ್ಯಮಂತ್ರಿಗಳ ಗಮನಕ್ಕೆ ತರಲಾಯಿತು. ಸೆಪ್ಟೆಂಬರ್ ಹೋರಾಟದಲ್ಲಿ ಚಳುವಳಿಗಾರರ ಮೇಲೆ ಸುಳ್ಳು ಕೇಸುಗಳ ಹೇರಿಕೆ, ಕೆಲವು ಪೊಲೀಸರ ಕ್ರಿಮಿನಲ್ ವರ್ತನೆ ಹಾಗೂ ಸಂತ್ರಸ್ತರಿಗೆ ಪರಿಹಾರದ ಬಗ್ಗೆ ಒಂದು ಪ್ರತ್ಯೇಕ ಮನವಿ ಪತ್ರವನ್ನು ಸಲ್ಲಿಸಲಾಯಿತು. ಪೊಲೀಸ್ ಮಹಾ ನಿರ್ದೇಶಕ ಅಜಯ ಕುಮಾರ್‌ಸಿಂಗ್ ತನಿಖೆ ನಡೆಸುವ ಭರವಸೆ ನೀಡಿದರು. ಆದರೆ ಕೇಸುಗಳನ್ನು ಹಿಂತೆಗೆದುಕೊಳ್ಳುವುದು, ಪರಿಹಾರ ನೀಡಿಕೆ ಸರ್ಕಾರಕ್ಕೆ ಬಿಟ್ಟಿದ್ದು ಎಂದರು.

ಮುಂದಿನ ಹೆಜ್ಜೆ

ಈಗ ಆರಂಭಿಸಿರುವ ಮಾತುಕತೆಗಳನ್ನು ಕಾರ್ಮಿಕ ಇಲಾಖೆ ಗಂಭೀರವಾಗಿ ತೆಗೆದುಕೊಂಡು ಅದನ್ನು ಮುಂದುವರೆಸುತ್ತದೆ, ಎಲ್ಲಾ ಸಮಸ್ಯೆಗಳನ್ನು ಬಗೆಹರಿಸುತ್ತದೆ ಎಂದು ಅಪೇಕ್ಷಿಸಿರುವ ಸಿಐಟಿಯು ರಾಜ್ಯ ಮುಖಂಡರು, ಒಂದು ವೇಳೆ ತೃಪ್ತಿಕರ ಪರಿಹಾರಗಳು ಸಿಗದಿದ್ದರೆ ಮತ್ತೊಮ್ಮೆ ಚಳುವಳಿಯನ್ನು ಆರಂಭಿಸಿ ಈ ಆಂದೋಲನವನ್ನು ಮೇಲಿನ ಹಂತಕ್ಕೆ ಒಯ್ಯಲಾಗುವುದು ಎಂದು ಹೇಳಿದ್ದಾರೆ. ಇದರಲ್ಲಿ ಎಲ್ಲಾ ಕೇಂದ್ರ ಕಾರ್ಮಿಕ ಸಂಘಗಳೊಡಗೂಡಿ ರಾಜ್ಯದಲ್ಲಿ ನ್ಯಾಯಯುತ ಮತ್ತು ಸಮಾನಾತ್ಮಕ ಬದುಕನ್ನು ಪಡೆಯಲು ಒಂದು ಕಾರ್ಮಿಕರ ಸನ್ನದ್ದು ರೂಪಿಸಿ ಮುಂದಿನ ಕಾರ್ಯಾಚರಣೆಗಳನ್ನು ನಡೆಸುವುದೂ ಸೇರಿದೆ.

ಸಾಮೂಹಿಕ ಮಾಧ್ಯಮಗಳು ಈ ಬಗ್ಗೆ ತಮ್ಮದೇ ತನಿಖೆ ನಡೆಸಿ ರಾಜ್ಯದಲ್ಲಿ ಅಸಂಘಟಿತ ವಲಯದ ಕಾರ್ಮಿಕರಿಗೆ ಕಾನೂನಿನ ಆಳ್ವಿಕೆಯನ್ನು ನಿರಾಕರಿಸಬಾರದು ಎಂದು ಕೇಳುವ ಈ ಆಂದೋಲನವನ್ನು ಬೆಂಬಲಿಸುವಂತೆ ಸಿಐಟಿಯುನ ರಾಜ್ಯ ಪ್ರಧಾನ ಕಾರ್ಯದರ್ಶಿಗಳು ಮನವಿ ಮಾಡಿದ್ದಾರೆ.


ರೆಡ್ಡಿ ಹಣ ಜಣಜಣ

ರೆಡ್ಡಿ : ಆಪರೇಷನ್ ಕಮಲಕ್ಕೆ ನನ್ನ ಹಣ
ನೀ ಸಿಎಂ ಆಗಲು ನನ್ನ ಬಣ
ಅದಕ್ಕಾಗಿ ಬೇಕಿದೆ ಗಣಿಯ ಜಣಜಣ
ನಮ್ಮಮಾತು ಕೇಳದಿದ್ರೆ ನೀ ಹೈರಾಣ
ನಮ್ಮ ಅಡ್ಡೆಯಲ್ಲಿ ಬಿದ್ದಿವೆ ಎಷ್ಟೋ ಹೆಣ
ಯಡ್ಡಿ : ನೀ ಹೇಳ್ದಂಗೆ ಕೇಳೋದೇ ನನ್ನ ಪಣ
ಅಧಿಕಾರ ಬಿಟ್ಟಿರಲಾರೆ ಅರೆಕ್ಷಣ
ಸುಮ್ಮನೆ ಬಿಟ್ಟದ್ದು ಬರಿ ಬಾಣ
ಡೆಲ್ಲಿಯವರು ಹಚ್ಚಿವರು ತೆಲು ಮೇಣ
ನಮ್ಮ ಸಂಬಂಧವ ಎಣಿಸುತೀಲ್ನಿ ಕ್ಷಣ ಕ್ಷಣ

- ಭರತ್‌ರಾಜ್ ಎನ್.ಎಲ್

ನೆರೆ ಪರಿಹಾರ ಎಂದಾಕ್ಷಣ ಇದರಲ್ಲಿ ಪರಿಹಾರ, ಸಾಮಗ್ರಿ, ಹಣಕಾಸು ಮಾತ್ರವಲ್ಲ ಇದಕ್ಕೊಂದು ಸಾಮಾಜಿಕ ಮುಖವಿದೆ. ಸಂಕಷ್ಟಕ್ಕೊಳಗಾದ ಮಹಿಳೆಯರ ಅಗತ್ಯ ಭಿನ್ನ. ಈ ಬಗೆಗೆ ಅಧ್ಯಯನ ಶಿಫಾರಸ್ಸು ನೀಡಿದರೆ ಪಟ್ಟಭದ್ರರಿಗೆ ಉರಿಯೋ ಉರಿ.

ನೆರೆ ಸಂತ್ರಸ್ತರ ಗಾಯದ ಮೇಲೆ ಬರೆ ಎಳೆದವರು



ಡಾ. ಮೀನಾಕ್ಷಿ ಬಾಳಿ

ಉತ್ತರ ಕರ್ನಾಟಕದಲ್ಲಿ ಇತ್ತೀಚಿನ ಭಾರಿ ಮಳೆ ಪ್ರವಾಹವು ಉಂಟು ಮಾಡಿದ ಭೀಕರ ಪರಿಣಾಮಗಳು ಈಗಾಗಲೇ ಜನಜನಿತವಾಗಿವೆ. ಜನ, ಜಾನುವಾರು ಆಹಾರ ಎಲ್ಲ ಕೊಚ್ಚಿಹೋಗಿ ನೀರುಪಾಲಾದವು. ಉತ್ತರ ಕರ್ನಾಟಕಕ್ಕೆ ಇದು ಅನಿರೀಕ್ಷಿತದಷ್ಟೇ ಅಘಾತಕಾರಿಯಾಗಿತ್ತು. ಈ ಹೊತ್ತಿನ ಐತಿಹಾಸಿಕ ದುರಂತವೇ ಆಗಿತ್ತು. ಇಂಥ ಹೃದಯವಿದ್ರಾವಕವಾದ ಸ್ಥಿತಿ-ಗತಿಯನ್ನು ಕುರಿತು ಅಧ್ಯಯನ ಮಾಡಲೆಂದು ಹಲವಾರು ಸಂಘ ಸಂಸ್ಥೆಗಳು ತಮ್ಮ ತಮ್ಮ ನೆಲೆಯಲ್ಲಿ ಕಾರ್ಯನಿರತವಾಗಿದ್ದವು. ಇವುಗಳ ಪೈಕಿ ಹಂಪಿ ಕನ್ನ ವಿಶ್ವವಿದ್ಯಾಲಯದ ಮಹಿಳಾ ಅಧ್ಯಯನ ಕೇಂದ್ರವು ಪ್ರಮುಖವಾಗಿತ್ತು..

ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯಲ್ಲಿರುವ ಮಹಿಳೆಯರ ಮೇಲೆ ಈ ನೆರೆ ಮಾಡಿದ ಪರಿಣಾಮ, ಪ್ರವಾಹವನ್ನು ಮಹಿಳೆಯರು ಎದುರಿಸಿದ ಬಗೆ, ಅವರ ಮೇಲಾದ ಮಾನಸಿಕ ಆಘಾತ, ಪರಿಹಾರದ ನೆಲೆಯಲ್ಲಿ ಮಹಿಳೆಯರನ್ನು ಪರಿಗಣಿಸಿದ ರೀತಿ, ಪ್ರವಾಹದ ನಂತರದ ಅವರ ಬದುಕು - ಬವಣೆ ಕುರಿತಂತೆ ಅಧ್ಯಯನ ಮಾಡುವ ಮಹತ್ ಉದ್ದೇಶದಿಂದ ಅಧ್ಯಯನ ಕೇಂದ್ರ ಮುಂದೆಬಂದಿತ್ತು. ಮಹಿಳಾ ಅಧ್ಯಯನ ಕೇಂದ್ರದ ನಿರ್ದೇಶಕರಾದ ಡಾ. ಶೈಲಜಾ ಹಿರೇಮಠರ ತೀವ್ರ ಕಾಳಜಿ ಮತ್ತು ಮಹಿಳೆಯರ ಬಗೆಗಿನ ಬದ್ಧತೆಯಿಂದಾಗಿ ಇಂಥದೊಂದು ಕಾರ್ಯಯೋಜನೆ ಸಿದ್ಧವಾಗಿತ್ತು. ಅಧ್ಯಯನ ತಂಡಗಳು ಸುಮಾರು ಎಂಟು ಜಿಲ್ಲೆಗಳ ಹತ್ತಾರು ಹಳ್ಳಿಗಳಲ್ಲಿ ಸಂಚರಿಸಿ ವಾರಗಟ್ಟಲೆ ಪ್ರವಾಹ ಪೀಡಿತರೊಂದಿಗೆ ಕಳೆದು ವರದಿಯೊಂದನ್ನು ಸಿದ್ಧಪಡಿಸಿದರು. ಪ್ರವಾಹ, ಭೂಕಂಪ, ಸುನಾಮಿಯಂಥ ಪ್ರಾಕೃತಿಕ ವಿಕೋಪಗಳ ಎದುರಿನಲ್ಲಿ ಹೆಣ್ಣು-ಗಂಡು, ಬಡವ-ಬಲ್ಲಿದ, ಮೇಲ್ಜಾತಿ-ಕೆಳಜಾತಿ, ಧರ್ಮ ಇತ್ಯಾದಿ ಬೇಧವಿರುವುದಿಲ್ಲ. ಪ್ರಕೃತಿಗೆ ಎಲ್ಲರೂ ಸಮಾನರು.

ಅದು ತನ್ನ ಕ್ರೂರ ಮುಖವನ್ನು ಎಲ್ಲರಿಗೂ ಸಮನಾಗಿಯೇ ತೋರಿಸುತ್ತದೆ. ಆದರೆ ಪ್ರಕೃತಿಯನ್ನು ತನ್ನ ಕಪಿಮುಷ್ಟಿಯಲಲಿಕೊಟ್ಟುಕೊಳ್ಳಲು ಬಯಸುವ ಸಮಾಜ ಮಾತ್ರ ಎಲ್ಲ ಬಗೆಯ ತಾರತಮ್ಯ, ವೈರುಧ್ಯಗಳನ್ನು ಹುಟ್ಟು ಹಾಕಿರುತ್ತದೆ. ಆದ್ದರಿಂದ ಸಮಾಜದ ಅಂಚಿನಲ್ಲಿರುವ ಜೀವಿಗಳ ಮೂಲಕವೇ ವಿಸ್ತೃತ ನೋಟವನ್ನು ಹರಿಸಲು ಅಧ್ಯಯನ ತಂಡಗಳು ಬದ್ಧವಾಗಿದ್ದವು. ಈ ಹಿನ್ನೆಲೆಯಲ್ಲಿ ವರದಿಯನ್ನು ಸಿದ್ದಪಡಿಸಿದವು. ಸದರಿ ವರದಿಯು ಪ್ರವಾಹದ ಸ್ವರೂಪ, ಪ್ರವಾಹದ ಕಾರಣ, ಪರಿಣಾಮಗಳನ್ನು ಗುರುತಿಸಿ, ಪ್ರವಾಹದ ದುಷ್ಪರಿಣಾಮದಿಂದಾಗಿ ಏರುಪೇರಾದ ಕೌಟುಂಬಿಕ, ಸಾಮುದಾಯಿಕ ಬದುಕಿನ ಆರ್ಥಿಕ, ಸಾಮಾಜಿಕ, ಮಾನಸಿಕ, ಸಾಂಸ್ಕೃತಿಕ, ಧಾರ್ಮಿಕ ಆಯಾಮಗಳನ್ನು ಹಿಡಿದಿಡುವ ಪ್ರಯತ್ನ ಮಾಡಲಾಗಿತ್ತು. ಪರಿಹಾರ ಒದಗಿಸುವ ಹಂತದಲ್ಲಿ ಪ್ರಭುತ್ವ, ಜನಸಮುದಾಯಗಳು ಹೇಗೆ ಭಾಗವಹಿಸಿದವು? ಸರ್ಕಾರದ ಆಡಳಿತಾಂಗ, ಶಾಸಕಾಂಗಗಳು ನಿರ್ವಹಿಸಿದ ಪಾತ್ರವೇನು? ಮುಂದಿನ ದಿನಗಳಲ್ಲಿ ಪರಿಹಾರ ಎಂಬುದನ್ನು ಹೇಗೆ ಪರಿಭಾವಿಸಿಕೊಳ್ಳಬೇಕು? ಪರಿಹಾರದಂಥ ಗಂಭೀರ ಸಂಗತಿಯನ್ನು ನಿರ್ವಹಿಸುವಾಗ ಸರ್ಕಾರ ವಹಿಸಬೇಕಾದ ಮುನ್ನೆಚ್ಚರಿಕೆ, ಈ ಕುರಿತ ನೀತಿ ನಿರೂಪಣೆ ಇತ್ಯಾದಿಗಳನ್ನು ಕುರಿತು ವರದಿ ಮೌಲಿಕವಾದ ಆದರೆ ನಿಷ್ಪಕ್ಷವಾದ ಶಿಫಾರಸುಗಳನ್ನು ಮಂಡಿಸಿತು. ವರದಿ ತಾತ್ವಿಕ ಅಧ್ಯಯನ ತಳಹದಿಯ ಮೇಲೆ ತಯಾರಿಸಲಾಗಿತ್ತೆ ಹೊರತು ಸರ್ಕಾರದ ವೈಭವ-ವೈಫಲ್ಯತೆಗಳ ಷರಾ ಬರೆಯಲು ಹೊರಟಿರಲಿಲ್ಲ.

ಇಂಥ ಸಕಾಲಿಕ ಮತ್ತು ವಸ್ತುನಿಷ್ಟವಾದ ವರದಿಯೊಂದನ್ನು ಸಿದ್ದಪಡಿಸಿದ್ದು ನಾಡಿನ ವಿದ್ವತ್ ಲೋಕದ ಚಾರಿತ್ರಿಕ ಜವಾಬ್ದಾರಿಯಾಗಿದೆ. ಆದರೆ ಇಂಥ ಜವಾಬ್ದಾರಿಯನ್ನೇ ಅಲ್ಲಗಳೆಯುವ, ಅಧ್ಯಯನ ಕೇಂದ್ರದ ಪ್ರಯತ್ನವನ್ನೇ ನಿರಾಕರಿಸುವ ಸಂಗತಿಗಳು ಜರುಗಿದ್ದು ಆಘಾತಕಾರಿಯಾಗಿ ಪರಿಣಮಿಸಿವೆ. 24.11.2009 ರಂದು ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ ಆವರಣದಲ್ಲಿ ವರದಿಯನ್ನು ಬಿಡುಗಡೆ ಮಾಡಲೆಂದು ಬಂದಿದ್ದ ನೆರೆ ಹಾವಳಿ - ಪುನರ್ವಸತಿಯ ನೋಡಲ್ ಅಧಿಕಾರಿಯಾದ ಶಿವಾನಂದ ಜಾಮದಾರ್ ಅವರು ತೀರ ಹಗುರವಾಗಿ ಮಾತಾಡಿದ್ದು ಅಪ್ರಾಸಂಗಿಕವಾಗಿತ್ತು. ಅವರು ಮಾತಾಡಿದ ನಕಾರಾತ್ಮಕ ಧಾಟಿಯನ್ನು ಅನುಸರಿಸಿ ಸಭೆಯಲ್ಲಿ ಮಧ್ಯಪ್ರವೇಶ ಮಾಡಿದ ಹ[...] ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾ[...] ವಸಂತಕುಮಾರ್ ಅಧ್ಯಯನಕಾರರ ಮೇ[...] ಹರಿಹಾಯಲು ಪ್ರಾರಂಭಿಸಿದರು. ಅನಾವಶ್ಯಕವಾ[...] ಮೂಗು ತೂರಿಸಿದ ವಸಂತಕುಮಾರ ಅವರು ತಾ[...] ಪ್ರತಿನಿಧಿಸುತ್ತಿದ್ದ ವಿಶ್ವವಿದ್ಯಾಲಯದ ಘನತೆ-ಗೌರ[...] ವನ್ನು ಹಾಳುಗೆಡವಿದ್ದು ಸ್ವತಃ ಉಪಕುಲಪ[...] ಮುರಿಗೆಪ್ಪನವರನ್ನೇ ಪೇಚಿಗೆ ಸಿಲುಕಿಸಿತ್ತು.

ವರದಿಯಲ್ಲಿ ಸೂಚಿಸಲಾದ ಶಿಫಾರಸ್ಸುಗಳ[...] ಮೂಲೆಗೆ ತಳ್ಳಲೆಂದೇ ಕಾರ್ಯತಂತ್ರ ರೂಪಿಸಿ[...] ವಸಂತಕುಮಾರ್ ಅವರ ಪಟಾಲಂ ಈ ಸಂದರ್ಭ[...] ದಲ್ಲಿ ತನ್ನ ಕ್ರೌರ್ಯವನ್ನು ಮೆರೆದಿತ್ತು. ವರದಿಯ[...] ಏನಿದೆ, ಇನ್ನು ಏನಿರಬೇಕು ಎಂಬುದರ ಕಡೆ ಆ[...] ವಹಿಸದಂತೆ ಇಡೀ ಸಭೆಯಲ್ಲಿ ಗೊಂದಲ ನಿರ್ಮಿಸಿ[...] ಸಮಾಜಘಾತುಕ ಶಕ್ತಿಗಳು, ಅಧ್ಯಯನಕಾರರ[...] ಭಯೋತ್ಪಾದಕರೆಂದು ಆರೋಪಿಸುವ ಧ್ರಾಷ್[...] ತೋರಿದವು.

ವರದಿ ಬಿಡುಗಡೆ ಮೊದಲು ಬೆಳಗಿನಿಂದ ಅ[...] ವಿದ್ವಾಂಸರು, ಮಾಧ್ಯಮ ಮಿತ್ರರು, ಸಂಘ-ಸಂಸ್ಥೆ[...] ಪದಾಧಿಕಾರಿಗಳು ವರದಿಯ ಸಾಧಕ-ಬಾಧಕ[...] ಚರ್ಚೆ ಕೈಗೆತ್ತಿಕೊಂಡಿದ್ದರು. ಅಷ್ಟಕ್ಕೂ ಅವ[...] ಅನೇಕರು ನೆರೆ ಹಾವಳಿ ಪೀಡಿತ ಪ್ರದೇಶಗಳಿಂ[...] ಬಂದವರು ಇದ್ದರು. ಅವರೆಲ್ಲ ವರದಿಯಲ್ಲಿ ಇನ[...] ಏನೇನು ಸೇರಿಸಬೇಕು, ತನ್ಮೂಲಕ ನೆರೆ ಸಂತ್ರಸ್[...] ಬದುಕನ್ನು ಕಟ್ಟಿಕೊಡುವಲ್ಲಿ ಸರ್ಕಾರ, ಸಂ[...] ಸಂಸ್ಥೆಗಳು, ತಜ್ಞರು ಏನೆಲ್ಲಾ ಮಾಡಬಹುದು ಎ[...] ಚಿಂತನೆ ನಡೆಸಿದ್ದರು. ಇದಾವುದನ್ನು ಲೆಕ್ಕಿಸ[...] ವಸಂತಕುಮಾರ ಅವರು ತಾವೊಬ್ಬ ಪ್ರಜಾಪ್ರಭು[...] ದೇಶದ ಗೌರವಾನ್ವಿತ ವಿಶ್ವವಿದ್ಯಾಲಯವೊಂದ[...] ಸಿಂಡಿಕೇಟ್ ಸದಸ್ಯರೆಂಬುದನ್ನು ಮರೆದು ಪ[...] ಕೋಮುವಾದಿ ಜಾತ್ಯಾಂಧರಂತೆ ವರ್ತಿಸಿದ್ದು ನಾಚ[...] ತರಿಸುವಸಂಗತಿಯಾಗಿತ್ತು.

ಕೆರಳಿದ್ದು ಯಾಕೆ?

ಭಾರತ ತನ್ನನ್ನು ತಾನು ಜಾತ್ಯಾತೀ[...] ಧರ್ಮನಿರಪೇಕ್ಷ ರಾಷ್ಟ್ರವೆಂದು ಘೋಷಿಸಿಕೊಂಡಿ[...] ವಾಗಲೂ, ಅದು ಹಲವು ಸಾಮಾಜಿಕ ವೈರು[...] ಮತ್ತು ಧಾರ್ಮಿಕ ಅಸಹನೀಯತೆಯ ಜನರಿಂ[...] ತುಂಬಿದೆ. ಹೀಗಿರುವಾಗ ಎಲ್ಲಾಕಾಲದ ಎ[...]

ಮಹಿಳಾ ಸಂಬಂಧಿ ಶಿಫಾರಸ್ಸುಗಳು

ಲಿಂಗ ಸಂವೇದನೆ

ನೆರೆ ಬಂದಾಗಲೂ ಮತ್ತು ಆನಂತರವೂ ಮಹಿಳೆಯರು ನಾನಾ ನಮೂನೆಯ ಸಂಕಟ, ಒತ್ತಡಗಳನ್ನು ಅನುಭವಿಸಿದ್ದಾರೆ. ದಿಢೀರನೆ ದಾಳಿ ಮಾಡಿದ ಪ್ರವಾಹದ ಹೊತ್ತಲ್ಲಿ ಬಸುರಿಯರು, ಬಾಣಂತಿಯರು, ವೃದ್ಧೆಯರು, ಶಾರೀರಿಕ, ಮಾನಸಿಕ ಆಘಾತಗಳಿಗೆ ಒಳಗಾಗಿರುವವರು, ಮಹಿಳೆಯರು ಮನೆಯ ಕೆಲಸ, ಮಕ್ಕಳ ಪಾಲನೆ-ಪೋಷಣೆ ಮತ್ತು ಹೊಲಗದ್ದೆಯ ಅಥವಾ ಹೊರಗಿನ ಕೆಲಸ ಹೀಗೆ ಮೂರು ಜವಾಬ್ದಾರಿಯ ನೊಗಕ್ಕೆ ಹೆಗಲು ಕೊಡುತ್ತಿದ್ದಾರೆ. ನೆರೆ ಬಂದು ಹೋದ ಮೇಲೆ ಮಹಿಳಾ ದೃಷ್ಟಿಕೋನದಿಂದ ಪರಿಹಾರ ಅಥವಾ ವ್ಯವಸ್ಥೆ ಕಲ್ಪಿಸುವುದು ಆಗಲೇ ಇಲ್ಲ. ಉದಾಹರಣೆಗೆ ಬಿಜಾಪುರ ನಗರದಿಂದ ಹಠಾತ್ತನೆ ಸ್ಥಳಾಂತರಿಸಲ್ಪಟ್ಟ ನೂರಾರು ಕುಟುಂಬಗಳ ಅಡಿ '10X8' ಅಳತೆಯ ಶೆಡ್ಡಿನಲ್ಲಿ ವಾಸಕ್ಕೆ ನಿಲ್ಲಿಸಲಾಯಿತು. ಆದರೆ ಅಲ್ಲೆಲ್ಲೂ ಸಹ ಸ್ನಾನದ ಗೃಹ ಮತ್ತು ಶೌಚಾಲಯ ವ್ಯವಸ್ಥೆ ಮಾಡೇ ಇಲ್ಲ. ಈ ಪರಿಸ್ಥಿತಿ ಇಂದಿನ ಮತ್ತು ಹಿಂದಿನವಎಲ್ಲ ಪುನರ್ವಸತಿ ಕೇಂದ್ರಗಳಲ್ಲಿ ಇದೆ. ಅನೇಕ ಕಾರಣಗಳಿಂದ ಮಹಿಳೆಯರಿಗೆ ಪ್ರತ್ಯೇಕ ಸ್ನಾನದ ಕೋಣೆ ಬೇಕು. ಶೌಚಕ್ಕೆ ಕನಿಷ್ಠ ಮುಚ್ಚುಮರೆ ವ್ಯವಸ್ಥೆಯಾದರೂ ಮಾಡಬೇಕೆಂಬುದು ಸರ್ಕಾರಕ್ಕಾಗಲೀ, ಸಂಬಂದಪಟ್ಟ ಅಧಿಕಾರಿಗಳಿಗಾಗಲೀ ಅರಿವಿಗೆ ಬರುತ್ತಲೇ ಇಲ್ಲ.

ನೆರೆಯ ತರುವಾಯು ಗ್ರಾಮಗಳಿಗೆ ಭೇಟಿ ಕೊಟ್ಟಾಗ ಮಹಿಳೆಯರ ಜೀವನ ಇದೇ ಅತಂತ್ರ ಸ್ಥಿತಿಯಲ್ಲಿರುವುದು ಕಂಡು ಬಂದಿದೆ. ಸಂಪೂರ್ಣ ಜಲಾವೃತ್ತಗೊಂಡ ಗ್ರಾಮದ ಮಹಿಳೆಯರು ಈ ಕ್ಷಣಕ್ಕೂ ಬೀದಿಯ ಮೇಲೆ ಕಾಲ ನೂಕುತ್ತಿದ್ದಾರೆ. ಹದಿಹರೆಯದ ಮಹಿಳೆಯರು ಆಸರೆ ಇಲ್ಲದೆ ಆತಂಕವನ್ನು ಎದುರಿಸುತ್ತಿದ್ದಾರೆ. ಮಹಿಳೆಯರ ಮತ್ತು ಮಕ್ಕಳ ಹಿತದೃಷ್ಟಿಯಿಂದಲಾದರೂ ಬೇಗನೆ ಸುಸಜ್ಜಿತ ವಸತಿ ವ್ಯವಸ್ಥೆ ಕಲ್ಪಿಸಬೇಕು.

1. ಮಹಿಳೆಯರಿಗೆ ಮನೆಗೊಂದು ಸ್ನಾನದ ಕೋಣೆ ನಿರ್ಮಿಸಬೇಕು. ಮತ್ತು ಸೂಕ್ತ ಶೌಚಾಲಯ ವ್ಯವಸ್ಥೆಯಾಗಬೇಕು.
2. ಸಂಚಾರಿ ಹೆರಿಗೆ ಆಸ್ಪತ್ರೆಗಳ ವ್ಯವಸ್ಥೆಯಾಗಬೇಕು.
3. ನೆರೆ ಪೀಡಿತ ಪ್ರದೇಶದ ಮಹಿಳೆಯರಿಗೆ ನಿರಂತರವಾಗಿ ಸ್ಯಾನಿಟರಿ ಪ್ಯಾಡ್ ವಿತರಿಸಬೇಕು.
4. ಬಸುರಿ, ಬಾಣಂತಿ, ಮಕ್ಕಳಿಗೆ ಅವಶ್ಯಕ ಪೌಷ್ಠಿಕ ಆಹಾರ ವಿತರಿಸಬೇಕು.
5. ನೆರೆ ಪೀಡಿತ ಪ್ರದೇಶದ ವಿದ್ಯಾರ್ಥಿನಿಯರಿಗಾಗಿ ಹೆಚ್ಚುವರಿ ವಸತಿ ನಿಲಯ ಒದಗಿಸಬೇಕು.
6. ಪುನರ್ವಸತಿ ಮನೆಗಳಿಗೆ ಜಂಟಿ ಹಕ್ಕುಪತ್ರ ಕೊಡಬೇಕು.
7. ವಿಧವೆಯರು, ಒಂಟಿ ಮಹಿಳೆಯರು, ಪರಿತ್ಯಕ್ತೆಯರಿಗೆ ಮತ್ತು ಅಂಗವಿಕಲರಿಗೆ ಸುಪ್ರೀಕೋರ್ಟ್‌ನ ಆದೇಶದಂತೆ ಅಂತ್ಯೋದಯ ಕಾರ್ಡಗಳನ್ನು ಕೊಡಬೇಕು.
8. ದೇವದಾಸಿ ಮಹಿಳೆಯರಿಗೆ ಬಿಪಿಎಲ್ ಕಾರ್ಡ್ ಮತ್ತು ವಸತಿ ವ್ಯವಸ್ಥೆ ಕಲ್ಪಿಸಬೇಕು.

ಗೃಹಮಂತ್ರಿಗಳು ಎರಡೂ ಸದನಗಳಲ್ಲಿ ನೀಡಿದ ಹೇಳಿಕೆ ಕೇಂದ್ರೀಯ ತಂಡದ ಪಶ್ಚಿಮ ಬಂಗಾಲ ಭೇಟಿ ರಾಜ್ಯ ಸರಕಾರಕ್ಕೆ ನೆರವಾಗಲಿಕ್ಕಾಗಿಯೇ ಹೊರತು, ತೃಣಮೂಲ ಕಾಂಗ್ರೆಸ್ ಬಿಂಬಿಸಿದಂತೆ ಕಾನೂನು-ವ್ಯವಸ್ಥೆಯನ್ನು ಪರಿಶೀಲಿಸಲು ಅಲ್ಲ ಎಂಬ ಸಂಗತಿಯನ್ನು ಸ್ಪಷ್ಟಪಡಿಸಿತು. ಈ ತೃಣಮೂಲಿಗಳು ಭಯೋತ್ಪಾದನೆಯನ್ನು ಹರಿಯ ಬಿಡುವಲ್ಲಿ, ಮುಗ್ಧ ಜನಗಳ ಬಲಿ ತೆಗೆದುಕೊಳ್ಳುವಲ್ಲಿ, ಅಷ್ಟೇ ಅಲ್ಲ, ಕಾನೂನುಹೀನತೆ, ಅರಾಜಕತೆ ಸೃಷ್ಟಿಸುವಲ್ಲಿ ಮಾವೋವಾದಿಗಳೊಂದಿಗೆ ಶಾಮೀಲಾಗಿದ್ದಾರೆ. ಕಾಂಗ್ರೆಸ್ ತನ್ನ ಸಂಪುಟದಲ್ಲಿಯೇ ಇಂತಹ ನಗ್ನ ವೈರುಧ್ಯದೊಂದಿಗೆ ಹೇಗೆ ಬದುಕುತ್ತಿದೆ ಎಂದು ಅದೇ ವಿವರಿಸಬೇಕು.


ತೃಣಮೂಲಿಗಳೊಂದಿಗೆ ಇದೆಂತಹಾ ಕಾಂಗ್ರೆಸ್ ಸಹಜೀವನ!

ಕೇಂದ್ರ ಸರಕಾರ ಪಶ್ಚಿಮ ಬಂಗಾಲದಲ್ಲಿ ಕಾನೂನು ಮತ್ತು ವ್ಯವಸ್ಥೆಗೆ ಸಂಬಂಧಪಟ್ಟಂತೆ ಅಲ್ಲಿನ ರಾಜ್ಯ ಸರಕಾರದ ಅಧಿಕಾರಿಗಳೊಂದಿಗೆ ಚರ್ಚಿಸಲು ಕೇಂದ್ರ ಗೃಹ ಮಂತ್ರಾಲಯದ ಅಧಿಕಾರಿಗಳ ಒಂದು ತಂಡವನ್ನು ಕಳಿಸಿತು. ಇದು ಭಾರತೀಯ ಸಂವಿಧಾನದ ಒಕ್ಕೂಟ ರಚನೆಯನ್ನು ಅಕ್ಷರಶಃ ಉಲ್ಲಂಘಿಸಿದೆ ಎಂಬ ಕಾರಣಕ್ಕೆ ಇದನ್ನು ಸಿಪಿಐ(ಎಂ) ಬಲವಾಗಿ ಖಂಡಿಸಿತು. ರಾಜ್ಯ ಸರಕಾರದ ವ್ಯಾಪ್ತಿಯೊಳಗೆ ಇರುವ, ಸಂವಿಧಾನದ 'ರಾಜ್ಯ ಪಟ್ಟಿ'ಯಲ್ಲಿರುವ ವಿಷಯಗಳಲ್ಲಿ ಕೇಂದ್ರ ಸರಕಾರದ ಯಾವುದೇ ಮಧ್ಯಪ್ರವೇಶ ರಾಜ್ಯ ಸರಕಾರದೊಂದಿಗೆ ಸಮಾಲೋಚನೆ ಮತ್ತು ಒಪ್ಪಿಗೆಯಿಂದ ಮಾತ್ರವೇ ನಡೆಯಬೇಕು ಎಂದು ದೇಶದ ಸರ್ವೋಚ್ಚ ನ್ಯಾಯಾಲಯ ಹಲವು ಸಂದರ್ಭಗಳಲ್ಲಿ ತೀರ್ಪು ನೀಡಿದೆ.

ತೃಣಮೂಲ ಕಾಂಗ್ರೆಸ್ ಕೇಂದ್ರದ ತಂಡವನ್ನು ಕಳಿಸಿರುವುದು ಪಶ್ಚಿಮ ಬಂಗಾಲದಲ್ಲಿ ಕೇಂದ್ರದ ಮಧ್ಯಪ್ರವೇಶ ನಡೆಸುವ ಪ್ರಕ್ರಿಯೆಯಲ್ಲಿ ಮೊದಲ ಹೆಜ್ಜೆಯಾಗಿದ್ದು ಅಂತಿಮವಾಗಿ ಇದು ಚುನಾಯಿತ ಸರಕಾರದ ವಜಾ ಮತ್ತು 356ನೇ ಕಲಮಿನ ಪ್ರಕಾರ ರಾಷ್ಟ್ರಪತಿ ಆಳ್ವಿಕೆಯ ಹೇರಿಕೆಗೆ ದಾರಿ ಮಾಡಿಕೊಡುತ್ತದೆ ಎಂದು ವ್ಯಾಖ್ಯಾನ ಮಾಡಿತು. ಆ ರಾಜ್ಯದಲ್ಲಿ ರಾಷ್ಟ್ರಪತಿ ಆಳ್ವಿಕೆಯ ಅಡಿಯಲ್ಲಿ ಅವಧಿಗೆ ಮೊದಲೇ ಚುನಾವಣೆ ನಡೆಯಬೇಕೆಂಬುದು ತನ್ನ ಆಕಾಂಕ್ಷೆ ಎಂಬುದನ್ನು ಆ ಪಕ್ಷ ಸಾರ್ವಜನಿಕವಾಗಿಯೇ ಮತ್ತೆ-ಮತ್ತೆ ಹೇಳಿದೆ. ನಿಜಸಂಗತಿಯೆಂದರೆ ಇದೇ ಅದರ ಎಲ್ಲಾ ಚಟುವಟಿಕೆಗಳ ಏಕೈಕ ಗುರಿ. ಮಾವೋವಾದಿಗಳನ್ನು ಬಳಸಿಕೊಂಡು ಅವರು ಸತತವಾಗಿ ಹಿಂಸಾಚಾರವನ್ನು ಹುಟ್ಟುಹಾಕಿ, ಭಯೋತ್ಪಾದನೆ ಮಾಡಿ, ಅದನ್ನೇ ರಾಜ್ಯದಲ್ಲಿ ಕಾನೂನು-ವ್ಯವಸ್ಥೆ ಮುರಿದು ಬಿದ್ದಿದೆ ಎಂದು ಸಾಧಿಸಲು ಉಪಯೋಗಿಸುತ್ತಿದೆ. ಈ ನೆಪವೊಡ್ಡಿ ಅವರು ಕೇಂದ್ರ ಮಧ್ಯಪ್ರವೇಶಿಸಬೇಕು ಎನ್ನುತ್ತಿದ್ದಾರೆ. ಇದು ಅವರ ಸ್ಪಷ್ಟವಾದ ಕಾರ್ಯತಂತ್ರ. ಇದರ ಫಲಿತಾಂಶವೆಂದರೆ ಪಶ್ಚಿಮ ಬಂಗಾಲದ ಜನತೆಯ ಮೇಲೆ ಹಿಂದೆಂದೂ ಕಾಣದ ರೀತಿಯ ಕಷ್ಟಕೋಟಲೆಗಳ ಹೇರಿಕೆ. ಇದು ನೂರಾರು ಜೀವಗಳನ್ನು ಬಲಿ ತೆಗೆದುಕೊಂಡಿದೆ.

ಹಿಂದೆ ಸರಿದ ಯುಪಿಎ ಸರಕಾರ

ಸಂಸತ್ತಿನಲ್ಲಿ ಸಿಪಿಐ(ಎಂ)ನ ಪ್ರತಿಭಟನೆಗಳಿಗೆ ಪ್ರತಿಕ್ರಿಯಿಸಲೇಬೇಕಾಗಿ ಬಂದಾಗ ಗೃಹಮಂತ್ರಿಗಳು ಎರಡೂ ಸದನಗಳಲ್ಲಿ ಒಂದು ಹೇಳಿಕೆ ನೀಡಿದರು.



ಅದು ಗೃಹಮಂತ್ರಾಲಯದ ಅಧಿಕಾರಿಗಳ ಪಶ್ಚಿಮ ಬಂಗಾಲ ಭೇಟಿಯ ಅರ್ಥವೇನೆಂಬ ಬಗ್ಗೆ ತೃಣಮೂಲ ಕಾಂಗ್ರೆಸ್ ತಳೆದ ನಿಲುವಿನಿಂದ ಸರಕಾರ ಹಿಂದೆ ಸರಿದುದನ್ನು ತೋರಿಸಿದೆ. ಸರಕಾರ ನಾಲ್ಕು ಅಂಶಗಳನ್ನು ಯಾವುದೇ ಸಂದೇಹಕ್ಕೆ ಎಡೆಯಿಲ್ಲದಂತೆ ಹೇಳಿದೆ: 1. ಅಧಿಕಾರಿಗಳ ತಂಡದ ಭೇಟಿ ಸೆಣಸಾಟ ನಡೆಸಲು ಅಲ್ಲ; 2. ಅವರು ಕೇವಲ ರಾಜ್ಯ ಸರಕಾರದ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸುತ್ತಾರೆ; 3. ರಾಜ್ಯ ಸರಕಾರ ಕೇಳಿಕೊಂಡರೆ ಮತ್ತು ಅನುಕೂಲ ಕಲ್ಪಿಸಿದರೆ ಮಾತ್ರ ತಿಕ್ಕಾಟದ ಜಿಲ್ಲೆಗಳಿಗೆ, ಪ್ರದೇಶಗಳಿಗೆ ಭೇಟಿ ಕೊಡುತ್ತಾರೆ; 4. ಪಶ್ಚಿಮ ಬಂಗಾಲದ ರಾಜಕೀಯ ಪಕ್ಷಗಳಿಂದ ಅವರು ಮನವಿ ಪತ್ರವನ್ನು ಸ್ವೀಕರಿಸಬಹುದು, ಆದರೆ ಅವರೊಂದಿಗೆ ಯಾವುದೇ ಚರ್ಚೆ ನಡೆಸುವ ಆದೇಶ ಅವರಿಗಿಲ್ಲ.

ಈ ಭರವಸೆ ಈ ತಂಡದ ಭೇಟಿ ರಾಜ್ಯ ಸರಕಾರಕ್ಕೆ ನೆರವಾಗಲಿಕ್ಕಾಗಿಯೇ ಹೊರತು, ತೃಣಮೂಲ ಕಾಂಗ್ರೆಸ್ ಬಿಂಬಿಸಿದಂತೆ ಕಾನೂನು-ವ್ಯವಸ್ಥೆಯನ್ನು ಪರಿಶೀಲಿಸಲು ಅಲ್ಲ ಎಂಬ ಸಂಗತಿಯನ್ನು ಸ್ಪಷ್ಟಪಡಿಸಿತು. ಸದ್ಯ ಕೇಂದ್ರೀಯ ಮತ್ತು ರಾಜ್ಯದ ಭದ್ರತಾ ಪಡೆಗಳು ಲಾಲ್‌ಗಡ್ ಮತ್ತು ಮಿದ್ನಾಪುರದ ಇತರ ಸುತ್ತಲಿನ ಪ್ರದೇಶಗಳಲ್ಲಿ ಮಾವೋವಾದಿಗಳ ಹಿಂಸಾಚಾರವನ್ನು ಎದುರಿಸಲು ಕಾರ್ಯಾಚರಣೆ ನಡೆಸುತ್ತಿವೆ. ಈ ಪ್ರಯತ್ನ ಸಾಮಾನ್ಯ ಸ್ಥಿತಿ ಮತ್ತು ಈ ಪ್ರದೇಶಗಳಲ್ಲಿ ನಾಗರಿಕ ಆಡಳಿತ ಮರಳುವಂತೆ ಮಾಡಲಿಕ್ಕಾಗಿ.

ಪಾಠ ಕಲಿತಿಲ್ಲವೇ?

ಕಾಂಗ್ರೆಸ್ ಪಕ್ಷ ಈ ತೃಣಮೂಲ ಕಾಂಗ್ರೆಸನ್ನು ಆಳುವ ಕೂಟದ ಭಾಗವಾಗಿ ಹೇಗಾದರೂ ಇಟ್ಟುಕೊಳ್ಳಲು ಸಾಧ್ಯ ಎಂಬ ಪ್ರಶ್ನೆ ಸಹಜವಾಗಿ ಏಳುತ್ತದೆ. ಏಕೆಂದರೆ ಪ್ರಧಾನ ಮಂತ್ರಿಗಳು ಹಲವು ಸಂದರ್ಭಗಳಲ್ಲಿ, ಕೇಂದ್ರ ಗೃಹಮಂತ್ರಿಗಳು ಇನ್ನೂ ಹೆಚ್ಚು ಸಂದರ್ಭಗಳಲ್ಲಿ ಮಾವೋವಾದಿ ಹಿಂಸಾಚಾರ ಭಾರತದ ಆಂತರಿಕ ಭದ್ರತೆಗೆ ಅತಿ ಗಂಭೀರ ಬೆದರಿಕೆ ಎಂದು ಸಾರ್ವಜನಿಕವಾಗಿಯೇ ಹೇಳಿದ್ದಾರೆ. ಆದರೆ ಅತ್ತ ಈ ತೃಣಮೂಲ ಕಾಂಗ್ರೆಸ್ ಭಯೋತ್ಪಾದನೆಯನ್ನು ಹರಿಯ ಬಿಡುವಲ್ಲಿ, ಮುಗ್ಧ ಜನಗಳ ಬಲಿ ತೆಗೆದುಕೊಳ್ಳುವಲ್ಲಿ, ಅಷ್ಟೇ ಅಲ್ಲ, ಕಾನೂನುಹೀನತೆ, ಅರಾಜಕತೆ ಸೃಷ್ಟಿಸುವಲ್ಲಿ ಮಾವೋವಾದಿಗಳೊಂದಿಗೆ ಶಾಮೀಲಾಗಿದೆ. ಕಾಂಗ್ರೆಸ್ ತನ್ನ ಸಂಪುಟದಲ್ಲಿಯೇ ಇಂತಹ ನಗ್ನ ವೈರುಧ್ಯದೊಂದಿಗೆ ಹೇಗೆ ಬದುಕುತ್ತಿದೆ ಎಂದು ಅದೇ ವಿವರಿಸಬೇಕು.

ಮಾರಣಾಂತಿಕ ಹಲ್ಲೆಗಳು ಮತ್ತು ಭಯೋತ್ಪಾದನೆಯ ಮೂಲಕ ಸಿಪಿಐ(ಎಂ)ನ್ನು ಮತ್ತು ಎಡಪಂಥೀಯರನ್ನು ದುರ್ಬಲಗೊಳಿಸುವುದೇ ರಾಜಕೀಯ ಗುರಿಯಾಗಿದ್ದರೆ, ಅಂತಹವರು ಇತಿಹಾಸದಿಂದ ಪಾಠ ಕಲಿತಿಲ್ಲ ಎಂದೇ ಹೇಳಬೇಕಾಗುತ್ತದೆ. ಎಡ ದುಸ್ಸಾಹಸವಾದಿಗಳನ್ನು ಸಿಪಿಐ(ಎಂ) ಮೇಲೆ ದಾಳಿ ಮಾಡಲು ಬಳಸಿಕೊಳ್ಳುವುದು ಪಶ್ಚಿಮ ಬಂಗಾಲದಲ್ಲಿ ಹೊಸ ವಿದ್ಯಮಾನವೇನೂ ಅಲ್ಲ. 1972 ರಿಂದ 1977ರ ವರೆಗೆ ಐದು ವರ್ಷಗಳ ಕಾಲ ಇಂತಹುದೇ ಒಂದು ರಾಜಕೀಯ ಕೂಟ ಸಿಪಿಐ(ಎಂ) ವಿರುದ್ಧ ಅರೆ-ಫ್ಯಾಸಿಸ್ಟ್ ಭಯೋತ್ಪಾದನೆಯನ್ನು ಹರಿಯ ಬಿಟ್ಟಿತ್ತು. ಸಿಪಿಐ(ಎಂ) ಇದನ್ನು ಎದುರಿಸಿ ನಿಂತಿತಷ್ಟೇ ಅಲ್ಲ, ಮೂರು ದಶಕಗಳಿಗೂ ಹೆಚ್ಚು ಕಾಲ ಯಾರೂ ಅಲುಗಾಡಿಸಲಾರದ ರಾಜಕೀಯ ಮತ್ತು ಚುನಾವಣಾ ನೇತೃತ್ವವನ್ನು ಸ್ಥಾಪಿಸಿತು.

ಪಶ್ಚಿಮ ಬಂಗಾಳದ ಜನತೆಯ ಎದುರು ಯಾವುದೇ ವಿಶ್ವಾಸಾರ್ಹ ಪರ್ಯಾಯ ಧೋರಣಾ ದಿಕ್ಕನ್ನು ಮುಂದಿಡಲಾಗದೆ ಎಡರಂಗದ ಕ್ರೋಡೀಕರಣವನ್ನು ಮುರಿಯಲಾಗದ ತೃಣಮೂಲ ಕಾಂಗ್ರೆಸ್ ಭಯೋತ್ಪಾದನೆ ಮತ್ತು ಹಿಂಸಾಚಾರದ ಮೂಲಕ ಎಡರಂಗ ಸರಕಾರವನ್ನು ಇಳಿಸಿ ಅಧಿಕಾರ ಕಿತ್ತುಕೊಳ್ಳಲು ಮಾವೋವಾದಿಗಳಿಂದ ಮುಸ್ಲಿಂ ಮೂಲಭೂತವಾದಿಗಳ ಕೆಲವು ವಿಭಾಗಗಳ ವರೆಗೆ ಎಲ್ಲಾ ಛಾಯೆಗಳ ಪ್ರತಿಗಾಮಿಗಳೊಂದಿಗೆ ಕೈಜೋಡಿಸಿದೆ. ಬಂಗಾಲದಲ್ಲಿ ಈಗ ಹಲ್ಲೆಗಳು ಹೆಚ್ಚುತ್ತಿರುವುದು ತೃಣಮೂಲಿಗಳ ನೇತೃತ್ವದ ಈ ಅಪವಿತ್ರ ಕೂಟದಿಂದಾಗಿಯೇ. ಬಂಗಾಲ ಮತ್ತೆ 1970ರ ದಶಕದ ಕಾನೂನುಹೀನತೆ ಮತ್ತು ಅರಾಜಕತೆಯತ್ತ ಜಾರದಂತೆ ತಡೆಯಬೇಕಾದರೆ ಈ ಪ್ರಜಾಪ್ರಭುತ್ವ-ವಿರೋಧಿ ಕೂಟವನ್ನು ಮತ್ತು ಸಿಪಿಐ(ಎಂ) ಹಾಗೂ ಬಂಗಾಲದ ಜನತೆಯ ವಿರುದ್ಧ ಅದರ ಹಿಂಸಾತ್ಮಕ ಭಯೋತ್ಪಾದನೆಯನ್ನು ರಾಜಕೀಯವಾಗಿ ಮೂಲೆಗೊತ್ತಿ ಸೋಲಿಸಬೇಕಾಗಿದೆ.

('ಪೀಪಲ್ಸ್ ಡೆಮಾಕ್ರಸಿ' ಪತ್ರಿಕೆಯ ಸಂಪಾದಕೀಯ)

ಬಾಬಾಬುಡನ್ ಗಿರಿಯಲ್ಲಿ ಹವನ, ಹೋಮಗಳಿಗೆ ಅವಕಾಶ - ಸಿಪಿಐ(ಎಂ) ಖಂಡನೆ

ಬಾಬಾಬುಡನ್‌ಗಿರಿಯ ದರ್ಗಾ- ಪೀಠದ ಪರಿಸರದಲ್ಲಿ ಪಾದುಕೆ, ದತ್ತ ಮೂರ್ತಿಯ ಪೂಜೆ, ಹವನ ಹೋಮದಂತಹ ದತ್ತಮಾಲಾ- ದತ್ತಜಯಂತಿಯ ಆಚರಣೆಗೆ ಅವಕಾಶ ಕಲ್ಪಿಸುವ ಮೂಲಕ ರಾಜ್ಯದ ಬಿಜೆಪಿ ಸರ್ಕಾರ ಸರ್ವೋಚ್ಚ ನ್ಯಾಯಾಲಯದ ಆದೇಶವನ್ನು, ನಗ್ನವಾಗಿ ಉಲ್ಲಂಘಿಸಿದೆ ಎಂದು ಭಾರತ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿಯು ತೀವ್ರವಾಗಿ ಖಂಡಿಸಿದೆ.

ನೆಲದ ಕಾನೂನು, ಸಂವಿಧಾನವನ್ನು ಸಂರಕ್ಷಿಸಬೇಕಾದ ಸರ್ಕಾರವೇ ಅವೆಲ್ಲವನ್ನೂ ಧಿಕ್ಕರಿಸಿ ಎಂದೂ ಇಲ್ಲದ ಆಚರಣೆಗಳ ಮೂಲಕ ಗಾಳಿಗೆ ತೂರಿದ್ದು ಅಕ್ಷಮ್ಯ ಎಂದು ಸಿಪಿಐ(ಎಂ) ಟೀಕಿಸಿದೆ.

ಸಂಘ ಪರಿವಾರದ ಕ್ರಮಗಳು ಶತಮಾನಗಳ ಕಾಲದಿಂದಲೂ ನಡೆದು ಬಂದ ಪರಂಪರೆಗೆ ಮಸಿ ಬಳಿಯುವಂತಹದ್ದಾಗಿದೆ. ಮುಖ್ಯವಾಗಿ ಸುಪ್ರಿಂ ಕೋರ್ಟ್‌ನ ನಿರ್ದೇಶನದಂತೆ 1975 ರ ಹಿಂದಿನ ಆಚರಣೆಗೆ ಮಾತ್ರ ಸೀಮಿತವಾಗಬೇಕು ಎಂಬ

ಪುಟ 10ಕ್ಕೆ

ಆರೆಸ್ಸೆಸ್ ತಾನು ಬಿಜೆಪಿಯನ್ನು ನಿಯಂತ್ರಿಸುವುದಿಲ್ಲ, ರಾಜಕೀಯಕ್ಕೂ ತನಗೂ ಸಂಬಂಧವಿಲ್ಲ ಎನ್ನುತ್ತದೆ. ಆದರೆ ಹಿಂದೂ ರಾಷ್ಟ್ರದ ಮತಾಂಧ ಸಿದ್ಧಾಂತವನ್ನು ಸಮಾಜದ ಮೇಲೆ ಹೇರಲು ಬಿಜೆಪಿ ಎಂಬ ರಾಜಕೀಯ ಪಕ್ಷವನ್ನು ಅದು ನಿಯಂತ್ರಿಸುತ್ತಿದೆ.

ಆರ್‌ಎಸ್‌ಎಸ್ ಕಪಿಮುಷ್ಟಿಯಲ್ಲಿ ಬಿಜೆಪಿ



ನಿತ್ಯಾನಂದ ಸ್ವಾಮಿ

2009ರ ಚುನಾವಣಾ ಸೋಲಿನ ನಂತರ, ಭಾರತೀಯ ಜನತಾ ಪಕ್ಷವು ತೀವ್ರವಾದ ಸಂಘಟನಾ ಬಿಕ್ಕಟ್ಟಿಗೆ ಒಳಗಾಗಿದೆ. ಲೋಕಸಭೆಯಲ್ಲಿ ಹಾಗೂ ರಾಜ್ಯಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗಿ ಯಾರಿರಬೇಕು ಎಂಬ ವಿಷಯದಲ್ಲಿ ಮೊದಲು ಪಕ್ಷದೊಳಗಿನ ಭಿನ್ನಾಭಿಪ್ರಾಯಗಳು ಹೊರಬಿದ್ದವು. ಇದಾದ ಬಳಿಕ ಜಸ್ವಂತ್ ಸಿಂಗ್ ಅವರು ಜಿನ್ನಾ ಮತ್ತು ದೇಶ ವಿಭಜನೆಯ ಕುರಿತು ಬರೆದ ಪುಸ್ತಕಕ್ಕಾಗಿ ಅವರನ್ನು ಪಕ್ಷದಿಂದ ವಜಾ ಮಾಡಲಾಯಿತು. ಇದರೊಂದಿಗೆ ಪಕ್ಷದಲ್ಲಿ ಬಹಿರಂಗ ಟೀಕೆ ಟಿಪ್ಪಣಿಗಳು ಹೆಚ್ಚಾದವು.

ವೈರುಧ್ಯಗಳು

ಬಿಜೆಪಿಯಲ್ಲಿ ಇಂದು ಬುಗಿಲೆದ್ದಿರುವ ನಾಯಕತ್ವದ ಕುರಿತು ಬಿಕ್ಕಟ್ಟಿನ ಹಿಂದೆ ಇತ್ಯರ್ಥವಾಗದಿರುವ ವೈರುಧ್ಯವಿದೆ. 2004 ರ ಲೋಕಸಭಾ ಚುನಾವಣೆಯ ಸೋಲಿನೊಂದಿಗೇ ಈ ವೈರುಧ್ಯ ಹೆಚ್ಚೆಚ್ಚು ತಲೆ ಎತ್ತುವಂತಾಗಿತ್ತು. 2004 ರ ಚುನಾವಣೆಯಲ್ಲಿ ಬಿಜೆಪಿಯ ಅದ್ವಿತೀಯ ನಾಯಕ ಅಟಲ್ ಬಿಹಾರಿ ವಾಜಪೇಯಿ ಅವರೇ ಮತ್ತೆ ಎರಡನೇ ಬಾರಿಗೆ ದೇಶದ ಪ್ರಧಾನ ಮಂತ್ರಿಯಾಗುತ್ತಾರೆ ಎಂದು ಬಿಂಬಿಸಲಾಗಿತ್ತಾದರೂ ದೇಶದ ಜನತೆ ಬಿಜೆಪಿಗೆ ಜನಾದೇಶ ನೀಡಲಿಲ್ಲ. 2009 ರ ಚುನಾವಣೆಯಲ್ಲಿ ಬಿಜೆಪಿಯ 'ಉಕ್ಕಿನ ಮನುಷ್ಯ' ಲಾಲ ಕೃಷ್ಣ ಅಡ್ವಾಣಿ ಅವರನ್ನು ಪ್ರಧಾನ ಮಂತ್ರಿ ಅಭ್ಯರ್ಥಿ ಎಂದು ಬಿಂಬಿಸಿದಾಗಲೂ ಬಿಜೆಪಿಗೆ ಅಗತ್ಯ ಜನ ಬೆಂಬಲ ದೊರೆಯಲಿಲ್ಲ. ಎರಡೂ ಚುನಾವಣೆಯಲ್ಲಿ ಬಿಜೆಪಿಗೆ ಅಧಿಕಾರಕ್ಕೆ ಬರಲು ಸಾಧ್ಯವಾಗದೇ ಹೋದದ್ದು ಬಿಜೆಪಿಯಲ್ಲಿ ಆಂತರಿಕ ತಳಮಳವನ್ನು ಉಂಟುಮಾಡಿತು. ಬಿಜೆಪಿ ನಾಯಕತ್ವದಲ್ಲಿ ಒಂದು ವಿಭಾಗ ಬಿಜೆಪಿಯ ಚೌಕಟ್ಟನ್ನು ಇನ್ನಷ್ಟು ವಿಶಾಲಗೊಳಿಸಲು ಮತ್ತು ಆ ಮೂಲಕ ಹೊಸ ಮಿತ್ರರನ್ನು ಸೆಳೆಯಲು ಪ್ರಯತ್ನಪಟ್ಟಿತು. ಆದರೆ ಬಿಜೆಪಿಯನ್ನು ನಿಯಂತ್ರಿಸುತ್ತಿರುವ ಆರೆಸ್ಸೆಸ್ ಇದಕ್ಕೆ ಅವಕಾಶ ಕೊಡಲಿಲ್ಲ. ಜಿನ್ನಾ ಬಗ್ಗೆ ಆರೆಸ್ಸೆಸ್ ನಿಲುವಿಗೆ ವಿರುದ್ಧವಾಗ ಅಭಿಪ್ರಾಯ ವ್ಯಕ್ತಪಡಿಸಿದ್ದಕ್ಕಾಗಿ ಅದ್ವಾಣಿ ಅಧ್ಯಕ್ಷ ಸ್ಥಾನಕ್ಕೆ ರಾಜಿನಾಮೆ ಕೊಡಬೇಕಾಯಿತು. ಆರೆಸ್ಸೆಸ್ ಬಿಜೆಪಿಯನ್ನು ಹೇಗೆ ನಿಯಂತ್ರಿಸುತ್ತದೆ ಎಂಬುದಕ್ಕೆ ಇದೊಂದು ಪುರಾವೆಯಾಗಿದೆ.

ಸುಳ್ಳು-ಸತ್ಯವಾಗಿಸುವ ಅದ್ಭುತ

ಆರೆಸ್ಸೆಸ್ ತಾನೊಂದು ಸಾಂಸ್ಕೃತಿಕ ಸಂಘಟನೆಯೆಂದು ಬಿಜೆಪಿಗೆ ತಾನು ಯಾವುದೇ ನಿರ್ದೇಶನವನ್ನು ನೀಡುವುದಿಲ್ಲವೆಂದು ಅದು ಆಗಾಗ ಹೇಳುತ್ತಿರುತ್ತದೆ. ಇತ್ತೀಚೆಗೆ ಬೆಂಗಳೂರಿಗೆ ಬಂದ ಸರ್ಸಂಘಚಾಲಕ ಮೋಹನ್ ಭಾಗವತ್ ಅದನ್ನೇ ಹೇಳಿ ಹೋಗಿದ್ದಾರೆ. ಆರೆಸ್ಸೆಸ್‌ನ ಇಂತಹ ಸುಳ್ಳುಗಳನ್ನು ಯಾರು ನಂಬುತ್ತಾರೆ? ಆರೆಸ್ಸೆಸ್‌ಗೆ ಸುಳ್ಳುಗಳನ್ನು ಸತ್ಯವಾಗಿಸುವ 'ಅದ್ಭುತ' ಸಾಮರ್ಥ್ಯವಿದೆ ಎನ್ನುವುದು ನಿಜ. ಆದರೆ ಬಿಜೆಪಿಗೂ ತನಗೂ ಏನೂ ಸಂಬಂಧವಿದೆ ಎನ್ನುವುದು ನಿಜ. ಆದರೆ ಬಿಜೆಪಿಗೂ ತನಗೂ ಏನೂ ಸಂಬಂಧವಿಲ್ಲ ಎಂದು ಆರೆಸ್ಸೆಸ್ ಹೇಳುತ್ತಿರುವುದು ಹಾಸ್ಯಾಸ್ಪದ ಅಷ್ಟೇ.

ದ್ವೇಷ ಭಕ್ತರು

ಎಷ್ಟೋ ಜನ ಭಾರತೀಯರು ಇಂದಿಗೂ ಆರೆಸ್ಸೆಸ್ ಅಂದರೆ ಒಂದು ಸಾಂಸ್ಕೃತಿಕ ಸಂಘಟನೆ ಎಂದೇ ನಂಬಿದ್ದಾರೆ. ರಾಷ್ಟ್ರದ ಹಿತಕ್ಕಾಗಿ ಶ್ರಮಿಸುತ್ತಿರುವ ನಿಸ್ವಾರ್ಥಿ ದೇಶಭಕ್ತರ ಸಂಘಟನೆ ಎಂದು ತಿಳಿದಿದ್ದಾರೆ. ಆದರೆ ಅದೊಂದು ದೇಶಭಕ್ತರ ಸಂಘಟನೆಯಲ್ಲ, ಅದೊಂದು ದ್ವೇಷ ಭಕ್ತರ ಸಂಘಟನೆ. ಅದು ದ್ವೇಷವನ್ನೇ ಉಸಿರಾಡುತ್ತದೆ, ದ್ವೇಷವನ್ನೇ ಕಾರುತ್ತದೆ. 'ಹಿಂದು ಸ್ವಯಂ ಸೇವಕ ಸಂಘ' ಎಂದು ಅದು ಹೆಸರು ಇಟ್ಟುಕೊಂಡಿಲ್ಲ. 'ರಾಷ್ಟ್ರ'ಅನ್ನುವುದು ಆರೆಸ್ಸೆಸ್‌ಗೆ 'ಹಿಂದೂ ರಾಷ್ಟ್ರ'.



ಹಿಂದುಗಳ ರಾಷ್ಟ್ರ. ಇಲ್ಲಿ ಹಿಂದುಗಳಲ್ಲದವರಿಗೆ ಯಾವುದೇ ಮಾನ್ಯತೆ ಇಲ್ಲ. ಹಿಂದುಗಳಲ್ಲದವರು ಇಲ್ಲಿ ಹಿಂದುಗಳೊಂದಿಗೆ ಸಮಾನವಾದ ಯಾವ ಹಕ್ಕುಗಳನ್ನು ಕೇಳುವಂತಿಲ್ಲ. ಅಂತಹ 'ಹಿಂದೂ ರಾಷ್ಟ್ರ'ವನ್ನು ಕಟ್ಟುವುದೇ ಅದರ ಗುರಿ. ಅದೊಂದು ರಾಜಕೀಯ ಗುರಿ ಎನ್ನುವುದರಲ್ಲಿ ಸಂಶಯವಿಲ್ಲ. ಆ ಗುರಿ ಸಾಧನೆಗಾಗಿ ಅದು ಹಿಂದೂಗಳ ಸಂಘಟನೆಯಲ್ಲಿ ತೊಡಗಿದೆ. ಹಿಂದೂ ಯುವಕರಲ್ಲಿ ಹಿಂದೂಯೇತರರ ಬಗ್ಗೆ ದ್ವೇಷವನ್ನು ಬೆಳೆಸುತ್ತಾ ತನ್ನ ಅತ್ಯಮತ ಸಂಕುಚಿತವಾದ ಗುರಿ ಸಾಧನೆಗಾಗಿ ಶ್ರಮಿಸುತ್ತಿದೆ.

ಆಕ್ಟೋಪಸ್ ಬಾಹು

ದಿನನಿತ್ಯದ ರಾಜಕೀಯದಲ್ಲಿ ಅದು ಭಾಗವಹಿಸುವುದಿಲ್ಲ ಎಂಬುದೇನೋ ನಿಜ. ಆದರೆ ಅದಕ್ಕಾಗಿ ಆರೆಸ್ಸೆಸ್ ಭಾರತೀಯ ಜನತಾ ಪಕ್ಷ ಎಂಬ ರಾಜಕೀಯ ಪಕ್ಷವನ್ನು ಹುಟ್ಟುಹಾಕಿದೆ. ಆರೆಸ್ಸೆಸ್ 1925 ರಲ್ಲಿ ಸ್ಥಾಪನೆಯಾಯಿತು. ಅದರ ಸ್ಥಾಪಕರಾದ ಡಾ.ಕೇಶವ ಬಲಿರಾಮ ಹೆಡ್ಗೆವಾರ್ ಒಬ್ಬ ಮೆಡಿಕಲ್ ಡಾಕ್ಟರ್. ವಿ.ಡಿ.ಸಾವರ್ಕರ್ ಅವರ ಅಣ್ಣ ಬಾಬುರಾವ್ ಸಾವರ್ಕರ್ ಅವರ ನೆರವಿನಿಂದ ಪಶ್ಚಿಮ ಮಹಾರಾಷ್ಟ್ರದಲ್ಲಿ ಆರೆಸ್ಸೆಸ್ ವಿಸ್ತರಣೆ ಆಯಿತು. 1940 ರಲ್ಲಿ ಹೆಡ್ಗೆವಾರ್ ನಿಧನರಾದಾಗ ಮಾಧವ್ ಸದಾಶಿವ್ ಗೋಳ್ವಾಳ್ಕರ್ ಅದರ ಸರ್ಸಂಘಚಾಲಕರಾಗಿ ಆಯ್ಕೆಯಾದರು. ಇವರ ಕಾಲಾವಧಿಯಲ್ಲಿ ಕೋಮುಗಲಭೆಗಳನ್ನು ಹುಟ್ಟುಹಾಕುವ ಮೂಲಕ ಆರೆಸ್ಸೆಸ್ ವ್ಯಾಪಕವಾಗಿ ಬೆಳೆಯಿತು.

1952 ರ ಪ್ರಥಮ ಸಾರ್ವತ್ರಿಕ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು 1951, ಅಕ್ಟೋಬರ್ 21 ರಂದು ಆರೆಸ್ಸೆಸ್ 'ಭಾರತೀಯ ಜನ ಸಂಘ' ಎಂಬ ರಾಜಕೀಯ ಪಕ್ಷವನ್ನು ಹುಟ್ಟುಹಾಕಿತು. ಹೀಗೆ ಆರೆಸ್ಸೆಸ್ ಎಂಬ ಫ್ಯಾಸಿಸ್ಟ್ ಸಂಘಟನೆಗೆ 'ಬಿಜೆಎಸ್' ಎಂಬ 'ರಾಜಕೀಯ ತೋಳು' ದೊರಕುವಂತಾಯಿತು. ಮುಂದೆ 1977 ರಲ್ಲಿ ಬಿಜೆಎಸ್ ಜನತಾ ಪಾರ್ಟಿಯಲ್ಲಿ ವಿಲೀನವಾಯಿತು. 1980 ರಲ್ಲಿ ಜನತಾ ಪಾರ್ಟಿಯನ್ನು ತೊರೆದು ಹೊರಬಂದ ಬಿಜೆಎಸ್ 'ಭಾರತೀಯ ಜನತಾ ಪಕ್ಷ' ಎಂಬ ಹೆಸರಿನೊಂದಿಗೆ ಪುನರ್ ಅವತಾರ ತಾಳಿತು. ಇದೇ ಅವಧಿಯಲ್ಲಿ ಅಂದರೆ 1964 ರಲ್ಲಿ

ಪರಿಷತ್ (ವಿಎಚ್‌ಪಿ), ಅನ್ನು ಸ್ಥಾಪಿಸಿದರು. ವಿಹೆಚ್‌ಪಿ 1984 ರಲ್ಲಿ 'ಬಜರಂಗದಳ'ವನ್ನು ಅಸ್ತಿತ್ವಕ್ಕೆ ತಂದಿತು. ಈ ಮೂರು ಸಂಘಟನೆಗಳನ್ನು ಆರೆಸ್ಸೆಸ್ ತ್ರಿಶೂಲವಾಗಿ ಬಳಸುತ್ತಾ ದೇಶದ ಉದ್ದಗಲಕ್ಕೂ ತನ್ನ ಆಕ್ಟೋಪಸ್ ಬಾಹುಗಳನ್ನು ಹರಡಿಕೊಂಡಿದೆ.

ಲಿಬರ್ಹಾನ್ ವರದಿಯೂ ಸಹ ಆರೆಸ್ಸೆಸ್ಸಿನ ನಿರ್ದೇಶನಕ್ಕೆ ಅನುಗುಣವಾಗಿ ಆರೆಸ್ಸೆಸ್, ಬಿಜೆಪಿ, ವಿಹೆಚ್‌ಪಿ ಮತ್ತು ಬಜರಂಗದಳದ ಕಾರ್ಯಕರ್ತರು ಬಾಬ್ರಿ ಮಸೀದಿಯನ್ನು ಧ್ವಂಸ ಮಾಡಿದರು ಎಂದು ಸ್ಪಷ್ಟಪಡಿಸಿದೆ. ಆರೆಸ್ಸೆಸ್ ಅದನ್ನು ಒಂದು ರಾಜಕೀಯ ಆಂದೋಲನ ಎಂದು ಬಣ್ಣಿಸುತ್ತಾ ಬಂದಿದೆ. ಆದ್ದರಿಂದ ಆರೆಸ್ಸೆಸ್ ಒಂದು ರಾಜಕೀಯ ಸಂಘಟನೆ ಅಲ್ಲ ಎಂದು ಅದು ಹೇಳುತ್ತಿರುವುದು ಒಂದು ದೊಡ್ಡ ಸುಳ್ಳು. ಆರೆಸ್ಸೆಸ್ ಮತ್ತು ಬಿಜೆಪಿ ನಡುವಿನ 'ಶ್ರಮ ವಿಭಜನೆ' ಗುಟ್ಟಿನ ವಿಷಯವಾಗಿ ಉಳಿದಿಲ್ಲ.

ಎಲ್ಲಿ ನೈತಿಕತೆ?

ಕರ್ನಾಟಕದ ಬಿಜೆಪಿಯಲ್ಲಿ ಇತ್ತೀಚೆಗೆ ತಲೆದೋರಿದ ಬಿಕ್ಕಟ್ಟಿನ ಸಂದರ್ಭದಲ್ಲಿಯೂ ಆರೆಸ್ಸೆಸ್ ನಿರ್ವಹಿಸಿದ ಪಾತ್ರವನ್ನು ನಾಡಿನ ಜನರೆಲ್ಲರೂ ಕಂಡಿದ್ದಾರೆ. ಮುಖ್ಯಮಂತ್ರಿ ಯೆಡ್ಡಿ ಪಾಳಯದ ಮಂತ್ರಿಗಳು ಚಡ್ಡಿ ಧರಿಸಿ ಪ್ರದರ್ಶನ ಮಾಡುವ ಮೂಲಕ ಆರೆಸ್ಸೆಸ್‌ಗೆ ತಮ್ಮ ನಿಷ್ಠೆಯನ್ನು ಸಾಬೀತುಪಡಿಸಿದ್ದಾರೆ ಮತ್ತು ಆ ಮೂಲಕ ಅಧಿಕಾರದ ಭಿಕ್ಷೆ ಬೇಡಿದ್ದಾರೆ. ಅದೇ ರೀತಿಯಲ್ಲಿ ಅಲ್ಲದಿದ್ದರೂ ಬಳ್ಳಾರಿಯ ರೆಡ್ಡಿಗಳು ಸಹ ಆರೆಸ್ಸೆಸ್ ಕವಾಯತ್‌ನಲ್ಲಿ ಕಾಣಿಸಿಕೊಂಡು ತಮ್ಮ 'ಗುರುವಂದನೆ' ಸಲ್ಲಿಸಿದ್ದಾರೆ. ಅಂತಹ ಗಣಿಗಳ್ಳರ ಸಹವಾಸ ಬೇಡ ಎಂದು ಯೆಡ್ಡಿಯವರಿಗಾಗಲೀ, ದೇಶದ ಸಂಪತ್ತು ಲೂಟಿ ಮಾಡಬೇಡಿ ಎಂದು ರೆಡ್ಡಿಗಳಿಗಾಗಲೀ ಉಪದೇಶ ಮಾಡಲು ಭಾಗವತರು ಮುಂದಾಗಲಿಲ್ಲ. ಅಂತಹ ನೈತಿಕ ಶಕ್ತಿಯೂ ಭಾಗವತರಿಗೆ ಇರಲಿಲ್ಲ ಎಂದು ಹೇಳುವುದೇ ಹೆ[illegible] ಸರಿಯಾದಿತು.

ಬಿಜೆಪಿ ಅಧ್ಯಕ್ಷರ ಹೇರಿಕೆ

ಮುಂದಿನ ಪಾರ್ಲಿಮೆಂಟ್ ಚುನಾವಣೆಗಳಿ[illegible] ಮುಂಚೆಯೇ ಅಡ್ವಾಣಿ ವಿರೋಧ ಪಕ್ಷದ ಮುಖ್ಯಸ್ಥರ ಸ್ಥಾನದಿಂದ ಕೆಳಗಿಳಿಯುವರೆಂದು ನಿರೀಕ್ಷಿಸಲಾಗಿದೆ. ಜನವರಿ 2010 ಕ್ಕೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ರಾಜನಾಥಸಿಂಗ್‌ರ ಅವಧಿ ಮುಗಿಯಲಿದೆ. ಬಿಜೆಪಿ ನೂತನ ಅಧ್ಯಕ್ಷರು ಯಾರೆಂದು ಸ್ವತ: ಆರೆಸ್ಸೆಸ್ ನಿರ್ಧರಿಸುತ್ತದೆ.

ಈಗ ಮಹಾರಾಷ್ಟ್ರ ರಾಜ್ಯದ ಬಿಜೆಪಿಯ ಮುಖಂಡರಾಗಿರುವ ನಿತಿನ್ ಗಡ್ಕರಿಯವರನ್ನು ಸೂಚಿಸಲು ಆರೆಸ್ಸೆಸ್ ಈಗಾಗಲೇ ನಿರ್ಧರಿಸಿದೆ ಎಂಬ ವರದಿಗಳು ವ್ಯಾಪಕವಾಗಿ ಕೇಳಿಬರುತ್ತಿವೆ. ರಾಷ್ಟ್ರೀಯ ರಾಜಕೀಯ ಪಕ್ಷವೊಂದರ ಅಧ್ಯಕ್ಷರು ಆ ಪಕ್ಷದ ಸಂಘಟನೆಯೊಳಗೆ ಪ್ರಜಾಸತ್ತಾತ್ಮಕ ವಿಧಾನದ ಮೂಲಕ ಆಯ್ಕೆಯಾಗುವುದಿಲ್ಲ. ಹೊರಗಿನಿಂದ ಹೇರಲಾಗುತ್ತದೆ ಎಂಬ ಅಂಶವು ಏನನ್ನು ಸೂಚಿಸುತ್ತದೆ. ಒಂದು ಬಿಜೆಪಿಯೊಳಗೆ ಆಂತರಿಕ ಪ್ರಜಾಪ್ರಭುತ್ವ ಎಂಬುದು ಇಲ್ಲ. ಎರಡು ಆರೆಸ್ಸೆಸ್ ಬಿಜೆಪಿಯನ್ನು ನಿಯಂತ್ರಿಸಿ ನಿರ್ದೇಶನ ನೀಡುತ್ತದೆ. ಬಿಜೆಪಿ ಆರೆಸ್ಸೆಸ್‌ನ ರಾಜಕೀಯ

ಗುಡ್ಡ - ಬೆಟ್ಟ ಹತ್ತಿ ಇಳಿದು ಗಣಿಗಳ್ಳರ - ಗಡಿಕಳ್ಳರ ತಡಕಾಟ

ಸುಪ್ರೀಂಕೋರ್ಟ್‌ಗೆ ವರದಿ ಸಲ್ಲಿಸಿದ ಕೇಂದ್ರ ಸರ್ಕಾರದ ಆಯೋಗವೊಂದು ಕರ್ನಾಟಕ -ಆಂಧ್ರಗಡಿಯಲ್ಲಿ ಕರ್ನಾಟಕ ಗಡಿ ನೂರಾರು ಚದರ ಕಿ.ಮೀ.ಗಳಷ್ಟು ಒತ್ತುವರಿಯಾಗಿದೆ. ಅರಣ್ಯ ಕಾಯಿದೆ ಮತ್ತಿತರ ಅಕ್ರಮ ಗಣಿಗಾರಿಕೆ ಅವ್ಯಾಹತವಾಗಿ ನಡೆಯುತ್ತಿದೆ ಎಂದು ವರದಿ ನೀಡಿದೆ. ಆರು ಗಣಿಗಳಲ್ಲಿ ಗಣಿಗಾರಿಕೆ, ಅದಿರು ಸಾಗಾಣಿಕೆಗೆ ನಿಷೇಧ ಹೇರಲಾಗಿದೆ. ಪ್ರಸಿದ್ಧ ರೆಡ್ಡಿ ಗಣಿ ಮಾಫಿಯಾ ವಿರುದ್ಧದ ಈ ವಿಜಯದಲ್ಲಿ ಸಿಪಿಐ(ಎಂ) ಪಕ್ಷದ್ದೇ ಮೊದಲ ಹೆಜ್ಜೆ ಮತ್ತು ನಿರಂತರ ದೃಢ ನಿಲುವು.

ಜಿ.ಎನ್.ನಾಗರಾಜ್

ಅಂದು ಇನ್ನೂ ಚುಮು ಚುಮು ನಸುಕಿನ ಹೊತ್ತು ಮಂಜು ಮುಸುಕಿದ ಬೆಟ್ಟಗಳ ನೆತ್ತಿಯ ಮೇಲೆ ನಿಂತಿದ್ದೆವು ನಾವು. ಸಿಪಿಎಂ ನ ಬಳ್ಳಾರಿ ಜಿಲ್ಲಾ ಸಮಿತಿ ಸದಸ್ಯರು, ಜಿಲ್ಲಾ ಸಮಿತಿ ಕಾರ್ಯದರ್ಶಿ ಬಸವರಾಜ್ ಮತ್ತು ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಜಿ.ಎನ್.ನಾಗರಾಜ್, ಆ ಪ್ರದೇಶದಲ್ಲಿ ಸೆಕ್ಷನ್ 144 ಹಾಕಲಾಗಿದೆ, ಯಾರೂ ಅಲ್ಲಿಗೆ ಹೋಗುವಂತಿಲ್ಲ ಎಂಬ ಆಜ್ಞೆಗಳನ್ನು ಮುರಿದು ಅದನ್ನು ಜಾರಿ ಮಾಡುವ ಪೊಲೀಸರು ಎಚ್ಚೆತ್ತು ನಮ್ಮನ್ನು ಅಡ್ಡಗಟ್ಟುವ ಮೊದಲೇ ಬೆಟ್ಟದ ತುದಿಯನ್ನು ಸೇರಿಯಾಗಿತ್ತು. ಆ ಪ್ರದೇಶದ ವಿವರಣೆಯನ್ನು ಪಡೆಯುತ್ತ ಕಾಯುತ್ತಿದ್ದೆವು- ಮಾಧ್ಯಮ ಬಳಗದ ಬರುವಿಗಾಗಿ. ಒಂದರ್ಧ ಗಂಟೆಯಲ್ಲಿ ಕೆಲವರು ನಮ್ಮನ್ನು ಕೂಡಿಕೊಂಡರು. ಕೂಡಲೇ ನಮ್ಮ ಚಾರಣ(ಬೆಟ್ಟಗಳನ್ನು ಏರುವ ಸಾಹಸಕ್ಕೆ ಚಾರಣ ಎನ್ನುತ್ತಾರೆ) ಆರಂಭ. 'ಏನಾದಷ್ಟೂ ನಮ್ಮ ಉದ್ದೇಶ ವಿಫಲವಾಗುತ್ತದೆ ಎಂದು.

ಹಲವು ತೆರನ ಗಣಿಗಾರಿಕೆ

ಅದು ಪೂರ್ವ ಘಟ್ಟಗಳ ಬೆಟ್ಟಗಳ ಶ್ರೇಣಿ. ಅತ್ಯ ಬಿರುಬೇಸಗೆಯ ಬಳ್ಳಾರಿ ಜಿಲ್ಲೆಯಲ್ಲಿ ಹಸಿರಿನಿಂದ ಕೂಡಿದ ತಂಪಾದ ಆಹ್ಲಾದಕರ ವಾತಾವರಣ. ಅಲ್ಲಿ ಸುತ್ತಮುತ್ತಲ ಹಲವಾರು ಗುಡ್ಡಗಳು ವಿವಿಧ ಗಣಿ ಕಂಪನಿಗಳಿಗೆ ಗುತ್ತಿಗೆಯಾಗಿ ಇಡಿ ಇಡೀ ಗುಡ್ಡವನ್ನೇ ನೆಲಸಮ ಮಾಡಿಬಿಡುವಂತೆ ದೈತ್ಯ ಯಂತ್ರಗಳು ಘೋರ್ಗರೆಯುತ್ತಿದ್ದವು. ಈ ಗುಡ್ಡ ಹಿಂದೆ ಈ ಕಂಪನಿಗೆ ಸೇರಿತ್ತು. ಈಗ ಈ ಕಂಪನಿ ಅದನ್ನು ಪಡೆದಿದೆ. ಆ ಗುಡ್ಡ ಇನ್ನೊಂದು ಕಂಪನಿಗೆ ಸೇರಿದೆ. ಅದು ಹಲವಾರು ದಶಕಗಳಿಂದ ಗಣಿಗಾರಿಕೆ ನಡೆಸುತ್ತಿರುವ ಹಳೆಯ ಕಂಪನಿ. ಮತ್ತೊಂದು ಗುಡ್ಡ ಅದಿರಿನ ಬೆಲೆ ಗಗನಕ್ಕೇರಲು ಆರಂಭವಾದ ಮೇಲೆ ದುರ್ಲಾಭದ ಆಸೆಯಿಂದ ಹೆದರಿಸಿ ಹಿಂದಿನ ಗುತ್ತಿಗೆದಾರರಿಂದ ಪಡೆದುಕೊಳ್ಳಲಾಗಿದೆ. ಹೀಗೆ ಸುತ್ತಮುತ್ತ ಕಣ್ಣೋಡುವವರೆಗೂ ಗಣಿಗಾರಿಕೆಯ ಪ್ರತಾಪ.

ಈ ಪ್ರದೇಶ ಆಂಧ್ರಪ್ರದೇಶ ಹಾಗೂ ಕರ್ನಾಟಕದ ಗಡಿ ಪ್ರದೇಶ. ಅನಂತಪುರಂ, ಬಳ್ಳಾರಿ, ಸಂಡೂರು ಜಿಲ್ಲೆಗಳ ಗಡಿ ಪ್ರದೇಶವೂ ಹೌದು. ಅಲ್ಲಿ ಆಂಧ್ರಪ್ರದೇಶದ ಭಾಗಕ್ಕೆ ಬರುವ ಒಂದು ಗಣಿ ಕಂಪನಿ ಓಬಳಾಪುರಂ ಮೈನ್ಸ್. ಅದರ ಒಡೆಯರೇ ಇಂದು ಕರ್ನಾಟಕದ ಎರಡು ದುರ್ಘಟಗಳಿಗೆ ಮಾರಕವಾಗಿರುವ, ಆಂಧ್ರಪ್ರದೇಶದ ರೋಸಯ್ಯ ಸರ್ಕಾರಕ್ಕೂ ತಲ್ಲಣ ಉಂಟು ಮಾಡುತ್ತಿರುವ ರೆಡ್ಡಿ -ಜನಾರ್ಧನರೆಡ್ಡಿ ನೇತೃತ್ವದ ಗಣಿ ಮಾಫಿಯಾ ಗುಂಪು. ಕರ್ನಾಟಕದ ಈ ಸಚಿವರು ಆಂಧ್ರದ ಗಣಿ ಮಾಲೀಕರು. ಗಣಿ ಮಾಲೀಕರಾಗಿ ಆಂಧ್ರದ ಗಣಿ ಕಂಪನಿಯ ಹೆಸರಿನಲ್ಲಿ ತಮ್ಮ ಗಣಿ ಕಂಪನಿಗೆ ಸೇರಿರಾದ ಗುತ್ತಿಗೆ ಪ್ರದೇಶವನ್ನು ಮೀರಿ ಸರಗಡೆಯ ಗಣಿ ಪ್ರದೇಶವನ್ನು ಕಬಳಿಸಿರುವವರು. ಈ ಗಣಿ ಆಕ್ರಮಣ ಆಂಧ್ರದ ಗಡಿಯನ್ನು ಮೀರಿ ಕರ್ನಾಟಕದ ಗಡಿಯೊಳಕ್ಕೆ ಹಲವಾರು ಚದರ ಕಿ.ಮೀ. ಒಳಪ್ರವೇಶಿಸಿದೆ. ಈ ಅಕ್ರಮವನ್ನು ಸಕ್ರಮ ಮಾಡಿಕೊಳ್ಳುವುದಕ್ಕಾಗಿ ಹಿಂದೆ 1881 ರ ಕಾಲದ ಭೂ ಸಮೀಕ್ಷೆ ನಡೆಸಿ ತಯಾರಿಸಲಾದ ನಕ್ಷೆಯನ್ನೇ ಸುಳ್ಳು ಮಾಡಲು ಹೊರಟಿದ್ದಾರೆ. ಆ ಕಾಲದ ಗಡಿ ಗುರುತುಗಳನ್ನು ಎರಡು ಹಳ್ಳಿಗಳ ಗಡಿ ಮೇರೆಯನ್ನು ಗುರುತು ಮಾಡಲು ವಿಶಿಷ್ಟ ಗುರುತಿನೊಂದಿಗೆ ನೆಟ್ಟ ಕಲ್ಲುಗಳನ್ನು ನಾಶ ಮಾಡಲಾಗಿದೆ. ಮೂರು ಹಳ್ಳಿಗಳ ಗಡಿಯನ್ನೂ ಗುರುತಿಸಲು ಬಂಡೆಯ ಮೇಲೆ ಮಾಡಿದ ಗುರುತನ್ನು ಅಳಿಸಲು ಪ್ರಯತ್ನಿಸಲಾಗಿದೆ.

ದುರ್ಗಮ ಪ್ರದೇಶದಲ್ಲಿ

ಈ ಗಡಿ ಗುರುತುಗಳು ದುರ್ಗಮವಾದ ಪ್ರದೇಶಗಳಲ್ಲಿವೆ. ತೀವ್ರ ಇಳಿಜಾರಿನ ಪ್ರದೇಶ. ಅದರ ಜೊತೆಗೆ ಗಣಿಗಾರಿಕೆಯ ಯಂತ್ರಗಳು ಭೂಮಿಯನ್ನು ಗೋರಿ ಹಾಕಿವೆ. ಅದಿರನ್ನೂ ತೆಗೆದು ಉಳಿದ ಮಣ್ಣು ಬೆಟ್ಟಗಳ ಮೇಲೆ ಸಡಿಲವಾಗಿ ಹರಡಿದೆ. ಹೀಗಾಗಿ ಜಾರಿಕೆ. 'ಕಾಮ್ರೇಡ್ ಮೆಲ್ಲಗೆ... ಜಾರಿ ಬಿಟ್ಟೀರಿ' ನಿಧಾನವಾಗಿ ಏರಿ 'ಚಪ್ಪಲಿ ತೆಗೆದು ಕೈಯಲ್ಲಿ ಹಿಡಿದುಕೊಂಡು ಹತ್ತಿ ಆಗ ಜಾರುವುದು ಕಡಿಮೆಯಾಗುತ್ತದೆ' 'ಅಯ್ಯೋ ಅವರು ಜಾರಿಯೇ ಬಿಟ್ಟರು' ಎನ್ನುವ ಮಾತುಗಳ ಗದ್ದಲದ ನಡುವೆ ಹತ್ತಿ ಇಳಿದು ಮತ್ತೆ ಹತ್ತಿ ಗಡಿಗುರುತುಗಳನ್ನು ಅದನ್ನು ನಾಶಮಾಡುವ ಪ್ರಯತ್ನಗಳನ್ನೂ ನೋಡಿದೆವು. ನಮ್ಮೊಂದಿಗೆ ಕೆಲ ಸಾಹಸಿ ತರುಣ ಮಾಧ್ಯಮದ ಗೆಳೆಯರು ಈ ಏರಾಟ, ಜಾರಾಟ, ಚೀರಾಟಗಳಲ್ಲಿ ಪಾಲ್ಗೊಂಡರು. ಏರುವಿಕೆ ಜಾರುವಿಕೆಗಳನ್ನು ಕ್ಯಾಮರಾದಲ್ಲಿ ಸೆರೆ ಹಿಡಿದರು. ಮೂರು ಗ್ರಾಮಗಳ ಎರಡು ರಾಜ್ಯಗಳ ಗಡಿಗುರುತಿನ ಬಳಿಯಲ್ಲಿಯೇ ಟಿ.ವಿ. ಸಂದರ್ಶನ ನಡೆಸಿದರು. ಮತ್ತೆ ಕೆಲ ಟಿ.ವಿ. ಪತ್ರಕರ್ತರು ನಾವು ಮರಳಿ ಆರಂಭದ ಬೆಟ್ಟದ ಮೇಲಕ್ಕೆ ಬಂದ ಮೇಲೆ ಕಾದಿದ್ದು, ಸಂದರ್ಶನ ಪಡೆದು ಕೊಂಡರು.

'ಏನು ಮಾಡುತ್ತಿರೋ ಮಾಡಿ'

ಟಿ.ವಿ. ಸಂದರ್ಶನಗಳು ನಡೆಯುವ ವೇಳೆಗೆ ಅಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ತನ್ನ ಸಿಬ್ಬಂದಿಯೊಂದಿಗೆ ಹಾಜರಾದರು. 'ಈ ಪ್ರದೇಶದಲ್ಲಿ ಸೆಕ್ಷನ್ ಜಾರಿ ಮಾಡಲಾಗಿದೆ. ಈ ಪ್ರದೇಶಕ್ಕೆ ಬರುವುದೇ ಅಪರಾಧ. ನೀವು ಹೇಗೆ ಬಂದಿರಿ. ನಿಷೇಧಿತ ಪ್ರದೇಶದಲ್ಲಿ ಟಿ.ವಿ. ಕ್ಯಾಮೆರಾ ಕೂಡ ಬರುವಂತಿಲ್ಲ. ನೀವು ಟಿ.ವಿ. ಸಂದರ್ಶನ ಕೂಡ ನಡೆಸಿದ್ದೀರಿ. ಅರೆಸ್ಟ್ ಮಾಡುತ್ತೇನೆ' ಹಾಗೆ ! ಹೀಗೆ !! ಎಂದು ಅರಚಾಟ.

"ಇದು ನಿಷೇಧಿತ ಪ್ರದೇಶ ಎಂದು ಇಲ್ಲಿ ಬೋರ್ಡ್ ಹಾಕಿಲ್ಲ. ಪತ್ರಿಕೆಗಳಲ್ಲಿ ಜಾಹೀರಾತು ನೀಡಿಲ್ಲ. ಪ್ರಕಟಣೆಯನ್ನು ಕೊಟ್ಟಿಲ್ಲ. ನಿಮ್ಮಷ್ಟಕ್ಕೆ ನೀವು ಇದು ನಿಷೇಧಿತ ಪ್ರದೇಶ ಎಂದು ಆರ್ಡರ್ ಮಾಡಿಕೊಂಡು ನಿಮ್ಮ ಫೈಲ್ ಒಳಗಿಟ್ಟು ಕೊಂಡರೆ ಸಾರ್ವಜನಿಕ ಪ್ರವೇಶ ಮಾಡಬಾರದು ಎಂದಾಗುವುದಿಲ್ಲ. ಹಾಗೆ ನಿಷೇಧಾಜ್ಞೆ ಮಾಡಿದವರು ಕಾವಲು ಕಾಯುತ್ತಾ ಕೂರಬೇಕಾಗಿತ್ತು. ಪ್ರವೇಶ ಮಾಡುವಾಗಲೇ ಆಜ್ಞೆ ತೋರಿಸಿ ಪ್ರವೇಶ ಮಾಡುವುದನ್ನು ತಡೆಯಬೇಕಿತ್ತು. ನಿಮ್ಮ ತಪ್ಪಿಗೆ ನಾವು ಹೊಣೆಗಾರರಾಗಲು ಸಾಧ್ಯವಿಲ್ಲ. ದೇಶದ ಪ್ರಜೆಗಳಾಗಿ ಎಲ್ಲಾ ಕಡೆಯೂ ಹೋಗಲು ನಮ್ಮ ಹಕ್ಕಿದೆ. ಏನೂ ಮಾಡುತ್ತಿರೋ ಮಾಡಿ' ಎಂದು ನಮ್ಮ ಉತ್ತರ.

ಅಂತೂ ಮತ್ತೆ ನಮ್ಮ ವಾಹನಗಳು ಬೆಟ್ಟ ಇಳಿದು ಹೊರ ಬಂದವು. ದಾರಿಯಲ್ಲಿದ್ದ ಮತ್ತಷ್ಟು ಗಣಿಗಳ ಬಗ್ಗೆ ಮಾಹಿತಿ ಪಡೆದುಕೊಂಡೆವು.

ಇದು ಇಂದು ಗಣಿಗಾರಿಕೆ ನಿಷೇಧಿತವಾದ ಪ್ರದೇಶಕ್ಕೆ ಮೊದಲ ಸಾರ್ವಜನಿಕ ಭೇಟಿ. ಮೊದಲ ರಾಜಕೀಯ ಪಕ್ಷ ಸಿಪಿಐ(ಎಂ) ಭೇಟಿ ಮತ್ತು ಚಾರಣ, ಪಕ್ಷದ ನಿಲುವುಗಳು ರಾಜ್ಯದ ಎಲ್ಲಾ ಮಾಧ್ಯಮಗಳಲ್ಲಿ ದಿನಗಟ್ಟಲೆ ಪ್ರಸಾರವಾಯಿತು. ಎಲ್ಲಾ ಪತ್ರಿಕೆಗಳ ಬಳ್ಳಾರಿ ಜಿಲ್ಲೆಯ ಆವೃತ್ತಿಗಳಲ್ಲಿ ದೊಡ್ಡದಾಗಿ ಪ್ರಕಟವಾಯಿತು. ಬಳ್ಳಾರಿ ಜಿಲ್ಲೆಯ ಜನತೆ ರೆಡ್ಡಿ

ಪುಟ 10ಕ್ಕೆ



ಗಣಿಗಳ್ಳರು - ಗಡಿಕಳ್ಳರಿಗಾಗಿ ತಡಕಾಟ...

ಪುಟ 9 ರಿಂದ

ಮಾಫಿಯಾದ ವಿರುದ್ಧ ಸೆಟೆದು ನಿಂದು ದೃಢನಿಲುವು ತಳೆದ ಸಿಪಿಐ(ಎಂ)ಗೆ 'ಶಭಾಷ್' ಎಂದರು. ಬಳ್ಳಾರಿಯಲ್ಲಿಯೇ ಯಥೇಚ್ಛವಾಗಿರುವ ದೊಡ್ಡ ದೊಡ್ಡ ಹೆಸರಿನ ರಾಜಕಾರಣಿಗಳಿಗೆ ಛೀಮಾರಿ ಹಾಕಿದರು.

ಕೆಲವಾರಗಳ ನಂತರ ಅಲ್ಲಿ ಒಂದು ಗಣಿಯ ಕೆಲಸವ ಗುತ್ತಿಗೆ ಪಡೆದಿದ್ದ ಕಾಂಗ್ರೆಸ್ ಮಾಜಿ ಮಂತ್ರಿ ಮತ್ತು ಅಲ್ಲಿ ಗೂಂಡಾಗಿರಿಗೆ ಪ್ರಸಿದ್ಧವಾದ ಮುಂಡೂರು ಮನೆತನದ ಶಾಖೆಯ ದಿವಾಕರ ಬಾಬು ಅಲ್ಲಿನ ನಿಷೇಧಾಜ್ಞೆಯನ್ನು ಉಲ್ಲಂಘಿಸಿ ಮಾಧ್ಯಮಗಳೊಂದಿಗೆ ಭೇಟಿ ನೀಡಿದರು. ನಂತರದ ದಿನಗಳಲ್ಲಿ ಅಲ್ಲಿಗೆ ಲೋಕಾಯುಕ್ತರೂ ಭೇಟಿ ನೀಡಿದರು. ತಮ್ಮ ವರದಿಯಲ್ಲಿ ಗಣಿಗಾರಿಕೆ ನಿಲ್ಲಿಸಲು ಹಾಗೂ ಕೇಂದ್ರ ಸರ್ಕಾರದ ಭೂ ಸಮೀಕ್ಷೆ ನಡೆಸಲು ಶಿಫಾರಸ್ಸು ಮಾಡಿದರು. ಆದರೆ ಬಿಜೆಪಿ ರಾಜ್ಯ ಸರ್ಕಾರವಾಗಲೀ ಕಾಂಗ್ರೆಸ್ ನೇತೃತ್ವದ ಕೇಂದ್ರ ಸರ್ಕಾರವಾಗಲೀ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಈಗ ಸುಪ್ರೀಂಕೋರ್ಟ್‌ನ ನಿರ್ದೇಶನದೊಂದಿಗೆ ಕೇಂದ್ರ ಅಧಿಕಾರಿಗಳ ತಂಡದ ಶಿಫಾರಸ್ಸಿನ ನಂತರವಷ್ಟೇ ಕ್ರಮ ತೆಗೆದುಕೊಳ್ಳುವ ಧೈರ್ಯವನ್ನು ಆಂಧ್ರ ಸರ್ಕಾರ ತೋರಿಸಿದೆ. ಅದು ಕೂಡ ಆಂಧ್ರ ಮುಖ್ಯಮಂತ್ರಿ ರಾಜಶೇಖರರೆಡ್ಡಿಯ ನಿಧನದ ನಂತರ ಜನಾರ್ದನರೆಡ್ಡಿಗಳ ಸಹಯೋಗಿಯಾದ ರಾಜಶೇಖರರೆಡ್ಡಿ ಸುಪುತ್ರ ಜಗನ್‌ಮೋಹನ್‌ರೆಡ್ಡಿ ಸೋನಿಯಾ ಗಾಂಧಿಯ ಕಟ್‌ಔಟ್‌ಗಳನ್ನು ಸುಟ್ಟು ಕಾಂಗ್ರೆಸ್ ಕೇಂದ್ರ ನಾಯಕತ್ವಕ್ಕೆ ಸವಾಲು ಹಾಕಿದ ಬಳಿಕವಷ್ಟೇ ಕೇಂದ್ರ ಸರ್ಕಾರ, ಆಂಧ್ರ ರಾಜ್ಯ ಸರ್ಕಾರಗಳು ಕ್ರಮ ಕೈಗೊಳ್ಳುವ ಮನಸ್ಸು ಮಾಡಿವೆ.

ಆದರೆ ಕರ್ನಾಟಕ ರಾಜ್ಯ ಗಡಿಯನ್ನು ಆಕ್ರಮಿಸಿ ಗಡಿಯೊಳಕ್ಕೆ ಹಲವಾರು ಕಿ.ಮೀ. ನುಸುಳಿದ ಆಂಧ್ರದ ಗಣಿ ಕಂಪನಿಯ ಮಾಲೀಕ ಜನಾರ್ದನರೆಡ್ಡಿ ಮತ್ತು ಅವರ ಇಬ್ಬರು ಸಹಚರರು ಕರ್ನಾಟಕದ ಸಚಿವರಾಗಿದ್ದಾರೆ. ಕರ್ನಾಟಕ-ತಮಿಳುನಾಡು ಗಡಿಯಲ್ಲಿರುವ ಹೊಗೇನಕಲ್ ಬಳಿ ಬರ ಪ್ರದೇಶದ ಜನರಿಗೆ ಕುಡಿಯುವ ನೀರಿನ ವಿಷಯಕ್ಕೆ ಯಡಿಯೂರಪ್ಪನವರು ಮತ್ತು ಅವರ ಜೊತೆಗಾರರು ಹಲವು ಬಾರಿ ಹೋಗಿ ಗದ್ದಲ ಮಾಡಿ ಕರ್ನಾಟಕದ ಗಡಿ ರಕ್ಷಣೆಯ ಬಗ್ಗೆ ವೀರಾವೇಶದ ಮಾತುಗಳನ್ನಾಡಿದವರು ಮುಖ್ಯಮಂತ್ರಿಗಳಾಗಿ ಬಳ್ಳಾರಿ ಗಡಿ ಆಕ್ರಮಣದ ಬಗ್ಗೆ ಬಾಯಿ ಹೊಲಿದು ಕೊಂಡಿದ್ದಾರೆ.

ನ್ಯಾಯಾಲಯದ ತೀರ್ಪು ಉಲ್ಲಂಘನೆ

ಪುಟ 3 ರಿಂದ

ಪಾದುಕೆಗಳನ್ನು ಗುಹೆಯ ಹೊರಗಿಟ್ಟು, ಅರ್ಚಕರಿಂದ ಪೂಜೆ ಮಾಡಿಸಿ ಎಲ್ಲವನ್ನೂ ಸಂಘ ಪರಿವಾರದ ಸುಪರ್ದಿನಲ್ಲೇ ನಡೆಸಲು ಸರ್ಕಾರವೇ ಮುಂದಾಗಿದೆ. ಸರ್ಕಾರದಿಂದ ಇಂತಹ ಉಲ್ಲಂಘನೆಗಳು ಹಂತಹಂತವಾಗಿ ನಡೆಯುತ್ತಲೇ ಇವೆ. ಯಾವುದೇ ಜಾತಿ ಮತ, ಧರ್ಮಗಳ ಭೇದವಿಲ್ಲದೆ ಮುಕ್ತ ಅವಕಾಶವಿರುವ ಈ ಸೂಫಿ ಶ್ರದ್ಧಾ ಕೇಂದ್ರವನ್ನು, ಬಹುಮುಖಿ ಸಂಸ್ಕೃತಿಯ ಪ್ರತೀಕವಾದ ಉಜ್ವಲ ಸಂಕೇತವನ್ನು (ನ್ಯಾಯಾಲಯವೇ ಮುಕ್ತ ಕಂಠದಿಂದ ಪ್ರಶಂಸಿಸಿದೆ) ನಾಶ ಮಾಡಿ ವೈದಿಕಶಾಹಿ ಏಕಸ್ವಾಮ್ಯ ಸ್ಥಾಪಿಸುವ ಫ್ಯಾಸಿಸ್ಟ್ ಹುನ್ನಾರಗಳಿಗೆ ಸಂಘ ಪರಿವಾರವು ಸರ್ಕಾರದ ಆಡಳಿತ ಯಂತ್ರವನ್ನೇ ಬಳಸಿ ಬುಡಮೇಲು ಮಾಡಲು ಪೂರ್ಣ ಪ್ರಮಾಣದಲ್ಲಿ ಇಳಿದಿದೆ. ಇದಕ್ಕಾಗಿಯೇ ಬಿಜೆಪಿಯ ರಾಜ್ಯ ಅಧ್ಯಕ್ಷ ಸದಾನಂದಗೌಡ ಶಾಸಕ ಸಿ.ಟಿ.ರವಿ ಉಸ್ತುವಾರಿ ಅಲ್ಲಿದ್ದು ವಹಿಸಿದ್ದು ಗಂಭೀರ ಸಂಗತಿ. ಕಾನೂನು, ಸಂವಿಧಾನಕ್ಕಿಂತಲೂ ಮಂತ್ರಿ, ಶಾಸಕರ ಮಾತನ್ನೇ ಮಿಗಿಲಾಗಿ ಪರಿಗಣಿಸುತ್ತಾ ಬಂದಿರುವ ಈಗಿನ ಜಿಲ್ಲಾಧಿಕಾರಿ ಈ ಬಾರಿ ನ್ಯಾಯಾಲಯದ ಆದೇಶ ಉಲ್ಲಂಘನೆಯಾಗುವುದೆಂದು ತಿಳಿಸಿದರೂ ಅವರ ಮೇಲೆ ಸರ್ಕಾರದ ಗೃಹಸಚಿವರು ಒತ್ತಡ ಹೇರಿ ಇವೆಲ್ಲವನ್ನೂ ಸಾಂಗೋಪವಾಗಿ ನಡೆಸಲು ಆದೇಶಿಸಿದ್ದು ಅತ್ಯಂತ ಅಪಾಯಕಾರಿಯಾಗಿದೆ.

ಈಗಾಗಲೇ ಬಾಬಾಬುಡನ್‌ಗಿರಿಯನ್ನು ದಕ್ಷಿಣ ಭಾರತ ಅಯೋಧ್ಯೆಯನ್ನಾಗಿ, ಕರ್ನಾಟಕವನ್ನು ನರಹತ್ಯೆಯ ಗುಜರಾತ್ ಆಗಿಸುವುದಾಗಿ ಬಹಿರಂಗವಾಗಿ ಬಿಜೆಪಿ, ಆರ್‌ಎಸ್‌ಎಸ್, ಸಾರಿರುವಾಗ ಹಿಂದುತ್ವಕ್ಕೆ ಬದ್ಧವಾಗಿ ಅದನ್ನು ಜಾರಿಗೊಳಿಸಲು ಬಿಜೆಪಿಗೆ ತಾಕೀ[...] ಮಾಡಿರುವುದು, ಅದನ್ನೇ ಅದು ಒಪ್ಪಿರುವು[...] ಪರಿಸ್ಥಿತಿಯನ್ನೂ ಇನ್ನಷ್ಟು ಉದ್ವಿಗ್ನಗೊಳಿಸಲಾಗಿ[...] ಬಾಬ್ರಿ ಮಸೀದಿ ಧ್ವಂಸದ ಪ್ರಕರಣದಲ್ಲಿ ಲಿಬ್ರಾ[...] ಆಯೋಗದ ವರದಿಯಾಧರಿಸಿದ ತಪ್ಪಿತಸ್ಥ ಸ[...] ಪರಿವಾರದ ಮೇಲೆ ಕೇಂದ್ರದ ಕಾಂಗ್ರೆಸ್ ಸರ್ಕಾ[...] ಯಾವುದೇ ಕ್ರಮ ವಹಿಸದಿರುವುದು, ಚಡ್ಡಿ ಪಡೆಗ[...] ಹೆಚ್ಚಿನ ಕುಮ್ಮಕ್ಕು ಒದಗಿಸಿದಂತಾಗಿದೆ. ಇಲ್ಲಿಯ[...] ರಾಜ್ಯ ಸರ್ಕಾರ ಹಾಗೂ ಪಕ್ಷದ ಮೇಲೂ, ಆ[...] ಎಸ್‌ಎಸ್ ಹೆಚ್ಚಿನ ಹಿಡಿತ ಸಾಧಿಸಿ[...] ಕೋಮುದ್ವೇಷ, ವಿಭಜನೆ ರಾಜಕಾರ[...] ತೀವ್ರಗೊಳ್ಳುವ ಆದಕ್ಕಾಗಿ ಇಡೀ ಸರ್ಕಾರದ [...] ಬಳಸುವ ಎಲ್ಲಾ ಸೂಚನೆಗಳೂ ಇವೆ. [...] ರಂಗಗಳಲ್ಲಿಯೂ ವಿಫಲಗೊಂಡು [...] ಗಣಿಮಾಫಿಯಾಗಳ ಹಿತಗಳನ್ನೇ ಕಾಯುತ್ತಿ[...] ತಾತ್ವಿಕವಾಗಿ, ರಾಜಕೀಯವಾಗಿ ದಿವಾಳಿಯೆದ್ದಿರು[...] ಬಿಜೆಪಿ ಸರ್ಕಾರವು ಜನರ ಗಮನ ಬೇರೆ[...] ಹೊರಳಿಸಲು ಇಂತಹ ಕೋಮುವಾ[...] ಅಜೆಂಡಾಗಳನ್ನು ಬಯಸುತ್ತದೆ. ಇಂತ[...] ಸಂದರ್ಭದಲ್ಲಿ ಈ ಕೋಮುವಾದಿ ಕೃತ್ಯಗಳ[...] ಅದರ ರಾಜಕಾರಣವನ್ನು ಎಲ್ಲಾ ಶಾಂತಿಪ್ರಿ[...] ಸೌಹಾರ್ದತೆ ಬಯಸುವ ಜನತೆ ಒಕ್ಕೊರಲಿನಿ[...] ಖಂಡಿಸಿ, ವಿರೋಧಿಸಬೇಕು. ನ್ಯಾಯಾಲಯ[...] ಆದೇಶ ಉಲ್ಲಂಘಿಸಿದ ಪ್ರಕರಣದಲ್ಲಿ ಇದ[...] ಭಾಗಿಯಾದವರ ಮೇಲೆ ಕ್ರಮ ಜರುಗಿಸಬೇ[...] ಉಲ್ಲಂಘನೆಯ ಈ ಪ್ರಕರಣವನ್ನು ವ[...] ನ್ಯಾಯಾಲಯಕ್ಕೆ ಕೆಲವರು ಒಯ್ಯುತ್ತಿದ್ದಾರೆ. ಇ[...] ಜೊತೆಗೆ ಜನತೆಯನ್ನು ಜಾಗೃತಿಗೊಳಿಸಿ, ಪ್ರತಿರೋ[...] ಒಡ್ಡುವ ಕಾರ್ಯಾಚರಣೆಯೂ ಅಗತ್ಯವಾಗಿದೆ.

ಬಾಬಾಬುಡನ್ ಗಿರಿಯಲ್ಲಿ ಹವನ, ಹೋಮ...

ಪುಟ 7 ರಿಂದ

ನಿರ್ದೇಶನದ ಉಲ್ಲಂಘನೆಯಾಗಿದೆ. ಬಜರಂಗದಳ, ವಿಶ್ವ ಹಿಂದು ಪರಿಷತ್ ಸಂಘಟನೆಗಳು ಈಗ ನಡೆಸಿರುವ ದತ್ತ ಜಯಂತಿ - ಮಾಲಾ ಯಜ್ಞ ಇವಾವುಗಳೂ ಹಿಂದೆ ಇಲ್ಲದ ಹೊಸ ಆಚರಣೆಗಳಾಗಿವೆ ಮತ್ತು ಧಾರ್ಮಿಕ ದತ್ತಿ ಆಯುಕ್ತರು ಮಾಡಿದ ಪಟ್ಟಿಯಲ್ಲಿಯೂ ಇಲ್ಲ. ಮೇಲಾಗಿ ಪಾದುಕೆಗಳ ದರ್ಶನವನ್ನು ಗುಹೆಯೊಳಗೆ ಕೇವಲ ಅಲ್ಲಿಯ ಮುಖ್ಯಸ್ಥ ಸಜ್ಜಾದ್ ಎ ನಿಶಾನ್ ಹಾಗೂ ಮುರ್ಶಾವರ್ ಮತ್ತು ಧಾರ್ಮಿಕ ಗುರುಗಳು ಮಾತ್ರ ಮಾಡುವ ಪ್ರತೀತಿ ಇದೆ. ಯಾವುದೇ ಅರ್ಚಕರಿಗೆ ಪ್ರವೇಶವಿಲ್ಲ. ಇದನ್ನೆಲ್ಲ ನ್ಯಾಯಾಲಯ ಸ್ಪಷ್ಟವಾಗಿ ನಿರ್ದೇಶಿಸಿದೆ. ದತ್ತಮಾಲಾ- ಯಜ್ಞ -ಜಯಂತಿಗೆ ಅವಕಾಶ ನೀಡುವ ಮೂಲಕ ಅಲ್ಲಿನ ಸೂಫಿ-ಸಂತರ ಸಮನ್ವಯ ಸಂಸ್ಕೃತಿ, ಕೋಮುಸೌಹಾರ್ದ ಪರಂಪರೆಯ ಮೇಲೆ ಸಂಘ ಪರಿವಾರ ನಡೆಸುತ್ತಿರುವ ಧಾಳಿಗೆ ಸರ್ಕಾರವೇ ಮುಕ್ತ ಅವಕಾಶ ಮಾಡಿಕೊಟ್ಟಿರುವುದು ಅತ್ಯಂತ ಅಪಾಯಕಾರಿಯಾಗಿದೆ. ಈಗಾಗಲೇ ಬಿಜೆಪಿ ಒಳಗೊಂಡು ಸಂಘ ಪರಿವಾರವು ಅದನ್ನು ದಕ್ಷಿಣ ಭಾರತದ ಅಯೋಧ್ಯೆಯನ್ನಾಗಿ ಮಾರ್ಪಡಿಸುವುದಾಗಿ, ಕರ್ನಾಟಕವನ್ನು ಜನಾಂಗೀಯ ಹತ್ಯೆಯ ಗುಜರಾತನ್ನಾಗಿಸುವುದಾಗಿ ಬಹಿರಂಗವಾಗಿ ಸಾರುತ್ತಿರುವಾಗ ಅಂತಹ ಶಕ್ತಿಗಳಿಗೆ ಮುಕ್ತ ಅವಕಾಶವನ್ನು ರಾಜ್ಯ ಸರ್ಕಾರವೇ ಕಲ್ಪಿಸಿರುವ ಕ್ರಮ ಆಘಾತಕಾರಿಯಾಗಿದೆ.

ಈ ಕೃತ್ಯಗಳಲ್ಲಿ ಭಾಗಿಯಾದವರ ಮೇಲೆ ಕಠಿಣ ಕ್ರಮಗಳನ್ನು ವಹಿಸಬೇಕೆಂದು ಸಿಪಿಐ(ಎಂ) ಒತ್ತಾಯಿಸಿದೆ. ಸಂಘ ಪರಿವಾರದ ಈ ಕೃತ್ಯಗಳು, ಅದಕ್ಕಾಗಿ ಸರ್ಕಾರವನ್ನು ತೊಡಗಿಸುತ್ತಿರುವುದು ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಕೋಮುವಿದ್ವೇಷ ಹೊತ್ತಿಸುವ ದಿಕ್ಕಿನಲ್ಲಿದ್ದು ಸೌಹಾರ್ದತೆ, ಶಾಂತಿ ಬಯಸುವವರೆಲ್ಲರೂ ಒಕ್ಕೊರಲಿನಿಂದ ಖಂಡಿಸಿ ಪ್ರತಿಭಟಿಸಬೇಕೆಂದು ಜನತೆಯಲ್ಲಿ ಸಿಪಿಐ(ಎಂ) ಮನವಿ ಮಾಡಿದೆ.

ಚುನಾವಣಾ ಕಸರತ್ತುಗಳು....

ಪುಟ 3 ರಿಂದ

ಮೂರನೆಯ ಪರ್ಯಾಯ ಪ್ರಸ್ತುತತೆ:

ಈಗಲೂ ರಾಜ್ಯದಲ್ಲಿ ಬಿಜೆಪಿ ಕಾಂಗ್ರೆಸ್ ನಡುವೆಯೇ ಧ್ರುವೀಕರಣ ಎಂಬುದನ್ನು ಸತತವಾಗಿ ಜನತೆ ತಿರಸ್ಕರಿಸುತ್ತಲೇ ಬಂದಿದ್ದಾರೆ. ಬಿಜೆಪಿ, ಕಾಂಗ್ರೆಸ್‌ಗೆ ವಿರುದ್ಧವಾಗಿ ಕಾಂಗ್ರೆಸ್ಸೇತರ ಜಾತ್ಯಾತೀತ ಶಕ್ತಿಗಳನ್ನು ಗಣನೀಯವಾಗಿ ಬೆಂಬಲಿಸಿದ್ದಾರೆ. ಜನತೆಯ ಈ ಪ್ರಬಲ ಆಶಯವೇ ಜಾತ್ಯಾತೀತ ಜನತಾದಳಕ್ಕೆ ಬಲವನ್ನೂ, ನೆಲೆಯನ್ನೂ ತಂದಿದೆ. ಈಗಲೂ ದೇಶದಲ್ಲಿ ಬಿಜೆಪಿ, ಕಾಂಗ್ರೆಸ್ ಮತಗಳ ಪ್ರಮಾಣ ಶೇ.48, ಉಳಿದ ಪಕ್ಷಗಳ ಶಕ್ತಿ ಶೇ 52. ಇದೇ ಸಂದರ್ಭದಲ್ಲಿ ಜೆಡಿ(ಎಸ್) ಇನ್ನೊಂದು ಅಂಶ ನೆನಪಿಸಿಕೊಳ್ಳಬೇಕು. ಹಿಂದೆಲ್ಲಾ ಜನತಾ ಪಕ್ಷ, ದಳ ಬಣಗಳು ಬಿಜೆಪಿಯೊಂದಿಗೆ ಹೋದಾಗ ಆ ಪ್ರಧಾನ ಪಕ್ಷವು ಇವರಿಗಾಗಿರುವ ನೆಲೆಯನ್ನೇ ಕಬಳಿಸಿತು ಎಂಬುದನ್ನು.

ಹೊಣೆಗಾರಿಕೆ?

ಈ ಅಂಶವನ್ನು ಜೆಡಿ(ಎಸ್) ನೆನಪಿಡಬೇಕು

ಜನತೆಗೆ ನಿಷ್ಠವಾಗಿದ್ದಲ್ಲಿ ಕೇಂದ್ರದ ಕಾಂಗ್ರೆಸ್ ನೇತೃ[...] ಜನವಿರೋಧಿ ದೇಶ ಘಾತುಕ ನೀತಿಗಳ ವಿರು[...] ಬಿಜೆಪಿಯ ಸಂಘ ಪ್ರಣೀತ ಕೋಮುವಾದಿ ಫ್ಯಾ[...] ನೀತಿಗಳು ಅದರ ದೇಶದ್ರೋಹುವ ಜನದ್ರೋ[...] ನೀತಿಗಳು ದಿವಾಳಿ ರಾಜಕಾರಣದ ವಿರು[...] ಹೋರಾಟ ನಡೆಸುವುದು ಚಾರಿತ್ರಿಕ-ಹೊಣೆಗಾ[...] ಎಂಬುದನ್ನು ಅದು ಪರಿಗಣಿಸಬೇಕು. ಇಲ್ಲವಾ[...] ಈಗ ಚುನಾವಣೆ ನಡೆಯುತ್ತದೆ. ಆ[...] ನಂತರ.....? ಎರಡು ಧ್ರುವೀಕರಣವನ್ನೇ ಬಿ[...] ಕಾಂಗ್ರೆಸ್ ಬಯಸುತ್ತಿರುವಾಗ....?. ಆಳ[...] ವರ್ಗಗಳ ಧಾಳಿಗಳು ತೀವ್ರಗೊಂಡಿರುವ[...] ಮೂರನೆಯ ಜಾತ್ಯಾತೀತ ಪರ್ಯಾಯ ಪ್ರ[...] ಸನ್ನಿವೇಶದಲ್ಲಿ ಇಂದು ನಾಳೆಗಳಲ್ಲಿ ವ[...] ರೂಪುಗೊಳ್ಳುವುದು ಅನಿವಾರ್ಯ[...] ಅಗತ್ಯವಾಗಿರುವಾಗ. ಮುಂದಿನ ಭವಿಷ್ಯದ ಬಗ್ಗೆ ಜೆಡಿ(ಎಸ್) ಯೋಚಿಸುವುದು ಅಗತ್ಯವಿದೆ.



ನಕ್ಸಲ್‌ವಾದ ಎಡಪಂಥವಾದಿ ವಿಕೃತಿ

ದೇಶದಲ್ಲಿ ಮಾವೋವಾದಿಗಳೆಂದು ಹೇಳಿಕೊಳ್ಳುವ ನಕ್ಸಲೀಯರ ಹಿಂಸೆ ವ್ಯಾಪಕಗೊಳ್ಳುತ್ತಿದೆ. ಸಂಘಟಿತ ಎಡಪಕ್ಷಗಳ ವಿರುದ್ಧ ಅದರಲ್ಲಿಯೂ ಸಿಪಿಐ(ಎಂ) ಪಕ್ಷದ ಕಾರ್ಯಕರ್ತರ ವಿರುದ್ಧ, ಸರ್ಕಾರಿ ಅಧಿಕಾರಿಗಳೂ ಹಾಗೂ ಪೊಲೀಸರ ವಿರುದ್ಧದ ದಾಳಿಗಳು ಹೆಚ್ಚುತ್ತಿವೆ. ಭಾರತೀಯ ಮಾವೋವಾದಿಗಳು ತಪ್ಪಿರುವುದೆಲ್ಲಿ? ಈ ಮಾರ್ಕ್ಸ್‌ವಾದದ ವಿಕೃತಿಯನ್ನು ಎದುರಿಸುವ ದಾರಿ ಯಾವುದು? ಈ ಕುರಿತು ನವೆಂಬರ್ 6 ರಂದು ದೆಹಲಿಯಲ್ಲಿ 'ಎಡಚಿಂತನೆ' ಸಂಘಟನೆಯು ಸಂವಾದವೊಂದನ್ನು ಸಂಘಟಿಸಿತ್ತು. ಈ ಸಂವಾದದಲ್ಲಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಕಾರಟ್, ಜವಹರಲಾಲ್ ನೆಹರೂ ವಿ.ವಿ.ಯ ಪ್ರಾಧ್ಯಾಪಕಿ ಜಯತಿ ಘೋಷ್ ರವರು ಮಂಡಿಸಿದ ವಿಚಾರವನ್ನು ಇಲ್ಲಿ ನೀಡಲಾಗಿದೆ. ದೆಹಲಿ ವಿಜ್ಞಾನ ವೇದಿಕೆಯ ಪ್ರಭೀರ್ ಪುರಕಾಯಸ್ಥ ಅಧ್ಯಕ್ಷತೆ ವಹಿಸಿದ್ದ ಸಂವಾದದ ಪ್ರಖರ ವಿಚಾರಗಳು ನಿಮಗಾಗಿ

ತಿರುಚಲ್ಪಟ್ಟ - ಅಪ್ರಸ್ತುತ ಜಾಗತಿಕ ದೃಷ್ಟಿಕೋನ

- ಪ್ರಕಾಶ್ ಕಾರಟ್

ತೀವ್ರಗಾಮಿ ಎಡಪಂಥವಾದ 40 ವರ್ಷಗಳಿಗಿಂತಲೂ ಹೆಚ್ಚು ಕಾಲದಿಂದ ಭಾರತದಲ್ಲಿದ್ದು, ಹಿಂದಿನ ಅನುಭವಗಳಿಂದ ಪಾಠ ಕಲಿಯಲು ಮಾವೋವಾದಿಗಳು ಸಿದ್ದರಿಲ್ಲ. ಮಾವೋವಾದಿಗಳು ಸಾರಾಸಗಟಾಗಿ ಚೀನಾ ಕಮ್ಯೂನಿಸ್ಟ್ ಪಕ್ಷದಿಂದ ಅದೂ ಚೀನಾ ಕಮ್ಯೂನಿಸ್ಟ್ ಪಕ್ಷವು 'ಸಾಂಸ್ಕೃತಿಕ ಕ್ರಾಂತಿ'ಯೆಂದು ಕರೆದುಕೊಳ್ಳಲಾದ ಎಡಪಂಥವಾದಿ ಹಾಗೂ ದುಸ್ಸಾಹಸವಾದಿ ಸಿದ್ಧಾಂತಗಳ ಹಿಡಿತಕ್ಕೆ ಸಿಕ್ಕಿ ಬಿದ್ದಿದ್ದ ಅವಧಿಯಲ್ಲಿ [illegible]ಲು ತಂದಿರುವ ಪರಿಕಲ್ಪನೆಗಳಲ್ಲಿ ಇನ್ನೂ ವಿಶ್ವಾಸ ಹೊಂದಿದ್ದಾರೆ. ಮಾವೋವಾದಿಗಳ ಅಪ್ರಸ್ತುತ ಮತ್ತು ಹಿಂಸಾಕೃತ್ಯದಿಂದ ಕೂಡಿರುವ ಈ ಸಿದ್ಧಾಂತ [illegible]ತವನ್ನು ಅರೆ-ಪಾಳೇಗಾರಿ, ಅರೆ-ವಸಾಹತುಶಾಹಿ ದೇಶವನ್ನಾಗಿ ಕಾಣುತ್ತಿದೆ. ಭಾರತದ ಪ್ರಭುತ್ವ ಹೊಂದಿರುವ ಬಲಿಷ್ಠ ಬಂಡವಾಳಶಾಹಿ ನೆಲೆಯನ್ನು ಒಪ್ಪುವುದಿಲ್ಲ. ದೇಶದ ಕೃಷಿ ಕ್ಷೇತ್ರದಲ್ಲಿ ಬಂಡವಾಳಶಾಹಿಯ ಬೆಳವಣಿಗೆಯನ್ನು ಒಪ್ಪುವುದಿಲ್ಲ. ಮತ್ತು ಮಾವೋವಾದಿಗಳ ರಾಜಕಾರಣದಲ್ಲಿ ಕಾರ್ಮಿಕ ವರ್ಗಕ್ಕೆ ಯಾವುದೇ ಪಾತ್ರವಿಲ್ಲ.

ರೈತರನ್ನು ಪ್ರತಿನಿಧಿಸುತ್ತಿದ್ದೇವೆ ಎಂದು ಇವರು ಹೇಳಿಕೊಳ್ಳುತ್ತಿದ್ದರೂ ರೈತರ ಒಂದಾದರೂ ಬಲಿಷ್ಠ ಚಳವಳಿಯನ್ನು ಮಾಡಿಲ್ಲ. ಅವರ ಕಾರ್ಯಕ್ಷೇತ್ರವನ್ನು ಅರಣ್ಯ ಪ್ರದೇಶಗಳು, ಬುಡಕಟ್ಟು ಜನಾಂಗಗಳು ಹೆಚ್ಚಿನ ಸಂಖ್ಯೆಯಲ್ಲಿರುವ ಪ್ರದೇಶಗಳಿಗೆ ಸೀಮಿತಗೊಳಿಸಿದ್ದಾರೆ. ಸಂಪರ್ಕವೇ ಇಲ್ಲದಂತಹ ಅಂತಹ ಪ್ರದೇಶಗಳಲ್ಲಿ ಆಶ್ರಯ [illegible]ದುಕೊಂಡಿರುವುದರಿಂದ ಕೆಲವು ಸಮಯದವರೆಗೆ ಸಶಸ್ತ್ರ ಗೆರಿಲ್ಲಾ ಹೋರಾಟವನ್ನು ಮುಂದುವರೆಸಲು ಸಾಧ್ಯವಷ್ಟೆ. ಕೃಷಿಕರಿಗೆ ಮಾತಿನ ಸೇವೆ ಮಾತ್ರ ಮಾಡಿಕೊಂಡಿರುವ ಇವರು ಅಧಿಕಾರಿಗಳು, [illegible] ಮತ್ತು ಬೇರೆ ಪಕ್ಷಗಳ ಪ್ರತಿನಿಧಿಗಳ ವಿರುದ್ಧ ಬೇರೆ ದಾಳಿ ಮಾಡುತ್ತಾ ಪ್ರಭುತ್ವದ ವಿರುದ್ಧ ಹಿಂಸಾತ್ಮಕ ಯುದ್ಧ ನಡೆಸುತ್ತಿದ್ದಾರೆ. ತಮ್ಮ ಹೋರಾಟವನ್ನು ಹಿಂಸಾಕೃತ್ಯಗಳಿಗೆ ಮಾತ್ರವೇ ಸೀಮಿತಗೊಳಿಸಿಕೊಂಡಿರುವ ಮಾವೋವಾದಿಗಳು ಆಂಧ್ರಪ್ರದೇಶದಲ್ಲಿ ಭಾರಿ ಹಿನ್ನಡೆ ಕಂಡ ನಂತರ ಚತ್ತೀಸ್‌ಗಢ, ಒರಿಸ್ಸಾ, ಜಾರ್ಖಂಡ್ ಮತ್ತು ಪಶ್ಚಿಮ ಬಂಗಾಳದ ಗಡಿಯ ಮೂರು ಜಿಲ್ಲೆಗಳನ್ನು ಒಳಗೊಂಡಿರುವ ಅರಣ್ಯ ಪ್ರದೇಶಗಳಿಗೆ ಸೀಮಿತಗೊಳಿಸಿಕೊಂಡಿದ್ದಾರೆ.

ಕಗ್ಗೊಲೆಗಳು

ಮಾವೋವಾದಿಗಳು ಇತ್ತೀಚಿನ ದಿನಗಳಲ್ಲಿ ನಡೆಸಿರುವ ಹಿಂಸಾಕೃತ್ಯಗಳಲ್ಲಿ ಸಿಪಿಐಎಂ ಪಕ್ಷದ 70 ಕಾರ್ಯಕರ್ತರು ಕೊಲ್ಲಲ್ಪಟ್ಟಿದ್ದಾರೆ. ಇದೇನೂ ಹೊಸ ವಿದ್ಯಮಾನ ಅಲ್ಲ. ನಕ್ಸಲೈಟ್‌ರು 1970-71ರಲ್ಲಿ 350 ಸಿಪಿಐಎಂ ಪಕ್ಷದ ಬೆಂಬಲಿಗರ ಹತ್ಯೆಗೆ ನೇರವಾಗಿ ಕಾರಣಕರ್ತರಾಗಿದ್ದಾರೆ. ಆಗಿನ ಆಡಳಿತಾರೂಢ ಕಾಂಗ್ರೆಸ್ ಸರ್ಕಾರ ಸಿಪಿಐಎಂ ಪಕ್ಷದ ವಿರುದ್ಧ ನಡೆಸಿದ ಧಾಳಿಗಳ ಭಾಗವಾಗಿದ್ದರು. ಈ ಒಟ್ಟು ಧಾಳಿಗಳಲ್ಲಿ ಸಿಪಿಐಎಂನ ಸರಿಸುಮಾರು 1200 ಮಂದಿ ಕಾರ್ಯಕರ್ತರು ಮತ್ತು ಹಿತೈಷಿಗಳು ಪ್ರಾಣ ತೆತ್ತಿದ್ದಾರೆ. ಹಾಗಾಗಿ ತೃಣಮೂಲ ಕಾಂಗ್ರೆಸ್ ಮತ್ತು ಮಾವೋವಾದಿಗಳು ಸೇರಿ ನಡೆಸಿರುವ ಈ ಒಳಸಂಚು 1970ರ ಪರಿಸ್ಥಿತಿಯನ್ನು ಜ್ಞಾಪಿಸುತ್ತದೆ.

ಇತ್ತೀಚೆಗೆ ಪಶ್ಚಿಮ ಬಂಗಾಳದಲ್ಲಿ ನಡೆದ ಚುನಾವಣೆಗಳನ್ನು ಯಶಸ್ವಿಯಾಗಿ ಬಹಿಷ್ಕರಿಸಲಾಗಿದೆ ಎಂದು ಮಾವೋವಾದಿಗಳು ಹೇಳಿಕೊಳ್ಳುತ್ತಿರುವುದು ಸುಳ್ಳು. ಮಾವೋಗಳ ಹಿಂಸಾಕೃತ್ಯಗಳ ಪ್ರದೇಶದಲ್ಲಿನ ಜರ್‌ಗಾಂ (ಲಾಲ್‌ಗರ್ ಸಹ ಇದರ ಒಂದು ಭಾಗವಾಗಿದೆ) ಕ್ಷೇತ್ರಕ್ಕೆ ನಡೆದ ಚುನಾವಣೆಯಲ್ಲಿ ಸಿಪಿಐಎಂ ಅಭ್ಯರ್ಥಿ ಅತಿ ಹೆಚ್ಚಿನ ಅಂತರದಿಂದ ಜಯಶಾಲಿಯಾಗಿದ್ದಾರೆ. ರಾಜ್ಯದ ಇತರ ಕ್ಷೇತ್ರಗಳಲ್ಲಿ ಹಿನ್ನಡೆ ಕಂಡಿದ್ದರೂ ಮಾವೋವಾದಿಗಳ ಹಿಡಿತದಲ್ಲಿರುವ ಈ ಕ್ಷೇತ್ರದಲ್ಲಿ ಗೆದ್ದಿರುವುದು ಮುಖ್ಯ. ಬುಡಕಟ್ಟು ಜನಾಂಗಗಳು ಇತರ ಕ್ಷೇತ್ರಗಳಲ್ಲಿನಂತೆ ಇಲ್ಲಿಯೂ ಭಾರಿ ಉತ್ಸಾಹದಿಂದ ಸಿಪಿಐಎಂ ಪರ ಮತ ಚಲಾಯಿಸಿದ್ದಾರೆ. ಮಾವೋಗಳು ಬಹಿಷ್ಕಾರ ಹಾಕಿದ್ದ ಇತರ ಕ್ಷೇತ್ರಗಳಲ್ಲಿಯೂ ಮತದಾರರು ಭಾರಿ ಉತ್ಸಾಹದಿಂದ ಮತ ಚಲಾಯಿಸಿದ್ದಾರೆ. ಈ ಹಿಂದೆ ಆಂಧ್ರ ಪ್ರದೇಶದ ಶ್ರೀಕಾಕುಳಂನಲ್ಲಿನಂತೆ ನಕ್ಸಲೈಟರು ಚಳವಳಿ ಬಲಿಷ್ಠವಾಗಿದ್ದ ಸ್ಥಳಗಳಲ್ಲಿಯೂ ಮಾವೋವಾದಿಗಳ ನೇತೃತ್ವದ ಚಳವಳಿ ಈಗ ಬಲಿಷ್ಠವಾಗಿಲ್ಲ ಮತ್ತು ಇಂದು ಅವರಿಗೆ ಯಾವುದೇ ಬೆಂಬಲ ಇಲ್ಲ.

ಮಾವೋವಾದಿಗಳು ಆರಂಭಿಸಿದ ಹಿಂಸಾಚಕ್ರ, ಹಿಂಸಾಚಾರವು ಸರ್ಕಾರ ಕಠಿಣವಾಗಿ ಸ್ಪಂದಿಸುವಂತೆ

ಪುಟ15ಕ್ಕೆ

ಬಲಪಂಥೀಯ ಶಕ್ತಿಗಳಿಗೆ ಕುಮ್ಮಕ್ಕು

- ಪ್ರೊ. ಜಯತಿ ಘೋಷ್

ಮಾವೋವಾದಿ ಶಕ್ತಿಗಳು ಇರುವ ಪ್ರದೇಶಗಳು ಐತಿಹಾಸಿಕವಾಗಿ ನಿರ್ಲಕ್ಷಕ್ಕೆ ಒಳಗಾದವುಗಳಾಗಿವೆ. ಅವು ಸಾಮಾನ್ಯವಾಗಿ ಮಳೆ ಆಶ್ರಿತ ಒಣ ಭೂಮಿಯಾಗಿದ್ದು ಅಭಿವೃದ್ಧಿ ಮತ್ತು ಮೂಲಸೌಕರ್ಯಗಳ ಕೊರತೆಯನ್ನು ಅನುಭವಿಸುತ್ತಿವೆ ಹಾಗೂ ಮಾರುಕಟ್ಟೆ ಶಕ್ತಿಗಳ ಅಸಮಾನತೆ ಮತ್ತು ಅನ್ಯಾಯಕ್ಕೆ ಒಳಗಾಗಿವೆ. ಅಲ್ಲಿನ ಜನತೆಯಲ್ಲಿ ರಾಜಕೀಯವಾಗಿ ಅತೃಪ್ತಿ, ಆಕ್ರೋಶ ಮೂಡಲು ಹಲವಾರು ರಾಜಕೀಯ ಮತ್ತು ಆರ್ಥಿಕ ವಿಷಯಗಳು ಕಾರಣವಾಗಿವೆ. ಇವರಲ್ಲಿರುವ ಆಕ್ರೋಶವನ್ನು ಪ್ರಗತಿಪರ ಬದಲಾವಣೆಯ ಉದ್ದೇಶಕ್ಕಾಗಿ ತಿರುಗಿಸದ ಮಾವೋವಾದಿಗಳು, ಜನರನ್ನು ಹಿಂಸಾತ್ಮಕ ಕೃತ್ಯಗಳಲ್ಲಿ ತೊಡಗಿಸುತ್ತಿದ್ದಾರೆ. ಇದರಿಂದಾಗಿ ಆಳುವ ಸರ್ಕಾರಗಳು ದಮನಕಾರಿ ಕ್ರಮಗಳನ್ನು ಕೈಗೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಂತಾಗಿದೆ.

ಮಾವೋವಾದಿಗಳು ಹೆಚ್ಚುತ್ತಿರುವ ಸಾಮ್ರಾಜ್ಯಶಾಹಿಯ ಪಾತ್ರದ ವಿರುದ್ಧ, ಕೇಂದ್ರ ಸರ್ಕಾರದ ನೀತಿಗಳ ವಿರುದ್ಧ ಅಥವಾ ರೈತರು ಎದುರಿಸುತ್ತಿರುವ ಕೃಷಿ ಬಿಕ್ಕಟ್ಟಿನ ವಿರುದ್ಧ, ಆಹಾರದ ಅಭದ್ರತೆ ಮತ್ತು ನಿರುದ್ಯೋಗದ ವಿರುದ್ಧ ಯಾವುದೇ ಚಳುವಳಿ, ಪ್ರತಿಭಟನೆಗಳನ್ನು ನಡೆಸದಿರುವುದು ಅವರು ಅಳವಡಿಸಿಕೊಂಡಿರುವ ರಾಜಕೀಯದ ಟೊಳ್ಳುತನವನ್ನು ಪ್ರತಿಬಿಂಬಿಸುತ್ತದೆ. ಮಾವೋವಾದಿಗಳ ಸಾಮಾಜಿಕ-ಆರ್ಥಿಕ ನೀತಿಗಳು ನರೋದ್ನಿಕ್ ಅವರ 'ರೈತರ ಯುಟೋಪಿಯಾ' (ಕಾಲ್ಪನಿಕ ಆದರ್ಶ ರಾಜ್ಯ)ದಂತಿದೆ. ಅಥವಾ ಆಧುನಿಕತೆ ಮತ್ತು ಕೈಗಾರಿಕೆ ವಿರುದ್ಧ ಧಾಳಿ ಮಾಡುವ 'ಪೋಲ್-ಪೊಟಿಸ್ಟ್' ಪ್ರವೃತ್ತಿಯಾಗಿದೆ.

ಬಲಪಂಥೀಯ ಶಕ್ತಿಗಳೊಂದಿಗಿನ ಅಕ್ರಮ ಸಂಬಂಧಗಳೊಂದಿಗೆ ಸಂಘಟಿತ ಎಡ ಪಕ್ಷಗಳ ವಿರುದ್ಧ ಅದರಲ್ಲೂ ಪ್ರತ್ಯೇಕವಾಗಿ ಸಿಪಿಐಎಂ ವಿರುದ್ಧ ಮಾವೋವಾದಿಗಳು ನಡೆಸುತ್ತಿರುವ ಧಾಳಿ ಬಲಪಂಥೀಯ ಶಕ್ತಿಗಳ ವಿರುದ್ಧ ಇರುವ ಪರ್ಯಾಯ ರಾಜಕಾರಣವನ್ನು ನಾಶ ಮಾಡುತ್ತದೆ. ಎಡ ಶಕ್ತಿಗಳನ್ನು ನಾಶ ಮಾಡಬೇಕೆಂದು ಹಾತೊರೆಯುತ್ತಿರುವ ಬಲಪಂಥೀಯ ಶಕ್ತಿಗಳಿಗೆ ಹಾಗೂ ಸಾಮ್ರಾಜ್ಯಶಾಹಿ ಶಕ್ತಿಗಳಿಗೆ ಕುಮ್ಮಕ್ಕು ನೀಡುತ್ತದೆ. ಮಾವೋವಾದಿಗಳ ಇಂತಹ ಗುರಿಯಿಲ್ಲದ ಮತ್ತು ಮತ್ತು ವಿಚಾರಶೂನ್ಯ ಹಿಂಸಾ ರಾಜಕಾರಣದ ನಡುವೆಯೂ ನಗರದಲ್ಲಿನ ಬುದ್ದಿಜೀವಿಗಳ ನಡುವೆ ತಮ್ಮ ಹಿಂಸಾಕೃತ್ಯಗಳನ್ನು ರೋಮಾಂಚನಕಾರಿಗೊಳಿಸುವ ಹಿತೈಷಿಗಳನ್ನು ಹೊಂದಿದ್ದಾರೆ. ಇದು ಪ್ರಭುತ್ವವು 'ಮಿಲಿಟರಿ ಪರಿಹಾರ'ದತ್ತ ಸರಿಯುವಂತೆ ಮಾಡುತ್ತದೆ. ಇವೆರಡನ್ನೂ ವಿರೋಧಿಸಬೇಕಾಗುತ್ತದೆ.

ಗೋ ಹತ್ಯೆ ನಿಷೇಧ, ಜನರ ಆಹಾರ ಹಕ್ಕಿನ ಮೇಲೆ ದಾಳಿ



ಬಿಜೆಪಿ ದರ್ಬಾರ್

ಗೋಸಂರಕ್ಷಣೆಯ ಮಂತ್ರ ತಮ್ಮ ದ್ವೇಷಪೂರಿತ ಕೋಮುವಾದಿ ವಿಚಾರಗಳನ್ನು ಹರಡಲು, ಕೋಮುಗಲಭೆಗಳನ್ನು ಹಬ್ಬಿಸಿ ಅಲ್ಪಸಂಖ್ಯಾತ ಸಮುದಾಯಗಳ ಮೇಲೆ ದಾಳಿ ಮಾಡಲು, ಹಾಗೂ ಅಧಿಕಾರದ ಕುರ್ಚಿಗಳಿಸಲು ಬಾರಿ ಅನುಕೂಲವಾಗುವ ಒಂದು ವಿಚಾರ ಎಂಬುದು ಸಂಘ ಪರಿವಾರ ಮತ್ತು ಬಿಜೆಪಿಯ ನಂಬಿಕೆ.

ಈ ನಿಟ್ಟಿನಲ್ಲಿ ಸಂಘ ಪರಿವಾರ ಸದಾ ಕ್ರಿಯಾಶೀಲ. ರಾಜ್ಯ ಬಿಜೆಪಿ ಸರ್ಕಾರ ಕರ್ನಾಟಕದಲ್ಲಿ ಗೋಹತ್ಯೆಯನ್ನು ನಿಷೇದಿಸುವ ಗೋಸಂರಕ್ಷಣಾ ಮಸೂದೆ (ತಿದ್ದುಪಡಿ)ಯನ್ನು ಈ ಹಿಂದೆಯೇ ಬೆಳಗಾವಿ ಅಧಿವೇಶನದಲ್ಲಿ ಮಂಡಿಸಿದೆ. ಅದಿನ್ನೂ ಅಂಗೀಕಾರವಾಗಿಲ್ಲ.

ಪ್ರಸಕ್ತ ವಿಧಾನ ಮಂಡಲದ ಅಧಿವೇಶನದಲ್ಲಿ ಸದರಿ ಮಸೂದೆಯನ್ನು ಮಂಡಿಸಿ ಅಂಗೀಕಾರ ಪಡೆಯಲಾಗುವುದು ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಖಾತೆ ಸಚಿವ ಸುರೇಶ್ ಕುಮಾರ್ ಹೇಳಿದ್ದಾರೆ. ಜನರ ಆಹಾರದ ಹಕ್ಕನ್ನು ಕಸಿಯುವ ಇಂತಹ ಕ್ರಮಕ್ಕೆ ಮುಂದಾಗಲು ಸಂಘ ಪರಿವಾರಕ್ಕೆ ಯಾವುದೇ ಹಿಂಜರಿಕೆ ಇಲ್ಲ. ದನಗಳ ಸಾಗಾಟ, ದನಗಳ ಮಾಂಸದ ಸಾಗಾಟ ಇತ್ಯಾದಿ ನೆಪದಲ್ಲಿ ರಾಜ್ಯದ ಕರಾವಳಿಯಲ್ಲಿ, ಇತ್ತೀಚಿನ ದಿನಗಳಲ್ಲಿ ಶಿವಮೊಗ್ಗ ಇತ್ಯಾದಿ ಭಾಗಗಳಲ್ಲಿಯೂ ಧನಸಾಗಾಣಿಕೆಗೆ ತಡೆಒಡ್ಡುವುದು, ಉದ್ರಿಕ್ತತೆ ಸೃಷ್ಟಿಸುವ ಪ್ರಯತ್ನ ಇಂತಹವು ನಡೆದಿವೆ. ಒಂದೊಮ್ಮೆ ಮಸೂದೆ ಅಂಗೀಕಾರವಾಗಿ ಕಾಯ್ದೆಯಾಗಿ ಬಿಟ್ಟರೆ ಸಂಘ ಪರಿವಾರದ ಇಂತಹ ಪುಂಡಾಟಿಕೆಗೆ ವ್ಯಾಪಕವಾಗಿ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಬಿಜೆಪಿ ಸರ್ಕಾರಕ್ಕೂ ಅದರ ಜುಟ್ಟು ಹಿಡಿದಿರುವ ಆರ್‌ಎಸ್‌ಎಸ್‌ಗೂ ಅದೇ ಬೇಕಾಗಿದೆ.

★

'ಮಾಡಬಾರದ ಕೆಲಸ ಮಾಡುತ್ತಿದ್ದೇವೆ'

"ನಾನೂ ಒಳಗೊಂಡಂತೆ ಎಲ್ಲ ರಾಜಕಾರಣಿಗಳೂ ಸ್ವಾರ್ಥಿಗಳು. ರಾಜಕಾರಣಿಗಳಾದ ನಾವು ಇಂದು ಕುರ್ಚಿ ಕಬಳಿಸುವುದಕ್ಕಾಗಿ ಮಾಡಬಾರದ ಕೆಲಸಗಳನ್ನು ಮಾಡುತ್ತಿದ್ದೇವೆ. ಜನರ ವಿಶ್ವಾಸ ಕಳೆದುಕೊಳ್ಳುತ್ತಿದ್ದೇವೆ. ಕೆಂಗೆಲ್ ಹನುಮಂತಯ್ಯ ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಡೆಯಲು ಆಗುತ್ತಿಲ್ಲ ಎಂಬ ಕೊರಗು ಮುಖ್ಯಮಂತ್ರಿ ಸ್ಥಾನದಲ್ಲಿ ಕುಳಿತಾಗಲೆಲ್ಲ ಕಾಡುತ್ತದೆ."

ಈ ಹೇಳಿಕೆ ಕೊಟ್ಟಿರುವುದು ಯಾರು ಎಂದು ಯಾರಿಗೂ ವಿವರಿಸಬೇಕಾದ ಅಗತ್ಯವೇ ಇಲ್ಲ. ಹೌದು ಡಾ.ಬಿ.ಎಸ್.ಯಡಿಯೂರಪ್ಪನವರೇ ಈ ಹೇಳಿಕೆ ನೀಡಿರುವುದು. ಇಂತಹ ಘೋರ ಆತ್ಮವಿಮರ್ಶಾತ್ಮಕ ಹೇಳಿಕೆಗಳು ಮುಖ್ಯಮಂತ್ರಿಗಳ ಬಾಯಿಂದ ನಿರಂತರವಾಗಿ ಉದುರುತ್ತಲೇ ಇವೆ. ಈ ಮಾತಿಗೆ ಸಮರ್ಥನೆಯಾಗಿ ಕೆಲವು ನಿರ್ದಿಷ್ಟವಾದ ಮಾಹಿತಿ ಕೊಡಿ ಎಂದರೆ ಮುಖ್ಯಮಂತ್ರಿಗಳು ಏನು ಕೊಟ್ಟಾರು! ಈ ಮೇಲಿನ ಮಾತನ್ನು ಅವರು ಹೇಳಿರುವುದು ಮಾಜಿ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ ಅವರ ಜನ್ಮ ಶತಮಾನೋತ್ಸವ ಸಮಾರಂಭದಲ್ಲಿ. ಅಂದು ಡಿಸೆಂಬರ್ 1, 2009. ಡಿಸೆಂಬರ್ 2, 2009 ರಂದು ಅವರು ನೀಡಿರುವ ಮತ್ತೊಂದು ಹೇಳಿಕೆ ನೋಡಿಬಿಟ್ಟರೆ ಯಡಿಯೂರಪ್ಪನವರ ಆತ್ಮವಂಚಕತನ ಯಾವ ಪರಿಯದ್ದು ಎಂದು ಗೊತ್ತಾಗಿಬಿಡುತ್ತದೆ. ಅವರ ಹೇಳಿಕೆ ಹೀಗಿದೆ.

"ಕರ್ನಾಟಕ ರಾಜ್ಯದಲ್ಲಿ ಯಾವುದೇ ರೀತಿಯ ಅಕ್ರಮ ಗಣಿಗಾರಿಕೆ ನಡೆಯುತ್ತಿಲ್ಲ. ಯಾವುದೇ ತನಿಖೆಯ ಅಗತ್ಯವಿಲ್ಲ".

ಆಂಧ್ರ ಪ್ರದೇಶದಲ್ಲಿ ಓಬಳಾಪುರಂ ಸೇರಿ ಆರು ಗಣಿ ಕಂಪನಿಗಳ ಗಣಿಗಾರಿಕೆಯನ್ನು ಈಗಾಗಲೇ ಸ್ಥಗಿತಗೊಳಿಸಲು ಆದೇಶಿಸಲಾಗಿದೆ. ಅಲ್ಲಿ ಗಣಿಗಾರಿಕೆ ನಿಂತಿದೆ. ಆದರೆ ಅಲ್ಲಿ ಅಕ್ರಮವಾಗಿ ಸಂಗ್ರಹಿಲಾಗಿರುವ ಅಪಾರ ಪ್ರಮಾಣದ ಗಣಿ ಅದಿರನ್ನು ರಾಜ್ಯದ ಭೂ ಪ್ರದೇಶದ ಮೂಲಕ ಕರ್ನಾಟಕದ ಸಮುದ್ರ ತೀರದ ಬಂದರಿಗೆ ಸಾಗಿಸಲಾಗುತ್ತಿದೆ ಎಂಬ ಬಗೆಗೆ ಖಚಿತ ವರದಿಗಳು ಮಾಧ್ಯಮಗಳಲ್ಲಿ ಪ್ರಕಟವಾಗುತ್ತಿವೆ. ಮಾಡಬಾರದ್ದು ಮಾಡುತ್ತಿದ್ದೇವೆ' ಎಂದರೆ ಇದೇನಾ ಯಡಿಯೂರಪ್ಪನವರೇ?

★

ಪ್ರತ್ಯೇಕ ಸಚಿವಾಲಯ ಯಾವುದಕ್ಕೆ

2005 ರಲ್ಲಿ ಕೇಂದ್ರದ ಮಟ್ಟದಲ್ಲಿ ಪ್ರಕೃತಿ ವಿಕೋಪ ನಿರ್ವಹಣಾ ಕಾಯ್ದೆ ಎಂಬ ಕಾಯ್ದೆಯೊಂದು ಅಂಗೀಕಾರವಾಗಿದೆ. ಆ ಕಾಯ್ದೆ ಪ್ರಕಾರ ಪ್ರಕೃತಿ ವಿಕೋಪ ನಿರ್ವಹಣೆಗೆ ರಾಜ್ಯಗಳ ಮಟ್ಟದಲ್ಲಿ ಪ್ರತ್ಯೇಕ ಸಚಿವರು ಇರಬೇಕು. ನೆರೆ, ಬರ, ಇನ್ನಿತರ ಅವಘಡಗಳು ಎದುರಾದಾಗ ಸನ್ನಿವೇಶವನ್ನು ಸಮರ್ಥವಾಗಿ ಎದುರಿಸಲು ಪ್ರತಿವರ್ಷದ ಬಜೆಟ್‌ನಲ್ಲಿಯೂ ಹಣವನ್ನು ಮೀಸಲಿಡಬೇಕು. ಪ್ರಕೃತಿ ವಿಕೋಪ ನಿರ್ವಹಣಾ ಸಮಿತಿಗಳನ್ನು ರಚಿಸಿ ಸಿದ್ಧವಿರಬೇಕು.

ಊಹುಂ. ರಾಜ್ಯದಲ್ಲಿ ಈ ಯಾವುದೂ ಜಾರಿಯಾಗಿಲ್ಲ. ಇದೆಲ್ಲಾ ಸರಿಯಾಗಿ ಜಾರಿಯಾಗಿದಿದ್ದರೆ ಮಳೆ, ಪ್ರವಾಹವನ್ನು ತಪ್ಪಿಸಲು ಆಗುತ್ತಿರಲಿಲ್ಲವಾದರೂ ಅಮೂಲ್ಯವಾದ ಜೀವಗಳನ್ನು ಆಹಾರಧಾನ್ಯ, ಜಾನುವಾರುಗಳು ಹಾಗೂ ಸಾಧ್ಯವಾದಷ್ಟು ಮಟ್ಟಿಗೆ ಆಸ್ತಿಪಾಸ್ತಿಗಳನ್ನು ರಕ್ಷಿಸುವುದು ಸಾಧ್ಯವಿತ್ತು. ಆ ಕೆಲಸ ಆಗಲಿಲ್ಲ. ಅನಾಹುತ ಆದ ಮೇಲಾದರೂ ರಾಜ್ಯ ಸರ್ಕಾರ ಇಂತಹ ವ್ಯವಸ್ಥೆಗೆ ಮುಂದಾಗಿದೆಯೇ? ಇಲ್ಲ. ಈ ನಡುವೆ ಡಿಸೆಂಬರ್ 1 ರಂದು ಬೆಂಗಳೂರಿಗೆ ವಿಶ್ವಮಂಗಲ ಗೋಗ್ರಾಮ ಯಾತ್ರೆ ಆಗಮಿಸಿದ ಸಂದರ್ಭದಲ್ಲಿ ಪಾಲ್ಗೊಂಡ ವಿಶ್ವ ಹಿಂದೂ ಪರಿಷತ್ ಅಂತರರಾಷ್ಟ್ರೀಯ ಅಧ್ಯಕ್ಷ ಅಶೋಕ್ ಸಿಂಘಾಲ್ ರಾಜ್ಯದಲ್ಲಿ ಗೋರಕ್ಷಣೆಗೆ ಪ್ರತ್ಯೇಕ ಸಚಿವಾಲಯ ಬೇಕು ಎಂದು ಒತ್ತಾಯಿಸಿದ್ದಾರೆ. ಬಿಜೆಪಿ ಸರ್ಕಾರಕ್ಕೆ ವಿಶ್ವಹಿಂದೂ ಪರಿಷತ್ ಹೇಳಿದ್ದೇ ಹೆಚ್ಚು ಪ್ರಿಯ ಆಗಿರಬಹುದು. ಸಂಘ ಪರಿವಾರದ ಆದ್ಯತೆ ಏನು ಅಂತ ಗೊತ್ತಾಯ್ತಲ್ಲ.

ನೆರೆ ಸಂತ್ರಸ್ತರ ಗಾಯದ ಮೇಲೆ ಬರೆ....

ಪುಟ 6 ರಿಂದ

ಹಂತದಲ್ಲಿ ಇಲ್ಲಿ ತಾರತಮ್ಯಗಳು ಸಂಭವಿಸಿರುತ್ತವೆ. ಪರಿಹಾರ ತಲುಪಿಸುವ ಸಂದರ್ಭದಲ್ಲಿ ಇಂತಹ ಎಲ್ಲಾ ತಾರತಮ್ಯ ಜನಾಂಗೀಯ ಬೇಧವನ್ನು ಮೀರಿ ನಿಲ್ಲುವುದು ಸರ್ಕಾರದ ಜವಾಬ್ದಾರಿ ಎಂಬುದನ್ನು ಅಧ್ಯಯನ ತಂಡ ಸೂಚಿಸಿದ್ದೇ ವಸಂತಕುಮಾರ ಅವರ ಕೆರಳುವಿಕೆಗೆ ಕಾರಣವಾಗಿತ್ತು. ವಸಂತಕುಮಾರ ಅವರ ಈ ಧೋರಣೆಯನ್ನು ಖಂಡಿಸಿದವರನ್ನೇ ತಮ್ಮ ಮೇಲೆ ಹಲ್ಲೆ ಮಾಡಲು ಬಂದರೆಂದು ಪತ್ರಿಕೆಗೆ ಬರೆಯುವಷ್ಟು ಆತ್ಮದ್ರೋಹ ಮಾಡಿಕೊಂಡರು. ದಲಿತಪರ,, ಅಲ್ಪಸಂಖ್ಯಾತರ ಪರ, ಬಡವರ ಪರ, ಮಹಿಳೆಯರ ಪರ ಮಾತಾಡುವವರೆಲ್ಲರನ್ನು ಸಮಾಜಘಾತುಕ ರೆಂದು, ದಂಗೆಕೋರರೆಂದು ಆರೋಪಿಸುವ ಚಾಳಿ ಇತ್ತೀಚಿಗೆ ಕರ್ನಾಟಕದಲ್ಲಿ ಹೆಚ್ಚಾಗುತ್ತಿದೆ. ಇದು ಆಳುವ ಸರ್ಕಾರದ ಜನವಿರೋಧಿ ಆಶಯಕ್ಕೆ ಪೂರಕವಾಗಿಯೇ ಅಸ್ತಿತ್ವಕ್ಕೆ ಬರುತ್ತಿದೆ.

ಈ ಬಗೆಯ ಅಧಿಕ ಪ್ರಸಂಗತನಗಳು ನೆರೆ ಸಂತ್ರಸ್ತರ ಬಗೆಗಿನ ಸರ್ಕಾರದ ಬದ್ಧತೆ ಮತ್ತು ಜನಸಮುದಾಯಗಳ ಸಹಾಯ -ಸಹಾನೂಭೂತಿ ಗಳನ್ನು ಮೊಟಕು ಗೊಳಿಸುತ್ತವೆ. ವಸಂತಕುಮಾರರ ಈ ನಡೆ ಸಂತ್ರಸ್ತರ ಗೋಳಿನ ಗಾಯದ ಮೇಲೆ ಬರೆ ಎಳೆದಂತಾಗಿದೆಯಲ್ಲದೆ, ಈ ಹೊತ್ತು ತತ್ವಪದಕಾರ ಕಡಕೋಳ ಮಡಿವಾಳಪ್ಪನವರ ಸಾಲೊಂದು ನೆನಪಿಗೆ ಬರದೆ ಇರದು. 'ಮಾನಗೇಡಿ ಮಂದಿ ಹುಟ್ಟಿ ಮತ್ರ್ಯಾ ಕೆಡಿಸ್ಯಾರೋ ಯಪ್ಪಾ'.

ಸಾಮಾನ್ಯ ಶಿಫಾರಸ್ಸುಗಳು

1. ನೆರೆ ಪೀಡಿತ ಪ್ರದೇಶದಲ್ಲಿ ಪರಿಹಾರ ನೀಡುವಲ್ಲಿ ತಾರತಮ್ಯ ಮತ್ತು ಭಾರಿ ಭ್ರಷ್ಟಾಚಾರ ನಡೆದಿರುವುದರಿಂದ ಒಟ್ಟು ಹಾನಿಯ ಬಗ್ಗೆ ಪುನರ್ ಸರ್ವೆ ನಡೆಸಬೇಕು.
2. ಸಾರ್ವತ್ರಿಕವಾಗಿ ಬಿಪಿಎಲ್ ಕಾರ್ಡ್ ವಿತರಿಸಬೇಕು.
3. ಇನ್ನು ಮೂರು ತಿಂಗಳ ಮಟ್ಟಿಗಾದರೂ ಉಚಿತ ರೇಷನ್ ಒದಗಿಸಬೇಕು.
4. ರೇಷನ್ ಅಂಗಡಿಗಳಲ್ಲಿ ತೊಗರಿಬೇಳೆ, ಸಕ್ಕರೆ, ಸೀಮೆಎಣ್ಣೆ, ಅಡುಗೆ ಎಣ್ಣೆ ಮತ್ತು ದಿನೋಪಯೋಗಿ ಬಟ್ಟೆ ವಿತರಿಸಬೇಕು.
5. ಈ ಪ್ರದೇಶಗಳಲ್ಲಿ ಜನತಾಬಜಾರುಗಳನ್ನು ತೆರೆದು ರಿಯಾಯಿತಿ ದರದಲ್ಲಿ ಇತರ ದಿನಸಿ ವಸ್ತುಗಳು ಮತ್ತು ಔಷಧಿಗಳನ್ನು ಕೊಡಬೇಕು.
6. ಯುನಿಟ್ ಪದ್ಧತಿ ಕೈಬಿಟ್ಟು 2.00 ರೂ.ಗೆ ಕೆ.ಜಿ.ಯಂತೆ ಪ್ರತಿಕುಟುಂಬಕ್ಕೆ 35 ಕೆ.ಜಿ. ಅಕ್ಕಿ ಮತ್ತು ಗೋಧಿ ಕೊಡಬೇಕು.
7. ಬಿದ್ದ ಮನೆಗಳಲ್ಲಿ ಕಚ್ಚಾ, ಪಕ್ಕಾ ಎಂಬ ವಿಭಾಗೀಕರಣ ಕೈಬಿಟ್ಟು ಏಕರೀತಿಯ ಪರಿಹಾರ ಕೊಡಬೇಕು. ಮತ್ತು ಪರಿಹಾರ ಮೊತ್ತದಲ್ಲಿ ಹೆಚ್ಚಳವಾಗಬೇಕು.
8. ಕೃಷಿ ಪರಿಹಾರ ಮೊತ್ತದಲ್ಲಿ ಹೆಚ್ಚಳವಾಗಬೇಕು. ಬೀಜ, ಗೊಬ್ಬರ, ಕೀಟನಾಶಕ ಇತ್ಯಾದಿ ಕೃಷಿ ಸಂಬಂಧಿ ಸಾಮಗ್ರಿಗಳನ್ನು ಒಂದು ಬೆಳೆಯ ಮಟ್ಟಿಗಾದರೂ ಉಚಿತವಾಗಿ ಕೊಡಬೇಕು. ಆನಂತರ ರಿಯಾಯಿತಿ ದರದಲ್ಲಿ ಕೊಡುವ ವ್ಯವಸ್ಥೆಯಾಗಬೇಕು.
9. ಈ ಪ್ರದೇಶದಲ್ಲಿ ಕೃಷಿ ಸಾಲವನ್ನು ಸಂಪೂರ್ಣ ಮನ್ನಾ ಮಾಡಬೇಕು.
10. ಎಂ. ರೇಗಾ ತಕ್ಷಣ ಪ್ರಚುರಗೊಳಿಸಬೇಕು. ಈ ಪ್ರದೇಶಗಳಲ್ಲಿ ಕೆಲಸದ ದಿನಗಳ ಮಿತಿ ಇರಬಾರದು. ಪುನರ್ ನಿರ್ಮಾಣ ಕಾಮಗಾರಿಗಳನ್ನು ಈ ಕಾಯ್ದೆಯಡಿ ವಿಲೀನಗೊಳಿಸಬೇಕು ಮತ್ತು ದಿನಗಳ ಮಿತಿ ಇರಬಾರದು.
11. ಪ್ರಾಥಮಿಕದಿಂದ ಸ್ನಾತಕೋತ್ತರದವರೆಗೆ ವಿದ್ಯಾರ್ಥಿಗಳಿಗೆ ಶುಲ್ಕ ಮನ್ನಾ ಮಾಡಬೇಕು. ಅವಶ್ಯಕತೆಗೆ ಅನುಸರಿಸಿ ವಸತಿ ನಿಲಯಗಳನ್ನು ತೆರೆಯಬೇಕು.
12. ಉದ್ಯೋಗ ಖಾತ್ರಿ ಕಾಯ್ದೆಯನ್ನು ಜಾರಿ ಮಾಡದ ಮತ್ತು ಸಕಾಲಕ್ಕೆ ಪೇಮೆಂಟ್ ಮಾಡದ ಈ ಸಂಬಂಧಿ ಇತರ ಪ್ರಕ್ರಿಯೆಗಳನ್ನು ನಿರ್ವಹಿಸ ಅಧಿಕಾರಿಗಳು ಮತ್ತು ಸಿಬ್ಬಂದಿಯ ಮೇಲೆ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕು. ಗುತ್ತಿಗೆ ಮತ್ತು ಯಂತ್ರಗಳ ಬಳಕೆ ನಿಲ್ಲಬೇಕು.
13. ತಾತ್ಕಾಲಿಕ ಶೆಡ್ಡುಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸಬೇಕು.
14. ಗ್ರಾಮ ಮಟ್ಟದಲ್ಲಿ ಎಪತ್ತು ನಿರ್ವಹಣಾ ಸಮಿತಿಗಳ ರಚನೆಯಾಗಬೇಕು. ಈಸಮಿತಿಯಲ್ಲಿ ಶೇ. 50 ಮಹಿಳೆಯರು ಇರಬೇಕು.
15. ಮನೆ ಮತ್ತು ಕೃಷಿ, ಬೆಳೆ ಹಾನಿಗಳೊಂದಿಗೆ ಇತರ ಹಾನಿಗಳನ್ನು ಪರಿಹಾರದ ವ್ಯಾಪ್ತಿಗೆ ಒಳಪಡಿಸಬೇಕು.
16. ಪರಿಹಾರ ಚೆಕ್‌ಗಳನ್ನು ಜಂಟಿ ಹೆಸರಿನಲ್ಲಿ ನೀಡಬೇಕು.
17. ಗೇಣಿದಾರರು ಮತ್ತುಬಾಡಿಗೆದಾರರಿಗೂ ಪರಿಹಾರ ದೊರೆಯುವಂತಾಗಬೇಕು.
18. ವಿಪತ್ತು ನಿರ್ವಹಣಾ ಕಾಯ್ದೆ - 2005 ಜಾರಿ ಮಾಡಬೇಕು.
19. ಪುನರ್ವಸತಿ ಜವಾಬ್ದಾರಿ ಸಂಪೂರ್ಣ ಸರ್ಕಾರ ನಿಭಾಯಿಸಬೇಕು. ಖಾಸಗಿಯವರ ಸಹಭಾಗಿತ್ವ ತಡೆಗಟ್ಟಬೇಕು.

ಜಿಡಿಪಿ ಬೆಳವಣಿಗೆ ಶೇ. 7.9, ಆಹಾರ ಬೆಲೆಯೇರಿಕೆ ಶೇ. 17.47

ಜುಲೈ-ಸೆಪ್ಟಂಬರ್ ಅವಧಿಯಲ್ಲಿ ಜಿಡಿಪಿ ಅಂದರೆ ದೇಶದ ಒಟ್ಟು ಆಂತರಿಕ ಉತ್ಪಾದನೆ 7.9ಶೇ. ದರದಲ್ಲಿ ಬೆಳೆದಿದೆ ಎಂಬುದು ಭಾರತದ ಆಳುವ ಮಂದಿಗೆ ಆಶ್ಚರ್ಯಕರ ಸಂತೋಷ ತಂದಿದೆಯಂತೆ. ಜಾಗತಿಕ ಹಿಂಜರಿತದ ಸಮಯದಲ್ಲಿ ಇದೊಂದು ಸಾಧನೆ ಎನ್ನಲಾಗುತ್ತಿದೆ. ಎಪ್ರಿಲ್- ಜೂನ್ ಅವಧಿಯಲ್ಲಿ ಈ ಬೆಳವಣಿಗೆ ದರ 6.1 ಶೇ. ಇತ್ತು. ಕೈಗಾರಿಕಾ ಉತ್ಪಾದನೆ 9.2ಶೇ. ದರದಲ್ಲಿ ಹೆಚ್ಚಿದೆ. ಹಿಂದಿನ ಅಂದರೆ ಎಪ್ರಿಲ್- ಜೂನ್ ಅವಧಿಯಲ್ಲಿ ಇದು ಕೇವಲ 3.4ಶೇ. ಇತ್ತು. ಕಳೆದ ವರ್ಷ ಇದೇ ಅವಧಿಯಲ್ಲಿ ಈ ಏರಿಕೆಯ ಪ್ರಮಾಣ 5.1ಶೇ. ಇತ್ತು. ಇನ್ನೂ ಆಶ್ಚರ್ಯದ ಸಂಗತಿಯೆಂದರೆ ಕೃಷಿ ವಲಯ ಮಾನ್ಸೂನ್ ವಿಫಲತೆಯಿಂದಾಗಿ ಇಳಿಕೆ ಕಾಣಬಹುದು ಎಂಬ ನಿರೀಕ್ಷೆ ಸುಳ್ಳಾಗಿ ಅದೂ 0.9ಶೇ. ಬೆಳವಣಿಗೆ ದಾಖಲಿಸಿದೆಯಂತೆ. ಸರಕಾರದ ಉತ್ತೇಜಕ ಪ್ಯಾಕೇಜು ಫಲ ಕೊಡುತ್ತಿದೆಯಂತೆ

ದೇಶದ ಜನಸಾಮಾನ್ಯರಿಗೆ ಮಾತ್ರ ಈ ಸುದ್ದಿ ಸಂತಸ ತಂದಿಲ್ಲ. ಏಕೆಂದರೆ ನವಂಬರ್ ತಿಂಗಳಲ್ಲಿ ಆಹಾರ ವಸ್ತುಗಳನ್ನು ಆಧರಿಸಿದ ಹಣದುಬ್ಬರ 17.47ಶೇ.ಕ್ಕೇರಿದೆ. ಏಕೆ ಹೀಗೆ? ಜಿಡಿಪಿ ಬೆಳವಣಿಗೆಯ ಫಲ ಜನಸಾಮಾನ್ಯರಿಗೆ ಎಂದಾದರೂ ತಲುಪೀತೇ? ಆಮ್ ಆದ್ಮಿ ಎಂಬುದು ಇನ್ನೊಂದು ಒಣ ಮಂತ್ರವೆಂಬುದು ಬೇಗನೇ ಸಿದ್ಧವಾಗುತ್ತಿದೆಯೇ? ಜನಸಾಮಾನ್ಯರಿಗೂ ಈ ಆಮ್ ಆದ್ಮಿ ಮಂತ್ರದ ಸರಕಾರ 'ಉತ್ತೇಜಕ ಪ್ಯಾಕೆಜು'ಗಳನ್ನು ಕೊಡುವುದಿಲ್ಲವೇಕೆ? ಇದೀಗ ಎಲ್ಲರನ್ನೂ ಕಾಡುತ್ತಿರುವ ಪ್ರಶ್ನೆ.

ಬಡಜನರು ಈ ರೀತಿ ಅಭೂತಪೂರ್ವ ಬೆಲೆಯೇರಿಕೆಯಿಂದ ತತ್ತರಿಸುತ್ತಿರುವಾಗ ದಿಲ್ಲಿಯ ಕಾಂಗ್ರೆಸ್ ಸರಕಾರ ಡಿಸೆಂಬರ್ 1ರಿಂದ ನೀರಿನ ದರಗಳನ್ನು ಏರಿಸಿದೆ. ಇತ್ತ ಬಿಜೆಪಿಯೂ ಹಿಂದೆ ಬಿದ್ದಿಲ್ಲ. ಕರ್ನಾಟಕದಲ್ಲಿ ವಿದ್ಯುತ್ ದರಗಳನ್ನು ಅದೇ ದಿನದಿಂದ ಏರಿಸಲಾಗಿದೆ.

★

ಮತ್ತೆ ಸಂಸತ್ತಿನ ಅಧಿವೇಶನಾವಧಿಯ ಕಡಿತದ ಪ್ರಯತ್ನ

ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಮೂರು ದಿನಗಳ ಕಡಿತವನ್ನು ಮಾಡಲು ಆಳುವ ಕಾಂಗ್ರೆಸ್ ನೇತೃತ್ವದ ಯುಪಿಎ ಮತ್ತು ಪ್ರಮುಖ ಪ್ರತಿಪಕ್ಷ ಬಿಜೆಪಿ ನೇತೃತ್ವದ ಎನ್‌ಡಿಎ ನಡುವೆ ಒಮ್ಮತ ಏರ್ಪಟ್ಟಂತೆ ಕಾಣುತ್ತದೆ. ಡಿಸೆಂಬರ್ 21ರಂದು ಕೊನೆಗೊಳ್ಳಬೇಕಾಗಿದ್ದ ಅಧಿವೇಶನವನ್ನು 18ರಂದೇ ಕೊನೆಗೊಳಿಸುವ ಸಂಭವವಿದೆ. ಈ ಮೊದಲು ಲಿಬರ್ಹಾನ್ ಆಯೋಗದ ವರದಿಯ ಹಿಂದಿ ಅನುವಾದ ಸಿದ್ಧವಾಗಿಲ್ಲವಾದ್ದರಿಂದ ಡಿಸೆಂಬರ್ 1ರಂದು ಅದರ ಮೇಲೆ ಆರಂಭವಾಗಬೇಕಾಗಿದ್ದ ಚರ್ಚೆಯನ್ನು ಮುಂದೂಡಲು ಅವರಲ್ಲಿ ಒಮ್ಮತವೇರ್ಪಟ್ಟಿತ್ತು. ಆದರೆ ಸಂಸತ್ ಅಧಿವೇಶನಗಳ ಕಡಿತವನ್ನು ಎಡಪಕ್ಷಗಳು ಬಲವಾಗಿ ವಿರೋಧಿಸುತ್ತಿವೆ. ಜನರ ಜ್ವಲಂತ ಪ್ರಶ್ನೆಗಳನ್ನು ಕುರಿತಂತೆ ಮುಜುಗರ ಉಂಟು ಮಾಡುವ ಸಂದರ್ಭಗಳಿಂದ ತಪ್ಪಿಸಿಕೊಳ್ಳಲು ಆಳುವ ವರ್ಗಗಳ ಪಕ್ಷಗಳು ಹೆಚ್ಚೆಚ್ಚಾಗಿ ಪ್ರಯತ್ನಿಸುತ್ತಾ ಸಂಸದೀಯ ವ್ಯವಸ್ಥೆಯನ್ನೇ ಬುಡಮೇಲು ಮಾಡುವುದನ್ನು ತಪ್ಪಿಸಲು ಸಂಸತ್ತು ಒಂದು ವರ್ಷದಲ್ಲಿ ಕನಿಷ್ಟ 100 ಸಲವಾದರೂ ಸಭೆ ಸೇರಬೇಕು ಎಂಬುದು ಎಡಪಕ್ಷಗಳ ಆಗ್ರಹ.

★

ಸಂಸತ್ತಿನಲ್ಲಿ ಪ್ರಶ್ನೆ ಕೇಳಬೇಕಾದ ಸದಸ್ಯರೇ ಗೈರು ಹಾಜರು

ನವೆಂಬರ್ 30ರಂದು ಲೋಕಸಭೆಯಲ್ಲಿ ಪ್ರಶ್ನೆಗಳನ್ನು ಕೇಳಲು 20 ಸದಸ್ಯರು ಪ್ರಶ್ನೆಗಳನ್ನು ಕಳಿಸಿದ್ದರು. ಆದರೆ "ಪ್ರಶ್ನಾ ಕಾಲ"ದಲ್ಲಿ ಅವರ ಹೆಸರು ಕೂಗಿದಾಗ ಅವರಲ್ಲಿ 17 ಮಂದಿ ಗೈರು ಹಾಜರಾಗಿದ್ದುದು ಕಂಡು ಬಂತು. ಇದರಿಂದ ಕುಪಿತರಾದ ಲೋಕಸಭಾಧ್ಯಕ್ಷರು ಇದರಿಂದ ಸಂಸತ್ತಿನ ಸಮಯ ಹಾಗೂ ಸಾರ್ವಜನಿಕ ಹಣ ಪೋಲಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು. ಈ 17ರಲ್ಲಿ 9 ಮಂದಿ ಕಾಂಗ್ರೆಸ್ ಸದಸ್ಯರು. ಆದ್ದರಿಂದ ಸೋನಿಯಾ ಗಾಂಧಿಯವರೂ ಕುಪಿತರಾಗಿ ಆ ಸದಸ್ಯರಿಗೆ ವಿವರಣೆ ನೀಡುವಂತೆ ಕೇಳಿದ್ದಾರಂತೆ.

ಯುಪಿಎ II ದರ್ಬಾರ್‌ನಲ್ಲಿ

★


ಕೇಂದ್ರದ ತಂಡ ಹೋಯಿತು, ಬಂತು

ಪಶ್ಚಿಮ ಬಂಗಾಳದಲ್ಲಿ ರಾಷ್ಟ್ರಪತಿ ಆಡಳಿತವನ್ನು ಹೇರಬೇಕೆಂದು ಬೊಬ್ಬೆ ಹಾಕುತ್ತಿರುವ ಮಿತ್ರ ಪಕ್ಷ ತೃಣಮೂಲ ಕಾಂಗ್ರೆಸಿನ ಒತ್ತಡಕ್ಕೆ ಯುಪಿಎ ಸರಕಾರ ಮಣಿದು ಅಲ್ಲಿ ತನಿಖೆಗೆಂದು ಒಂದು ತಂಡವನ್ನು ಕಳಿಸಿದೆ. ಇದು ಸಂವಿಧಾನದ ಒಕ್ಕೂಟ ರಚನೆಯ ಉಲ್ಲಂಘನೆ ಎಂದು ಸಿಪಿಐ(ಎಂ) ಇದನ್ನು ಖಂಡಿಸಿದೆ. ಸಂಸತ್ತಿನಲ್ಲೂ ಇದಕ್ಕೆ ಭಾರೀ ವಿರೋಧ ವ್ಯಕ್ತವಾದಾಗ ಗೃಹಮಂತ್ರಿಗಳು ರಾಷ್ಟ್ರಪತಿ ಆಳ್ವಿಕೆ ಹೇರುವ ಯೋಚನೆ ಇಲ್ಲ, ಬೊಮ್ಮಾಯಿ ತೀರ್ಪಿನ ನಂತರ ಅದಕ್ಕೆ ಅವಕಾಶವೂ ಇಲ್ಲ ಎಂದು ಹೇಳಬೇಕಾಗಿ ಬಂದಿದೆ. ಅತ್ತ ಪಶ್ಚಿಮ ಬಂಗಾಳಕ್ಕೆ ಹೋದ ತಂಡ ಕೊಲ್ಕತಾದಲ್ಲಿ ರಾಜ್ಯ ಸರಕಾರದ ಅಧಿಕಾರಿಗಳನ್ನು ಮತ್ತು ತೃಣಮೂಲ ಕಾಂಗ್ರೆಸಿನ ಪ್ರತಿನಿಧಿಗಳನ್ನು ಭೇಟಿ ಮಾಡಿದರು, ಆದರೆ ತೃಣಮೂಲ ಕಾಂಗ್ರೆಸ್ ಬಯಸಿದಂತೆ ಗಲಭೆ ಪೀಡಿತ ಪ್ರದೇಶಗಳಿಗೆ ಭೇಟಿ ನೀಡದೆ ದಿಲ್ಲಿಗೆ ವಾಪಾಸಾಗಿದ್ದಾರೆ ಎಂದು ವರದಿಯಾಗಿದೆ.

★

ಎರಡು ವಾರ್ಷಿಕಗಳು-ಇಬ್ಬಂದಿ ನಿಲುವುಗಳು

ಈ ವಾರ ದೇಶ ಎರಡು ವಾರ್ಷಿಕಗಳನ್ನು ಕಂಡಿತು. ಒಂದು, 26/11 ರ ಅಂದರೆ ಮುಂಬೈ ಮೇಲೆ ಪಾಕಿಸ್ತಾನೀ ಉಗ್ರರ ದಾಳಿಯ ಮೊದಲ ವಾರ್ಷಿಕ , ಇನ್ನೊಂದು 3/12 ಅಂದರೆ ಡಿಸೆಂಬರ್ 3, 1984ರಂದು ಸಾವಿರಾರು ಬಡಜನರನ್ನು ಬಲಿತೆಗೆದುಕೊಂಡ, ಬದುಕುಳಿದವರ ಬದುಕನ್ನು ನರಕವಾಗಿಸಿದ ಭೋಪಾಲ್ ದುರಂತದ 25ನೇ ವಾರ್ಷಿಕ. 26/11 ರ ಬಗ್ಗೆ ಬಹಳಷ್ಟು ಕೇಳಬಂತು, ಅಮೆರಿಕಾ ಆಡಳಿತವೂ ಸಹಾಯ ಮಾಡುವುದಾಗಿ ಪ್ರಚಾರ ಮಾಡಲಾಯಿತು. ಆದರೆ ಭೋಪಾಲ್ ದುರಂತದ ಬಗ್ಗೆ ಮಾಧ್ಯಮಗಳಲ್ಲಾಗಲೀ, ಸರಕಾರದಿಂದಾಗಲೀ ಬಹಳವೇನೂ ಕೇಳಬರಲಿಲ್ಲ. ಆದರೆ ಕೆಲವು ಆತಂಕಕಾರಿ ಸಂಗತಿಗಳು ಬೆಳಕಿಗೆ ಬಂದವು (ವಿವರಗಳಿಗೆ ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಪುಟ 16 ಲೇಖನವನ್ನು ನೋಡಿ)



ಇನ್ನು 'ಸುದ್ದಿ ಪ್ಯಾಕೇಜು'ಗಳ ಪರ್ವವೇ?

ಮಹಾರಾಷ್ಟ್ರದಲ್ಲಿ ಯುಪಿಎ ಮಿತ್ರ ಪಕ್ಷಗಳು ಕಾಂಗ್ರೆಸ್ ಮತ್ತು ಎನ್‌ಸಿಪಿ ಅಧಿಕಾರಕ್ಕೆ ಮರಳಿರುವುದು ಯುಪಿಎ ಆಡಳಿತಕ್ಕೆ ದೊರೆತಿರುವ ಬೆಂಬಲ ಎಂದು ಬಿಂಬಿಸಲು ಕಾಂಗ್ರೆಸ್ ಯತ್ನಿಸುತ್ತಿದೆ. ಮಹಾರಾಷ್ಟ್ರದ ಮುಖ್ಯ ಮಂತ್ರಿಗಳಾಗಿ ಮತ್ತೆ ಅಧಿಕಾರ ವಹಿಸಿಕೊಂಡಿರುವ ಕಾಂಗ್ರೆಸಿನ ಅಶೋಕ ಚವ್ಹಾಣ್‌ರವರ ಚುನಾವಣಾ ವೆಚ್ಚ ಈಗ ಸುದ್ದಿಗೆ ಬಂದಿದೆ. ಅವರು ಸಲ್ಲಿಸಿದ ವಿವರಗಳ ಪ್ರಕಾರ ಆತ ಚುನಾವಣಾ ಜಾಹೀರಾತಿಗೆ ಖರ್ಚು ಮಾಡಿದ್ದು ರೂ.11,379. ಅದರಲ್ಲಿ ಪತ್ರಿಕಾ ಜಾಹೀರಾತಿಗೆ ಕೇವಲ ರೂ.5379. ಆದರೆ ಚುನಾವಣಾ ಸಮಯದಲ್ಲಿ ಇನ್ನು "ಅಶೋಕ ಪರ್ವ" ಎಂದು ಬಿಂಬಿಸುವ 47 ಪೂರ್ಣ ಪತ್ರಿಕಾ ಪುಟಗಳು ತಮ್ಮ ಬಳಿಯಿರುವುದಾಗಿ 'ಹಿಂದೂ' ದೈನಿಕದ ಪ್ರಖ್ಯಾತ ಪತ್ರಕರ್ತ ಪಿ. ಸಾಯಿನಾಥ್ ಹೇಳಿದ್ದಾರೆ. ಇವುಗಳು ಜಾಹಿರಾತುಗಳೇ ಅಥವಾ 'ಸುದ್ದಿ ಪ್ಯಾಕೇಜು'ಗಳೇ? ಏನೇ ಆದರೂ ಮುಖ್ಯ ಮಂತ್ರಿಗಳು ಕಾಂಗ್ರೆಸ್ ಅಭ್ಯರ್ಥಿಯಾಗಿ ಅಥವ ಅವರ ಚುನಾವಣೆಯ ಪರವಾಗಿ ಯಾರೋ ಇದಕ್ಕೆ ಖರ್ಚು ಮಾಡಿರುತ್ತಾರೆ. ಇದರ ಮೌಲ್ಯ ಕೋಟಿಗಟ್ಟಲೆ ರೂಪಾಯಿಗಳಾಗುತ್ತವೆ. ಆದರೆ ಅಶೋಕ ಚವ್ಹಾಣ್ ಸಲ್ಲಿಸಿದ ವಿವರಗಳ ಪ್ರಕಾರ ಅವರ ಒಟ್ಟು ಚುನಾವಣಾ ವೆಚ್ಚವೇ ಕೇವಲ ರೂ. 7ಲಕ್ಷ. 'ಅಶೋಕ ಪರ್ವ' ಎಂದರೆ 'ಸುದ್ದಿ ಪ್ಯಾಕೇಜು'ಗಳ ಹೊಸ ಪರ್ವವೇ ಎಂದು ಸಾಯಿನಾಥ್ ಪ್ರಶ್ನಿಸುತ್ತಾರೆ.

ಅತ್ಯವಶ್ಯಕ ಔಷಧಿ ಉತ್ಪಾದನೆಯಲ್ಲಿ ಕುಸಿತ

ದೇಶದಲ್ಲಿ ಹಂದಿಜ್ವರದ ಕುರಿತು ಅಗತ್ಯಕ್ಕಿಂತ ಹೆಚ್ಚು ಭೀತಿ ಮೂಡಿಸಿ ಜನರನ್ನು ಗಾಬರಿ ಮಾಡಿದ ಪ್ರಕರಣ ಜನರ ಮನಸ್ಸಿನಲ್ಲಿ ಇನ್ನೂ ಹಸಿರಾಗಿದೆ. ಹಂದಿಜ್ವರಕ್ಕೆ ವ್ಯಾಕ್ಸಿನ್ ರೂಪಿಸುವ ಪ್ರಯತ್ನ ಭಾರತದಲ್ಲೂ ನಡೆಯುತ್ತಿದೆ. ಹಲವು ಖಾಸಗೀ ಕಂಪನಿಗಳು ಔಷಧಿ ಮಾರುಕಟ್ಟೆಯನ್ನು ಕಬಳಿಸಲು ಪೈಪೋಟಿಗೆ ಬಿದ್ದಿವೆ.

ಮುಖ್ಯ ವಿಚಾರ ಅದಲ್ಲ, ಬೇರೆ ಇದೆ. ಇವೆಲ್ಲಾ, ಒಂದೆಡೆ ನಡೆಯುತ್ತಿದ್ದರೆ ಮತ್ತೊಂದೆಡೆ ದೇಶದಲ್ಲಿ ಹುಟ್ಟುವ ಎಳೆಯ ಮಕ್ಕಳಿಗೆ ನೀಡಲೇಬೇಕಾದ ಹಲವು ಅತ್ಯಮೂಲ್ಯ ವ್ಯಾಕ್ಸಿನ್‌ಗಳು ಅಗತ್ಯ ಪ್ರಮಾಣದಲ್ಲಿ ಉತ್ಪಾದನೆಯಾಗುತ್ತಿಲ್ಲ. ಕೇಂದ್ರ ಸರ್ಕಾರ ಈ ಬಗೆಗೆ ಸಾಕಷ್ಟು ಗಮನ ನೀಡುತ್ತಿಲ್ಲ.

ಈ ಹಿಂದಿನ ಯುಪಿಎ ಸರ್ಕಾರ ಸರ್ಕಾರಿ ಸ್ವಾಮ್ಯದ ಔಷಧ ತಯಾರಿಕಾ ಘಟಕವನ್ನೇ ಮುಚ್ಚಿತ್ತು. ಯುಪಿಎ 2 ಸರ್ಕಾರದ ಆರೋಗ್ಯ ಮಂತ್ರಿ ಅಜಾದರು ತಾವು ಅಧಿಕಾರ ವಹಿಸಿಕೊಂಡ ಹೊಸದರಲ್ಲಿ ಮುಚ್ಚಿದ ಘಟಕವನ್ನೂ ಮರಳಿ ಆರಂಭಿಸುವುದಾಗಿ ಘೋಷಿಸಿದರು. ಆದರೆ ಮಾತಿಗೆ ತಪ್ಪಿದರು. ಈಗ ಖಾಸಗಿ ಕಂಪನಿಗಳ ಮೇಲೆ ಅವಲಂಬನೆ ಹೆಚ್ಚಾಗಿದೆ.

ಈ ಕೆಳಗಿನ ಪಟ್ಟಿಯನ್ನು ನೋಡಿದರೆ ಯಾವ ಯಾವ ಔಷಧಿ ಯಾವ ಪ್ರಮಾಣದಲ್ಲಿ ಕೊರತೆಯಲ್ಲಿದೆ ಎಂಬುದು ತಿಳಿದುಬರುತ್ತದೆ. ಈ ಕುರಿತು ಸಿಪಿಐ(ಎಂ) ಸಂಸದರಾದ ಬೃಂದಾ ಕಾರಟ್ ಕೇಂದ್ರ ಆರೋಗ್ಯ ಸಚಿವರಿಗೆ ಪತ್ರ ಬರೆದು ಗಮನ ಸೆಳೆದಿದ್ದಾರೆ. ಸಿಡುಬು, ಧನುರ್ವಾತ ಮುಂತಾದ ಗಂಭೀರ ಕಾಯಿಲೆಗಳ ಔಷಧಿಗಳಿಗೂ ತೀವ್ರ ಕೊರತೆಯಾಗಿದೆ ಎಂದರೆ ಪರಿಸ್ಥಿತಿ ಎಷ್ಟು ಗಂಭೀರ!!

	ಅಗತ್ಯ(ಕೋಟಿಗಳಲ್ಲಿ)	2008 ಮತ್ತು 09ರ ಉತ್ಪಾದನೆ	2009 ಮತ್ತು 10ರ ಉತ್ಪಾದನೆ	ಕೊರತೆ
ಬಿಸಿಜಿ	10.25	8.89	10.11	-
ಡಿಪಿಟಿ	18.19	14.10	14.31	9 ಕೋಟಿ
ಡಿ.ಟಿ.	4.79	4.47	0	
ಓಪಿವಿ	19.79	17.88	16.63	3 ಕೋಟಿ
ಟಿ.ಟಿ.	17.83	13.78	13.69	3.14 ಕೋಟಿ
ಮೀಸ್‌ಲೆಸ್	4.78	4.98	3.88	90 ಲಕ್ಷ
ಒಟ್ಟು	75.63	64.10	58.32	
ಕೊರತೆ	-	11.22	17	-
ಶೇ.ವಾರು ಕೊರತೆ	-	ಶೇ14.50	ಶೇ.22	-

ಜಗದಗಲ

ಶರತ್‌ಚಂದ್ರ

ಅಫಘಾನಿಸ್ತಾನಕ್ಕೆ 30 ಸಾವಿರ ಹೆಚ್ಚು ಸೈನಿಕರು

ಮತ್ತೆ ಸೋತ ಒಬಾಮಾರ 'ಬದಲಾವಣೆ'

ಒಬಾಮಾ 'ಬದಲಾವಣೆ' ಬಯಸಿದ ಅವರ ಅಮೆರಿಕನ್ ಮತ್ತು ಅಂತರ್‍ರಾಷ್ಟ್ರೀಯ ಬೆಂಬಲಿಗರಿಗೆ ಮತ್ತೊಮ್ಮೆ ನಿರಾಶೆ ತಂದಿದ್ದಾರೆ. ಬುಶ್ ಕತ್ತಲ ಯುಗದ ನೀತಿಗಳಲ್ಲಿ ಪ್ರಮುಖ ಬದಲಾವಣೆ ತರುವಲ್ಲಿ ಮತ್ತೆ ಸೋತಿದ್ದಾರೆ. ಅಮೆರಿಕನ್ ಮಿಲಿಟರಿ-ಕೈಗಾರಿಕಾ ಸಂಕೀರ್ಣದ ಒತ್ತಡಕ್ಕೆ ಮತ್ತೆ ಬಲಿಯಾಗಿದ್ದಾರೆ. ಅಮೆರಿಕನ್ ಜನರಲ್ ಒತ್ತಡಕ್ಕೆ ಮಣಿದಿದ್ದಾರೆ. ಅಫ್ಘಾನಿಸ್ತಾನಕ್ಕೆ 30 ಸಾವಿರ ಸೈನಿಕರನ್ನು ಕಳಿಸಿ 'ಭಯೋತ್ಪಾದನೆ ವಿರುದ್ಧ ಹೋರಾಟ' ತೀವ್ರಗೊಳಿಸುವ ಹೊಸ ಕಾರ್ಯಕ್ರಮ ಘೋಷಿಸಿದ್ದಾರೆ. ಅದೂ ನೊಬೆಲ್ ಶಾಂತಿ ಪ್ರಶಸ್ತಿ ಪಡೆದ ಬೆನ್ನಲ್ಲೇ! ಒಬಾಮಾರ ಶಾಂತಿ ಪ್ರಶಸ್ತಿ ಸ್ವೀಕಾರ ಭಾಷಣದ ಲೇಖಕನ ಕೆಲಸ ಸ್ವಲ್ಪವಾದರೂ ಸುಲಭವಾಗಲಿ ಅಂತ ಇರಬಹುದು, 2011 ಜುಲೈ ಒಳಗೆ ತನ್ನ 'ಕೆಲಸ' ಮುಗಿಸಿ ಅಮೆರಿಕನ್ ಪಡೆಗಳು ಹಿಂತಿರುಗುವವು ಎಂಬ ಭರವಸೆ ಕೊಟ್ಟಿದ್ದಾರೆ. 2001 ರಲ್ಲಿ ಆರಂಭವಾದ 8 ವರ್ಷಗಳಿಂದ ನಡೆಯುತ್ತಿರುವ ಈ 'ಕೆಲಸ' 18 ತಿಂಗಳಲ್ಲಿ ಮುಗಿದೀತೇ ?

ಆಖೈರಾಗಿ ಈ ನೀತಿ ಅಂಗೀಕರಿಸಿ ಘೋಷಿಸುವ ಮೊದಲು ಅಮೆರಿಕದ ಆಳುವ ವಲಯಗಳಲ್ಲಿ ತೀವ್ರ ಚರ್ಚೆ ನಡೆಯಿತು. ಒಬಾಮಾ ಈ ನೀತಿಗೆ ತೀವ್ರ ಪ್ರತಿರೋಧ ವ್ಯಕ್ತ ಪಡಿಸಿದರು. ಆದರೆ ಡೆಮೊಕ್ರಾಟಿಕ್ ಪಕ್ಷದ ಬಲಪಂಥೀಯ ಗುಂಪು, ಮಿಲಿಟರಿ-ಕೈಗಾರಿಕಾ ಸಂಕೀರ್ಣದ ಒತ್ತಡ, ರಿಪಬ್ಲಿಕನ್ ಪಕ್ಷದ ಹೊರಗಣ ಒತ್ತಡಕ್ಕೆ ಕೊನೆಗೂ ಮಣಿದರು ಎನ್ನಲಾಗಿದೆ. ಆದರೆ ಒಬಾಮಾ ಈ ನಿರ್ಧಾರ ತೆಗೆದುಕೊಳ್ಳುವ ಅನಿವಾರ್ಯತೆ ಏನೂ ಇರಲಿಲ್ಲ. ಜನತೆಯ ದೊಡ್ಡ ವಿಭಾಗ ಅಫ್ಘಾನಿಸ್ತಾನದಲ್ಲಿ ಯುದ್ಧಕ್ಕೆ ವಿರೋಧವಾಗಿದ್ದಾರೆ. ಇತ್ತೀಚಿನ ಒಂದು ಅಭಿಪ್ರಾಯ ಸಂಗ್ರಹದ ಪ್ರಕಾರ, ಶೇ. 59 ಜನ ಇನ್ನಷ್ಟು ಹೆಚ್ಚು ಸೈನ್ಯ ಅಲ್ಲಿಗೆ ಕಳಿಸುವುದಕ್ಕೆ ವಿರೋಧವಾಗಿದ್ದಾರೆ. ಅಲ್ಲಿಂದ ತಕ್ಷಣ ಅಮೆರಿಕನ್ ಪಡೆಗಳು ಕಾಲ್ತೆಗೆಯಬೇಕು ಎಂದು ಶೇ. 28 ಜನರ ಅಭಿಪ್ರಾಯ. ಈಗಾಗಲೇ ಅಫ್ಘಾನಿಸ್ತಾನದಲ್ಲಿ ಯುದ್ಧ ಎಂದೂ ಮುಗಿಯದ ಗೆಲ್ಲಲಾಗದ ವಿಯೆಟ್ನಾಂ ಯುದ್ಧದ ಮಟ್ಟ ಮುಟ್ಟಿದೆ ಅಂತ ಶೇ. 51 ಜನರ ಅಭಿಪ್ರಾಯ.

ಎಲ್ಲರಿಗೂ ಗೊತ್ತಿರುವ ಹಾಗೆ ಅಮೆರಿಕನ್ ಸಂವಿಧಾನದಲ್ಲಿ ಅಧ್ಯಕ್ಷರದ್ದೇ ಪರಮಾಧಿಕಾರ. ಇಂತಹುದೇ ಸನ್ನಿವೇಶದಲ್ಲಿ 1952 ರಲ್ಲಿ ಕೊರಿಯಾ ಯುದ್ಧದ ಸಮಯದಲ್ಲಿ ಯುದ್ಧ ವಿಸ್ತರಿಸಿ ಚೀನಾದ ಮೇಲೆ ಯುದ್ಧಕ್ಕೆ ಹೋಗಲು ಆಗಿನ ಅಧ್ಯಕ್ಷ ಹ್ಯಾರಿ ಟ್ರೂಮನ್ ಮೇಲೆ ಮಿಲಿಟರಿ ಜನರಲ್ ಮತ್ತು ಆಳುವ ವಲಯಗಳ ಒತ್ತಡಕ್ಕೆ ಮಣಿಯದೆ, ಪಡೆಗಳನ್ನು ಹಿಂತೆಗೆದಿದ್ದರು. ಮಾತ್ರವಲ್ಲ ಜನರಲ್ ಮೆಕಾರ್ಥರ್ ಅವರನ್ನು ವಜಾ ಮಾಡಿದ್ದರು ಎಂದು ಇಲ್ಲಿ ನೆನಪಿಸಿಕೊಳ್ಳಬಹುದು.

ಅಫ್ಘಾನಿಸ್ತಾನದಲ್ಲಿ 'ಭಯೋತ್ಪಾದನೆ ವಿರುದ್ಧ ಹೋರಾಟ' ಈಗಾಗಲೇ ತೀವ್ರಗೊಳಿಸಲಾಗಿದೆ. ದಿನೇ ಅಫ್ಘಾನಿ-ಪಾಕಿಸ್ತಾನಿ ಗಡಿ ಪ್ರದೇಶದಲ್ಲಿ ಯುದ್ಧ ವಿಮಾನಗಳು ಬಾಂಬು ಮಳೆ ಸುರಿಸುತ್ತವೆ. ಈ ಯುದ್ಧದಲ್ಲಿ ಸಾಯುತ್ತಿರುವ ಅಫ್ಘಾನಿ-ಪಾಕಿಸ್ತಾನಿ ಅಮಾಯಕ ಜನರ ಸಾವು-ನೋವು ಹೆಚ್ಚಾಗಿದ್ದು ಬಿಟ್ಟರೆ, ಬೇರೆ ಯಾವ ಪರಿಣಾಮವೂ ಕಂಡಿಲ್ಲ. ಈಗಾಗಲೇ ಒಟ್ಟು ಅಮೆರಿಕನ್ ಮತ್ತು ನಾಟೋ ಪಡೆಗಳ ಸಂಖ್ಯೆ ಹಿಂದೆ ಇದ್ದ ಸೋವಿಯೆಟ್ ಪಡೆಗಳ ಸಂಖ್ಯೆ ಮೀರಿದೆ. ಅಮೆರಿಕನ್ ಪಡೆಗಳ ಸಂಖ್ಯೆಯೇ ಒಂದು ಲಕ್ಷ ಮೀರಿದೆ. ಅಫ್ಘಾನಿಸ್ತಾನದಲ್ಲಿ ಯಾರ ವಿರುದ್ಧ ಹೋರಾಡುತ್ತಿದ್ದಾರೆ ಅಂತ ಅಮೆರಿಕನ್ ಪಡೆಗಳಿಗೆ ಗೊತ್ತಿಲ್ಲ. ತಾಲಿಬಾನ್ ಅಥವಾ ಅಲ್-ಖೈದಾ? ಪಾಕಿಸ್ತಾನದ ಅಣ್ವಸ್ತ್ರಗಳನ್ನು ವಶಪಡಿಸಿಕೊಳ್ಳುವ ಮೊದಲು ಭಯೋತ್ಪಾದಕರನ್ನು ತಡೆಯಬೇಕು ಅಂತ ಒಬಾಮಾರ ಹೊಸ ವಾದ. ಇರಾಕಿನಲ್ಲಿ ಸದ್ದಾಂ ಪೇರಿಸಿಟ್ಟಿದ್ದ ಅಣ್ವಸ್ತ್ರಗಳನ್ನು ಹುಡುಕಲು ಬುಶ್ ಸೈನಿಕರನ್ನು ಕಳಿಸಿದ್ದು. ಇನ್ನು ಹುಡುಕುತ್ತಲೇ ಇದ್ದಾರೆ ಅಂತ ಒಬಾಮಾ ನೆನಪಿಸುವುದು ಯಾರು ?

ಅಫ್ಘಾನಿಸ್ತಾನದಲ್ಲಿ ಅಮೆರಿಕದ ಬಾಂಬು ದಾಳಿಗಳು ದಿನೇ ದಿನೇ ಸಾಮಾನ್ಯ ಶಾಂತಿಪ್ರಿಯ ನಾಗರಿಕರನ್ನು ತಾಲಿಬಾನ್ ಮತ್ತು ಅಲ್-ಖೈದಾಗ ಬೆಂಬಲಿಗರು ಅಥವಾ ಸೈನಿಕರನ್ನಾಗಿ ಮಾಡುತ್ತಿ ಅಫ್ಘಾನಿಸ್ತಾನ ಸಮಸ್ಯೆಗೆ ಮಿಲಿಟರಿ ಪರಿಹ ಸಾಧ್ಯವಿಲ್ಲ. ಅದೂ ವಿದೇಶೀ ಮಿಲಿಟ ಮಧ್ಯಪ್ರವೇಶದಿಂದಂತೂ ಖಂಡಿತ ಇಲ್ಲ. ತಾಲಿಬಾನ್ ಒಸಾಮಾ ಬಿನ್ ಲಾಡೆನ ಅಲ್-ಖೈದಾ ಪಡೆ, ಅಫ್ಘಾನಿಸ್ತಾನ ಸಮಸ್ಯೆ ಇವೆಲ್ಲವೂ ಅಮೆರಿಕ ಮತ್ತು ಪಾಕಿಸ್ತಾನದ ಎರಡ ಮಿಲಿಟರಿಗಳ ಅಕ್ರಮ ಸಂತಾನ. ಇವೆರಡೂ ತಮ ಅಪರಾಧಗಳನ್ನು ಒಪ್ಪಿಕೊಳ್ಳದೆ ತಿದ್ದಿಕೊಳ್ಳದೆ ಇದ ಪರಿಹಾರವಿಲ್ಲ. ಅಫ್ಘಾನಿಸ್ತಾನಕ್ಕೆ 30 ಸಾವಿ ಸೈನಿಕರನ್ನು ಕಳಿಸುವುದರಿಂದ ಭಯೋತ್ಪಾದಕ ಶಕ್ತಿಗ ಇನ್ನಷ್ಟು ಗಟ್ಟಿಯಾಗುತ್ತವೆ. ಸಮಸ್ಯೆ ಇನ್ನಷ್ಟು ಗಂಭೀರವಾಗುತ್ತದೆ.

'ವಾಲ್ ಸ್ಟ್ರೀಟ್' ಬಿದ್ದ ಪರಿಣಾಮ ಮರೆಸಲು 'ಬರ್ಲಿನ್ ವಾಲ್' ಉತ್ಸ

ಇತ್ತೀಚೆಗೆ ಬರ್ಲಿನ್ ಗೋಡೆ ಬಿದ್ದ ದಿನದ ನಲ್ವತ್ತನೇ ವಾರ್ಷಿಕೋತ್ಸವವನ್ನು 'ವಿಜೃಂಭಣೆ'ಯಿಂದ ಆಚರಿಸಲಾಯಿತು. ಜರ್ಮನಿ, ಫ್ರಾನ್ಸ್, ಬ್ರಿಟನ್ ರಾಜಕೀಯ ನಾಯಕರುಗಳು ಮತ್ತು ಸೋವಿಯೆಟ್ ಕೊನೆಯ ಅಧ್ಯಕ್ಷ ಗೋರ್ಬಚೆವ್ ಭಾಗವಹಿಸಿದ್ದರು. ಅದಕ್ಕೆ ಮೊದಲೇ ಬರ್ಲಿನ್ ಗೋಡೆ ಬಿದ್ದಿದ್ದರ 'ಮಹತ್ವ'ದ ಬಗ್ಗೆ ಭಾರೀ ಅಪಪ್ರಚಾರ ಹರಿಯ ಬಿಡಲಾಯಿತು. ಬರ್ಲಿನ್ ಗೋಡೆ ಶೀತ ಸಮರದ ಪ್ರತೀಕ. ಶೀತ ಸಮರದ ವಿಜಯಕ್ಕೆ ಕಾರಣರಾದ (ನಾಟೋ ಕೂಟದ ನಾಯಕರು ಮತ್ತು ಗೋರ್ಬಚೆವ್!) ಎಲ್ಲರನ್ನೂ ನೆನೆಯಲಾಯಿತು. ಶೀತ ಸಮರವನ್ನು ಹುಟ್ಟು ಹಾಕಿದವರನ್ನು (ಮಾಜಿ ಸಮಾಜವಾದಿ ದೇಶಗಳ ನಾಯಕರನ್ನು - ಗೋರ್ಬಚೆವ್ ಬಿಟ್ಟು) ಜರೆಯಲಾಯಿತು. ಒಟ್ಟಾರೆಯಾಗಿ ಇತಿಹಾಸವನ್ನು ತಿರುವು ಮುರುವು ಮಾಡಲಾಯಿತು. ಇತಿಹಾಸವನ್ನು ಬರೆಯುವುದು ಗೆದ್ದವರು ತಾನೆ - ಗೆದ್ದವರ ಮೂಗಿನ ನೇರಕ್ಕೆ ?

ಎರಡನೇ ಮಹಾಯುದ್ಧದ ನಂತರ ಸಮಾಜವಾದಿ ಜಗತ್ತಿನ ಮೇಲೆ ದಾಳಿ ಮಾಡಿ ಅದನ್ನು ದುರ್ಬಲಗೊಳಿಸುವ ನಾಟೋ ದುಷ್ಟಕೂಟದ ಯೋಜನೆಯೇ ಶೀತ ಸಮರಕ್ಕೆ ಕಾರಣವಾಗಿದ್ದು. ನಾಟೋ ದಾಳಿ ಎದುರಿಸಲು ಹುಟ್ಟಿದ ವಾರ್ಸಾ ಒಪ್ಪಂದ ಬರ್ಖಾಸ್ತು ಮಾಡಿದ ಮೇಲೂ, ಶೀತ ಸಮರ 'ಗೆದ್ದ' ಮೇಲೂ ನಾಟೋ ಬರ್ಖಾಸ್ತು ಮಾಡಿಲ್ಲ. ಎರಡನೇ ಮಹಾಯುದ್ಧ ಗೆದ್ದ ಎಲ್ಲಾ ನಾಲ್ಕು ಮಿಲಿಟರಿ ಶಕ್ತಿ ದೇಶಗಳು ಬರ್ಲಿನಿನ ಜಂಟಿ ಆಡಳಿತ ನಡೆಸಬೇಕೆಂಬ ಸೋವಿಯೆಟ್ ಪ್ರಸ್ತಾವ ಧಿಕ್ಕರಿಸಿ, ಬರ್ಲಿನನ್ನು ಹರಿ ಹಂಚಲು ಮುಂದಾಗಿದ್ದು ನಾಟೋ ಕೂಟ. ಅದರ ನಂತರವೂ ತಮ್ಮ ಭಾಗದ ಬರ್ಲಿನನ್ನು ಸತತವಾಗಿ ಸಮಾಜವಾದೀ ಬಣದ ವಿರುದ್ಧ ಮಿಲಿಟರಿ ಚಟುವಟಿಕೆಗಳಿಗೆ ಬಳಸಿ, 16 ವರ್ಷಗಳ ನಂತರ ಈ ಚಟುವಟಿಕೆಗಳ ವಿರುದ್ಧ ರಕ್ಷಣೆಗಾಗಿ ಬರ್ಲಿನ್ ಗೋಡೆ ಕಟ್ಟುವ ಅನಿವಾರ್ಯತೆ ಬಂದಿರುವ ಚಾರಿತ್ರಿಕ ಸತ್ಯ ಯಾರಿಗೂ ಬೇಕಾಗಿರಲಿಲ್ಲ.

ಈ ಉತ್ಸವ ಏನನ್ನು ಸಂಭ್ರಮಿಸಲು ? ಬರ್ಲಿನ್ ಗೋಡೆ ಬಿದ್ದಿದ್ದರಿಂದ ಜಗತ್ತಿನ- ಕನಿಷ್ಠ ಪೂರ್ವ ಯುರೋಪಿನ ದೇಶಗಳ ಜನತೆಯ ಬದುಕು ಉತ್ತಮಗೊಂಡಿತೇ ? 40 ವರ್ಷಗಳ ನಂತರವೂ ಬೇರೆ ದೇಶ-ಪ್ರದೇಶಗಳ ಮಾತು ಬಿಡಿ, ಪೂರ್ವ ಜರ್ಮನಿಯ ಸಾಮಾನ್ಯ ಜನತೆಯ ಬದುಕು ಸಹ ಉತ್ತಮವಾಗಿಲ್ಲ. ಮಾತ್ರವಲ್ಲ, ಒಂದು ಸಣ್ಣ ವಿಭಾಗ ಬಿಟ್ಟರೆ ಅವರ ಬದುಕು ಇನ್ನಷ್ಟು ಹದಗೆಟ್ಟಿದೆ ಎಂದು ಎಲ್ಲಾ ಸಮೀಕ್ಷೆಗಳು ಹೇಳುತ್ತಿವೆ. ಇತರ ಪೂರ್ವ



ಯುರೋಪಿನ ಜನತೆಯ ಬದುಕಿನ ಮಾತಂತೂ ಹೇಳ ತೀರದ್ದು. ಇಡೀ ಯುರೋಪಿನಲ್ಲಿ ಹೆಚ್ಚಿನ ದೇಶಗಳಲ್ಲಿ ಈ 40 ವರ್ಷಗಳಲ್ಲೇ ಅತ್ಯಂತ ಹೆಚ್ಚಿನ ನಿರುದ್ಯೋಗ ದರ ಕಂಡು ಬಂದಿದೆ. ಆರ್ಥಿಕ ಬೆಳವಣಿಗೆ ಸ್ಥಗಿತಗೊಂಡು ತೀವ್ರ ಕುಸಿತ ಎದುರಿಸುತ್ತಿದೆ. ದಿವಾಳಿಯಾದ ಬ್ಯಾಂಕುಗಳ ಬೊಕ್ಕಸವನ್ನು ಸಾರ್ವಜನಿಕ ಹಣದಿಂದ ತುಂಬಿಸಿಕೊಂಡು ಕೊಬ್ಬಿರುವ ಧಣಿಗಳನ್ನು ಬಿಟ್ಟರೆ, ಯಾರಿಗ ಸಂಭ್ರಮಿಸುವಂತದ್ದು ಏನೂ ಇಲ್ಲ.

ಹಾಗಾದರೆ ಏತಕ್ಕಾಗಿ ಈ ಸಂಭ್ರಮದ ಆಚ ? ಇದು 'ವಾಲ್ ಸ್ಟ್ರೀಟ್' ಗೋಡೆ ಬಿದ್ದಿರುವುದ ಮರೆಸಲು. ಬರ್ಲಿನ್ ಗೋಡೆ ಬಿದ್ದಿದ್ದರಿಂದ ಯಾ ಬದುಕೂ ಉತ್ತಮಗೊಳ್ಳಲಿಲ್ಲ. ಆದರೆ 'ವಾ ಸ್ಟ್ರೀಟ್' ಗೋಡೆ ಬಿದ್ದಿರುವುದರಿಂದ ಜಗತ್ತಿ ಕೋಟ್ಯಾಂತರ ಜನರ ಬದುಕು ಪೂರ್ತಿಯಾ ಮುರಿದು ಬಿದ್ದಿದೆ. 'ವಾಲ್ ಸ್ಟ್ರೀಟ್' ಗೋಡೆ ಬಿ ಅಮೆರಿಕದ ನಿರುದ್ಯೋಗದ ಅಧಿಕೃತ ದರ ಶೇ. 1 ದಾಟಿದೆ. ಅನಧಿಕೃತ ಮತ್ತು ನಿಜವಾದ ನಿರುದ್ಯೋ ಶೇ. 20 ಎಂದು ಅಂದಾಜು ಮಾಡಲಾಗಿ ಜಗತ್ತಿನಾದ್ಯಂತ ಆರು ಕೋಟಿ ಜನ ಉದ್ಯೋ ಕಳೆದುಕೊಂಡಿದ್ದಾರೆ. ಅಮೆರಿಕದಲ್ಲಿ ಬಡತನ ಕೋಟಿ ದಾಟಿದೆ. ಇಡೀ ಜಗತ್ತು 1930 ಮಹಾಕುಸಿತದತ್ತ ಓಡುತ್ತಿದೆ. 'ವಾಲ್ ಸ್ಟ್ರೀ ಗೋಡೆ ಬಿದ್ದಿರುವುದನ್ನು ಮತ್ತು ಅದ ಪರಿಣಾಮಗಳನ್ನು ಮರೆಸಲು, ಬರ್ಲಿನ್ ಗೋ ಬಿದ್ದ ವಾರ್ಷಿಕದ ಸಂಭ್ರಮದ ಆಚರಣೆ.

ಎಡಪಂಥವಾದಿ ವಿಕೃತಿ...

ಟ 11 ರಿಂದ

ಾಡಿದೆ. ತಾವು ಪ್ರತಿನಿಸುತ್ತಿದ್ದೇವೆಂದು ಳಿಕೊಳ್ಳುವ ಸಾಮಾನ್ಯ ಜನರಿಗೆ ತುಂಬಾ ಂದರೆಗಳನ್ನು ಒಡ್ಡುತ್ತಿದ್ದು, ಈ ವಿದ್ಯಮಾನ ಇಂದಿನ ಸ್ತುಸ್ಥಿತಿಯಾಗಿದೆ. ಮಾವೋವಾದಿಗಳ ಂಸಾಕೃತ್ಯಗಳು ಮತ್ತು ಸರ್ಕಾರಗಳಿಂದ ಅದಕ್ಕೆ ತಿಕ್ರಿಯೆ ಇವುಗಳಿಂದಾಗಿ ಬುಡಕಟ್ಟು ಜನಾಂಗಗಳ ಸ್ಥಿತಿಯನ್ನು ಇನ್ನಷ್ಟು ದುಸ್ತರಗೊಳಿಸುತ್ತಿದೆ.

ರೆಸೇನಾ ಪಡೆ ಕಾರ್ಯಾಚರಣೆ ಬೇಡ

ಮಾವೋವಾದಿಗಳ ಉಪಟಳವನ್ನು ಅಡಗಿಸಲು ರೆಸೇನಾ ಪಡೆಗಳನ್ನು ಬಳಕೆ ಮಾಡಬಾರದು. ಂದ್ರ ಸರ್ಕಾರವು ಲಷ್ಕರ್-ಇ-ತಯ್ಯಬ, -ಇ-ಮೊಹಮ್ಮದ್, ಹರ್ಕತ್-ಉಲ್- ಮುಂತಹ ಭಯೋತ್ಪಾದಕ ಟನೆಗಳೊಂದಿಗೆ ವ್ಯವಹರಿಸುವಂತೆ ವೋವಾದಿಗಳೊಂದಿಗೆ ವ್ಯವಹರಿಸಬಾರದು. ಧ್ಯಮಗಳ ವರದಿಗಳ ಅನುಸಾರ ಕೇಂದ್ರ ಸರ್ಕಾರ ೂಜಿಸಿರುವ ರಕ್ಷಣಾ ತಂತ್ರಗಳು ಅಂತಿಮವಾಗಿ ಡಕಟ್ಟು ಜನಾಂಗಗಳ ವಿರುದ್ಧದ ದೌರ್ಜನ್ಯಕ್ಕೆ ರಣವಾಗಲಿದೆ. ಏಕೆಂದರೆ ಮಾವೋವಾದಿಗಳು ಂದ ನುಣುಚಿಕೊಂಡು, ಸೇನಾಪಡೆಗಳಿಂದ ರಕ್ಷಣೆ ತಯಲು ಬುಡಕಟ್ಟು ಜನಾಂಗಗಳನ್ನು ಅಡ್ಡ ಟ್ಟುಕೊಳ್ಳಲಿದ್ದಾರೆ. ಇದಕ್ಕೆ ಬದಲಾಗಿ ವೋಗಳನ್ನು ಸಿಪಿಐಎಂ ಪಶ್ಚಿಮ ಬಂಗಾಳದಲ್ಲಿ ಈ ಹಿಂದೆ ಎದುರಿಸಿದಂತೆ ಮತ್ತು ಈಗ ಎದುರಿಸುತ್ತಿರುವಂತೆ ಸೈದ್ಧಾಂತಿಕವಾಗಿ, ರಾಜಕೀಯವಾಗಿ ಮತ್ತು ಸಂಘಟನಾತ್ಮಕವಾಗಿ ಎದುರಿಸಬೇಕು. ಅವರು ಎಲ್ಲಿ ಹಿಂಸಾಕೃತ್ಯಗಳಲ್ಲಿ ತೊಡಗಿದ್ದಾರೋ ಅಲ್ಲಿ ಆಡಳಿತಾತ್ಮಕವಾಗಿ ಎದುರಿಸಬೇಕು. ಇದನ್ನು ಹೊರತುಪಡಿಸಿ ಸಂಪೂರ್ಣವಾಗಿ ಸೇನಾ ರೀತಿಯಲ್ಲಿ ಎದುರಿಸಲು ಮುಂದಾದಲ್ಲಿ ಭಾರಿ ಅನಾಹುತಕ್ಕೆ ಕಾರಣವಾಗಲಿದೆ.

ಉದಾರೀಕರಣ, ಗಣಿ ನೀತಿ... ಇತ್ಯಾದಿ

ಎರಡನೆಯದಾಗಿ ಮಾವೋವಾದಿಗಳು ಪ್ರಾಬಲ್ಯ ಹೊಂದಿರುವ ಪ್ರದೇಶಗಳಲ್ಲಿನ ಸಾಮಾಜಿಕ-ಆರ್ಥಿಕ ಸಮಸ್ಯೆಗಳನ್ನು ಪರಿಗಣಿಸಬೇಕಾಗಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ ಮತ್ತು ಬುಡಕಟ್ಟು ಜನಾಂಗಗಳಿಗಾಗಿ ಅರಣ್ಯ ಹಕ್ಕು ಕಾಯ್ದೆಯನ್ನು ಅನುಷ್ಠಾನಗೊಳಿಸುವುದು ಮುಖ್ಯ ಎಂದು ಇತ್ತೀಚೆಗೆ ಪ್ರಧಾನ ಮಂತ್ರಿಗಳು ಹೇಳಿದ್ದಾರೆ. ಹಾಗಿದ್ದರೂ ಈ ಪ್ರದೇಶಗಳ ಮೇಲೆ ಗಣಿ ಮತ್ತು ಖನಿಜ ನೀತಿ ಎಂತಹ ಪರಿಣಾಮ ಬೀರಿದೆ ಎಂಬುದರ ಬಗ್ಗೆ ಪ್ರಧಾನಿಗಳು ಏನನ್ನೂ ಹೇಳದಿರುವುದು ಕಣ್ಣು ಕುಕ್ಕುವಂತಿದೆ. ನವ ಉದಾರೀಕರಣ ನೀತಿಗಳು ಬುಡಕಟ್ಟು ಜನಾಂಗಗಳ ಮೇಲೆ ಗಣಿ ಕಂಪನಿಗಳು ದಾಳಿಗಳನ್ನು ನಡೆಸಲು ಅವಕಾಶ ಮಾಡಿಕೊಟ್ಟಿವೆ. ಅವರನ್ನು ಸ್ಥಳಾಂತರಗೊಳಿಸುವಂತೆ ಮಾಡುತ್ತಿವೆ. ಅವರ ಜೀವನಾಧಾರಗಳನ್ನು ಕಸಿದುಕೊಳ್ಳುತ್ತಿವೆ. ಅವರ ನಿತ್ಯಜೀವನ ಕಷ್ಟಕ್ಕೆ ಸಿಲುಕಿ, ತಲತಲಾಂತರಗಳಿಂದ ಬಾಳಿಕೊಂಡು ಬಂದಿರುವ ನೆಲೆಗಳು ಇನ್ನಿಲ್ಲವಾಗಲಿದೆ. ಹಾಗಾಗಿ ಇಂತಹ ನವ ಉದಾರೀಕರಣ ನೀತಿ ಬದಲಾಗಬೇಕು ಮತ್ತು ಈ ಪ್ರದೇಶಗಳಲ್ಲಿ ಸಾಮಾಜಿಕ, ಆರ್ಥಿಕ ಯೋಜನೆಗಳನ್ನು ಅನುಷ್ಠಾನಕ್ಕೆ ತರಬೇಕು. ಬುಡಕಟ್ಟು ಜನಾಂಗಗಳು ಅವರ ಮೂಲಭೂತ ಹಕ್ಕುಗಳಿಂದ ವಂಚಿತರಾಗದಂತೆ ಕೇಂದ್ರ ಸರ್ಕಾರ ಭರವಸೆ ನೀಡಬೇಕು. ಬುಡಕಟ್ಟು ಜನಾಂಗಗಳ ಅಭಿವೃದ್ಧಿ ಎಂದರೆ ಅವರ ಪ್ರದೇಶಗಳಲ್ಲೇ ಅವರು ಇದ್ದು ಉದ್ಯೋಗ ಪಡೆಯುವಂತೆ ಮಾಡಬೇಕು. ಅವರಿಗೆ ಮೂಲಭೂತ ಹಕ್ಕುಗಳನ್ನು ಕಲ್ಪಿಸುವುದರೊಂದಿಗೆ ಇತರ ಜನಸಮುದಾಯಕ್ಕೆ ಒದಗಿಸುವ ಮೂಲಸೌಕರ್ಯಗಳಾದ ರಸ್ತೆ, ಶಾಲೆ, ಶಿಕ್ಷಣ, ಆರೋಗ್ಯ ಮತ್ತಿತರ ಸೌಲಭ್ಯಗಳನ್ನು ಒದಗಿಸಬೇಕು. ಹೀಗೆ ಮಾಡುವುದರಿಂದ ಮಾತ್ರವೇ ಬುಡಕಟ್ಟು ಜನಾಂಗಗಳ ಸಮಸ್ಯೆಗಳನ್ನು ಮುಂದಿಟ್ಟುಕೊಂಡು ಮಾವೋವಾದಿಗಳು ಪಡೆಯುತ್ತಿರುವ ಬೆಂಬಲವನ್ನು ಇಲ್ಲವಾಗಿಸಬಹುದು.

ಸಿಪಿಐಎಂ ಪಕ್ಷದ ವಿರುದ್ಧ ಮಾವೋವಾದಿಗಳು ಹೊಂದಿರುವ ವೈರತ್ವ ಪಶ್ಚಿಮ ಬಂಗಾಳದಲ್ಲಿ ಮಾತ್ರವಲ್ಲದೆ ಛತ್ತೀಸ್‌ಗಡ, ಜಾರ್ಖಂಡ್ ಮತ್ತು ಆಂಧ್ರ ಪ್ರದೇಶಗಳಲ್ಲೂ ಇದೆ. ಇಲ್ಲಿ ಸಿಪಿಐಎಂ ಪಕ್ಷದ ಕಾರ್ಯಕರ್ತರನ್ನು ಉದ್ದೇಶಪೂರ್ವಕವಾಗಿ ಹತ್ಯೆ ಮಾಡಲಾಗುತ್ತಿದೆ. ಸಿಪಿಐಎಂ ಪಕ್ಷ ನಿರ್ಮೂಲನೆಯಾದರೆ ಮಾತ್ರವೇ ತಾವು ಮುನ್ನಡೆಗಳಿಸಲು ಸಾಧ್ಯ ಎಂಬ ನಂಬಿಕೆಯಿಂದಾಗಿ ಸಿಪಿಐಎಂ ಕಾರ್ಯಕರ್ತರ ಹತ್ಯೆಯಲ್ಲಿ ಮಾವೋವಾದಿಗಳು ತೊಡಗಿದ್ದಾರೆ. ಆದರೆ ಸಿಪಿಐಎಂ ಪಕ್ಷ ಜನತೆಯ ಬೆಂಬಲವನ್ನು ಪಡೆದು ಸೈದ್ಧಾಂತಿಕವಾಗಿ, ರಾಜಕೀಯವಾಗಿ ಸಂಘಟನಾತ್ಮಕವಾಗಿ ಇವರನ್ನು ಎದುರಿಸುತ್ತಿದೆ. ನಗರ ಪ್ರದೇಶದಲ್ಲಿರುವ ಕೆಲವು ಬುದ್ಧಿಜೀವಿಗಳ ವಿಭಾಗಗಳು ಮಾವೋವಾದಿಗಳ ಹಿಂಸಾಕೃತ್ಯಗಳ ಹೊರತಾಗಿಯೂ ಅವರ ಕಾರ್ಯಚಟುವಟಿಕೆಗಳ ಕುರಿತು ರಮ್ಯ ಕಲ್ಪನೆ ಹೊಂದಿದ್ದಾರೆ. ಇವರೊಂದಿಗೆ ಸೈದ್ಧಾಂತಿಕ ಸಂಘರ್ಷ ನಡೆಸುವುದು ಅಗತ್ಯ. ಜನತೆಯ ಸಮಸ್ಯೆಗಳ ಕುರಿತು ಅವರು ಚಕಾರ ಎತ್ತದಿರುವುದು ಮತ್ತು ಜನಪರವಾದ ಪರ್ಯಾಯ ಸಾಮಾಜಿಕ-ಆರ್ಥಿಕ ಮಾದರಿಗಳ ಜಾರಿಗೆ ಅವರು ಮುಂದಾಗದಿರುವ ಅಸಮರ್ಥತೆ ಬಗ್ಗೆ ತಿಳಿಸಬೇಕು. ದೇಶದಲ್ಲಿನ ಸಂಘಟಿತ ಎಡ ಪಕ್ಷಗಳು ಕೈಗೆತ್ತಿಕೊಂಡಿರುವ ಅಜೆಂಡ ಇದೇ ಆಗಿದೆ.

ಅಂತಿಮವಾಗಿ ತೃಣಮೂಲ ಕಾಂಗ್ರೆಸ್ ನೇತೃತ್ವದ ವಿರೋಧ ಪಕ್ಷಗಳ ಅವಕಾಶವಾದಿ ರಾಜಕಾರಣ, ಮಾವೋವಾದಿಗಳೊಂದಿಗೆ ಕೈ ಜೋಡಿಸಿ ಸಿಪಿಐಎಂ ಪಕ್ಷವನ್ನು ಅಧಿಕಾರದಿಂದ ಇಳಿಸಲು ಸಿಪಿಐ(ಎಂ) ಮತ್ತು ಎಡಪಕ್ಷಗಳ ವಿರುದ್ಧ ನಿರಂತರ ಧಾಳಿಗಳನ್ನು ನಡೆಸುತ್ತಿರುವ ಸಂಕಷ್ಟದ ಸಮಯ ಇದಾಗಿದೆ. ಪಶ್ಚಿಮ ಬಂಗಾಳದಲ್ಲಿ ಎಡರಂಗ ಸರ್ಕಾರವನ್ನು ಅಸ್ಥಿರಗೊಳಿಸಲು ಮಾಡುತ್ತಿರುವ ಕೃತ್ಯಗಳಾಗಿವೆ. ಪ್ರಜಾಸತ್ತಾತ್ಮಕ ಚಳವಳಿಯನ್ನು ತೀವ್ರಗೊಳಿಸುವ ಮೂಲಕ ಸಿಪಿಐಎಂ ಪಕ್ಷ ಇಂತಹ ಅವಕಾಶವಾದಿ ಒಳಸಂಚನ್ನು ಎದುರಿಸಲಿದೆ.

ಮಸೀದಿ ಧ್ವಂಸ : ಕ್ರಮಕ್ಕೆ.....

ಟ 2 ರಿಂದ

: ಈ ವರದಿಯ ಫಲಿತಾಂಶ ಬಹುದು?

ಶ್ ಕಾರಟ್: 1,000 ಪುಟಗಳಿಗೂ ಹೆಚ್ಚು ುವ ಈ ವರದಿಯನ್ನು ಶಿಫಾರಸ್ಸು ಮಾಡುವಲ್ಲಿ ಳ್ಳಬೇಕಾದ ಕ್ರಮಗಳ ವರದಿಯಲ್ಲಿ ಏನೇನೂ , ವಾಸ್ತವವಾಗಿ ಆರಂಭದ ವರದಿಯಲ್ಲಿ ಹೆಚ್ಚಿನ ಖ್ಯೆಯ ಅಪರಾಧಿಗಳಿದ್ದರು. ಆದರೆ ಅಂತಿಮ ದಿಯಲ್ಲಿ ಅತಿ ಕಡಿಮೆ ಸಂಖ್ಯೆಯ ರಾಧಿಗಳಿದ್ದಾರೆ. ವರದಿಯು ಗುರುತಿಸಿರುವ 68 ಾಧಿಗಳ ಪೈಕಿ ಅನೇಕರು ಮರಣ ಹೊಂದಿದ್ದಾರೆ. ೇಕ ಅಧಿಕಾರಿಗಳು ನಿವೃತ್ತಿ ಹೊಂದಿದ್ದಾರೆ.

: ಬಾಬ್ರಿ ಮಸೀದಿ ಸಮಸ್ಯೆ ಪರಿಹಾರದ ತು ನಿಮ್ಮ ಧೋರಣೆ ಏನು?

ಕಾಂ. ಪ್ರಕಾಶ್: ಬಾಬ್ರಿ ಮಸೀದಿ ಸ್ಥಳದ ಕಸದ ಪ್ರಶ್ನೆಯು ಲಕ್ನೋ ನ್ಯಾಯಾಲಯದಲ್ಲಿ ರ್ಣಕ್ಕಾಗಿ ಕಾದು ಕುಳಿತಿದೆ. ಅಸಲಿ ಭೂಮಿ ದ ಪ್ರಶ್ನೆಯನ್ನು ಪರಿಹರಿಸಿ, ಇದರ ಆಧಾರದ ಸಮಸ್ಯೆಯನ್ನು ಬಗೆಹರಿಸಬೇಕು.

: ನ್ಯಾ. ಸಾಚಾರ್ ವರದಿಯ ಅನುಷ್ಠಾನ ತು ನಿಮ್ಮ ಅಭಿಪ್ರಾಯ?

ಕಾಂ. ಪ್ರಕಾಶ್: ನ್ಯಾ. ಸಾಚಾರ್ ವರದಿಯ ಶಿಫಾರಸ್ಸಿನ ಪ್ರಕಾರ, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳಿಗೆ ಪ್ರಸ್ತುತವಿರುವಂತೆ ಅಲ್ಪಸಂಖ್ಯಾತರಿಗೂ ಕೂಡ ಉಪಯೋಜನೆಯನ್ನು ಜಾರಿಗೆ ತರಬೇಕೆಂದು ನಾವು ಹೇಳುತ್ತಿದ್ದೇವೆ. ಆದರೆ, ಕೇಂದ್ರ ಸರ್ಕಾರ ಯೋಜನಾ ಆಯೋಗದ ಆಣತಿಯಂತೆ ಇದು ಸಾಧ್ಯವಿಲ್ಲವೆಂದು ಕೈ ಚೆಲ್ಲುತ್ತಿದೆ.

ಪ್ರಶ್ನೆ: ಎಡ-ನೇತೃತ್ವದ ಸರ್ಕಾರವಿರುವ ರಾಜ್ಯಗಳಲ್ಲಿ ಇದರ ಅನುಷ್ಠಾನಕ್ಕಾಗಿ ಕೈಗೊಂಡಿರುವ ಕ್ರಮಗಳೇನು?

ಕಾಂ. ಪ್ರಕಾಶ್: ಕೇರಳದಲ್ಲಿ ಈ ವರದಿಯ ಶಿಫಾರಸ್ಸು ಜಾರಿಗೆ ತರಲು ಮಂತ್ರಿಯೋರ್ವರ ನೇತೃತ್ವದಲ್ಲಿ ಸಮಿತಿಯನ್ನು ನೇಮಿಸಲಾಗಿದ್ದು, ಅದು ಸಾಚಾರ್ ವರದಿಯ ಅಂಶಗಳನ್ನು ಜಾರಿಗೆ ತರಲು ಶ್ರಮಿಸುತ್ತಿದೆ. ಪಶ್ಚಿಮ ಬಂಗಾಳದಲ್ಲಿ ಮುಸ್ಲಿಂ ಜನಾಂಗವು ಹೆಚ್ಚಿನ ಸಂಖ್ಯೆಯಲ್ಲಿರುವ 3 ಜಿಲ್ಲೆಗಳನ್ನು ಗುರುತಿಸಿದ್ದು ಕ್ರಮ ಕೈಗೊಳ್ಳಲಾಗಿದೆ. ಅಲ್ಪಸಂಖ್ಯಾತರ ಅಭಿವೃದ್ಧಿಯನ್ನು ಸಾಧಿಸುವಲ್ಲಿ ಶಿಕ್ಷಣ ಒಂದು ಪ್ರಮುಖ ಸಾಧನವಾಗಿದೆ. ಈ ರಾಜ್ಯದ ಎಲ್ಲ ಮದರಸಗಳಲ್ಲಿ ಸಾಮಾನ್ಯ ಶಿಕ್ಷಣವನ್ನು ಮೊದಲಿನಿಂದಲೂ ನೀಡಲಾಗುತ್ತಿದೆ. ಮುಸ್ಲಿಮರಿಗಾಗಿ ಒಂದು ಹೊಸ ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಗಿದೆ. ಅಲಿಘಡ ಮುಸ್ಲಿಂ ವಿಶ್ವವಿದ್ಯಾಲಯದ ಶಾಖೆಯೊಂದನ್ನು ಸ್ಥಾಪಿಸಲಾಗುತ್ತಿದೆ.

ಪ್ರಶ್ನೆ: ಪಶ್ಚಿಮ ಬಂಗಾಳದಲ್ಲಿ ಎಡರಂಗ ಸರ್ಕಾರ 33 ವರ್ಷ ಕಾಲ ಅಧಿಕಾರದಲ್ಲಿದ್ದರೂ ಮುಸ್ಲಿಮರ ಸಮಸ್ಯೆಗಳು ಹಾಗೆಯೇ ಉಳಿದಿವೆ ಎನ್ನಲಾಗುತ್ತಿದೆಯಲ್ಲ?

ಕಾಂ. ಪ್ರಕಾಶ್: ನೀವೇ ತಿಳಿಸಿದಂತೆ ಅಲ್ಲಿ ಎಡರಂಗ 33 ವರ್ಷದಿಂದ ಅಧಿಕಾರದಲ್ಲಿದೆ. ಪಶ್ಚಿಮ ಬಂಗಾಳದಲ್ಲಿ ಶೆ. 25 ರಷ್ಟು ಜನತೆ ಮುಸ್ಲಿಮರು. ಬಹುತೇಕ ಮಂದಿ ಗ್ರಾಮೀಣ ಪ್ರದೇಶದಲ್ಲಿದ್ದು, ರೈತರಾಗಿದ್ದಾರೆ. ಅಲ್ಲಿಯ ಭೂಸುಧಾರಣೆಯಿಂದಾಗಿ 11 ಲಕ್ಷ ಎಕರೆ ಭೂಮಿಯನ್ನು ಭೂರಹಿತರಿಗೆ ಹಂಚಲಾಗಿದೆ. ಇದರಿಂದಾಗಿ ದೊಡ್ಡ ಸಂಖ್ಯೆಯ ಭೂಹೀನ ಮುಸ್ಲಿಮರು ಗ್ರಾಮೀಣ ಪ್ರದೇಶದ ಭೂಮಿ ಪಡೆದುಕೊಂಡ ರೈತರಾಗಿದ್ದಾರೆ. ಸಾಚಾರ್ ವರದಿಯಲ್ಲಿ ಭೂಸುಧಾರಣೆಯಿಂದ ಪಶ್ಚಿಮ ಬಂಗಾಳದ ಮುಸ್ಲಿಮರಿಗೆ ದೊರಕಿರುವ ಭೂಮಿಯ ಕುರಿತು ಯಾವುದೇ ಪ್ರಸ್ತಾಪ ಮಾಡಿಲ್ಲ. ಶಿಕ್ಷಣದ ವಿಷಯವಾಗಿ ಹೇಳುವುದಾದರೆ, ಈ ರಾಜ್ಯದಲ್ಲಿ ಹಿಂದಿನಿಂದಲೂ ಖಾಸಗಿ ಸಂಸ್ಥೆಗಳ ಬದಲಿಗೆ ಹೆಚ್ಚಿನ ಸಂಖ್ಯೆಯ ಸರ್ಕಾರಿ ಶಿಕ್ಷಣ ಸಂಸ್ಥೆಗಳೇ ಇವೆ. ಸಹಕಾರಿ ಶಿಕ್ಷಣ ರಂಗವು ಪರಿಣಾಮಕಾರಿಯಾಗಿ ಶಿಕ್ಷಣದ ವ್ಯಾಪ್ತಿಯನ್ನು ಹಿಗ್ಗಿಸಬಲ್ಲದು. ಹಾಗಾಗಿ, ಇತ್ತೀಚಿನ ದಿನಗಳಲ್ಲಿ ಮುಸ್ಲಿಂ ಶಿಕ್ಷಣ ಸಂಸ್ಥೆಗಳ ಸ್ಥಾಪನೆಗೆ ಮತ್ತು ಸಹಕಾರಿ ಶಿಕ್ಷಣಕ್ಕಾಗಿ ಉತ್ತೇಜನ ನೀಡಲಾಗುತ್ತಿದೆ. ಕೇರಳದಲ್ಲಿ ಪರಿಸ್ಥಿತಿ ಭಿನ್ನವಾಗಿದೆ. ಉದಾಹರಣೆಗೆ, ಮುಸ್ಲಿಂ ಶಿಕ್ಷಣ ಸೊಸೈಟಿ ಎಂಬ ಸಂಸ್ಥೆಯು ಸುಮಾರು 120 ಕಾಲೇಜುಗಳನ್ನು ಹೊಂದಿದೆ. ರಾಜ್ಯ ಸರ್ಕಾರಗಳಿಗೆ ಸಂಪನ್ಮೂಲಗಳ ಕೊರತೆಯಿರುವುದರಿಂದ, ಹಲವು ಮಾರ್ಗಗಳನ್ನು ಶೋಧಿಸಲಾಗುತ್ತಿದೆ.

ಪ್ರಶ್ನೆ: ಕರ್ನಾಟಕದ ಬಿಜೆಪಿ ಸರ್ಕಾರದ ಕುರಿತು ಸ್ವಲ್ಪ ಹೇಳುವಿರಾ?

ಕಾಂ. ಪ್ರಕಾಶ್: ಇಡೀ ದೇಶದ ಜನತೆ ಗಂಭೀರವಾಗಿ ಆಲೋಚಿಸಬೇಕಾದಂತಹ ನಿಟ್ಟಿನಲ್ಲಿ ಬಿಜೆಪಿ ಸರ್ಕಾರ ನಡೆಯುತ್ತಿದೆ. ಗಣಿ ಮಾಫಿಯಾ ಬಿಜೆಪಿ ಸರ್ಕಾರದ ಭಾಗವಾಗಿದೆ. ಇದು ರಾಜ್ಯದ ನೈಸರ್ಗಿಕ ಸಂಪನ್ಮೂಲವನ್ನು ಲೂಟಿ ಮಾಡುತ್ತಿದೆ. ಮತ್ತೊಂದೆಡೆ, ಈ ಸರ್ಕಾರ ಗೋ ಹತ್ಯೆಯಂತಹ ಕೋಮುಬಣ್ಣದ ವಿಷಯಗಳಿಗೆ ಹೆಚ್ಚು ಆದ್ಯತೆ ನೀಡುತ್ತಿದೆ. ದನ ಸಾಗಣೆ ವಿರುದ್ಧ ಪ್ರತಿನಿತ್ಯ ಒಂದಲ್ಲ ಒಂದು ಧಾಳಿ ನಡೆಯುತ್ತಿದೆ. ಮತ್ತಷ್ಟು ಕೋಮು ವಿಭಜನೆ ಉಂಟು ಮಾಡಿ ಅದರಿಂದ ರಾಜಕೀಯ ದುರ್ಲಾಭ ಪಡೆಯಲು ಹಂಚಿಕೆ ಹೂಡಿದೆ.


ಯೂನಿಯನ್ ಕಾರ್ಬೈಡ್ ಕಂಪನಿಯ ಮುಖ್ಯಸ್ಥ ಆಂಡರ್‌ಸನ್

ಭೋಪಾಲ್ ದುರಂತಕ್ಕೆ ಕಾರಣವಾದ ಕಂಪನಿಯ ಮುಖ್ಯಸ್ಥನನ್ನು ಶಿಕ್ಷಿಸಲು ಅವಕಾಶವಿದ್ದರೂ ಹಾಗೆ ಆಗಿಲ್ಲ. ಯಾಕೆ?

ಭೋಪಾಲ್: ಕಾರ್ಪೊರೇಟ್ ಕಂಪನಿಯ ಕ್ರೌರ್ಯ ಮತ್ತು ಆಳುವ ವರ್ಗಗಳ ಹಿತಾಸಕ್ತಿ

ಭೋಪಾಲ್ ವಿಷಾನಿಲ ದುರಂತ ಸಂಭವಿಸಿ 25 ವರ್ಷ ಕಳೆದರೂ ಅದರಿಂದ ಸತ್ತವರ ಕುಟುಂಬಗಳಿಗೆ ಮತ್ತು ನೊಂದು ಬೆಂದವರಿಗೆ ನಯಾಪೈಸೆ ಪರಿಹಾರ ದೊರೆತಿಲ್ಲದಿರುವುದು ಒಂದೆಡೆಯಾದರೆ, ಇಂತಹ ದುರಂತ ಸಂಭವಿಸುತ್ತದೆಂಬ ಮುನ್ಸೂಚನೆ ಇದ್ದಾಗ್ಯೂ ಯಾವುದೇ ಸುರಕ್ಷತಾ ಕ್ರಮ ಕೈಗೊಳ್ಳದೆ ಹಣ ಉಳಿಸಲು ಕಣ್ಣು ಮುಚ್ಚಿ ಕುಳಿತುಕೊಂಡಿದ್ದ ಯೂನಿಯನ್ ಕಾರ್ಬೈಡ್ ಎಂಬ ಬಹುರಾಷ್ಟ್ರೀಯ ಕಂಪನಿ ಮತ್ತೊಂದೆಡೆ. 22,000 ಕ್ಕೂ ಹೆಚ್ಚು ಜನರ ಸಾವಿಗೆ ಕಾರಣವಾಗಿ ವಿಶ್ವದಲ್ಲೆ ಕುಖ್ಯಾತಿ ಪಡೆದಿರುವ ಈ ಘಟನಾವಳಿಯಲ್ಲಿ ಈ ದೇಶದ ಜನತೆಗೆ ನಮ್ಮ ಆಳುವ ವರ್ಗಗಳು ಹೇಗೆ ದ್ರೋಹ ಬಗೆಯುತ್ತಾ ಬಂದಿವೆ ಎನ್ನುವುದಕ್ಕೆ ಭೋಪಾಲ್ ದುರಂತ ಒಂದು ಸ್ಪಷ್ಟ ಉದಾಹರಣೆಯಾಗಿ ನಮ್ಮ ಮುಂದೆ ನಿಂತಿದೆ. ಅಪರಾಧಿಗಳಿಗೆ ಶಿಕ್ಷೆಯಾಗದಂತೆ ರಕ್ಷಿಸುವಲ್ಲಿ ನಮ್ಮ ಆಳುವ ವರ್ಗಗಳ ಮುಖ್ಯ ಪಾತ್ರಗಳನ್ನು ಇಲ್ಲಿ ನೆನಪಿಸಿಕೊಳ್ಳೋಣ.

ಮೊದಲಿಗೆ, ಯೂನಿಯನ್ ಕಾರ್ಬೈಡ್ ಕಂಪನಿಯ ಮುಖ್ಯಸ್ಥ ಆಂಡರ್‌ಸನ್ ಸುಪ್ರೀಂಕೋರ್ಟ್ ನೀಡಿದ ಸಮನ್ಸ್‌ಗೆ ಉತ್ತರವಾಗಿ ನ್ಯಾಯಾಲಯದಲ್ಲಿ ಹಾಜರಾಗದೆ ಅಮೇರಿಕಾಗೆ ತೆರಳಿ ತಲೆ ತಪ್ಪಿಸಿಕೊಂಡದ್ದು. ಹತ್ತಾರು ವರ್ಷ ಕಳೆದರೂ ನ್ಯಾಯಾಲಯದ ಸಮನ್ಸ್‌ಗಳಿಗೆ ಉತ್ತರಿಸದೆ ತಲೆ ತಪ್ಪಿಸಿಕೊಂಡಿದ್ದವನನ್ನು ಸುಪ್ರೀಂ ಕೋರ್ಟ್ 'ನಾಪತ್ತೆಯಾಗಿದ್ದಾನೆಂದು' ಘೋಷಿಸುವುದರಲ್ಲಿತ್ತು. ಅಷ್ಟರಲ್ಲಿ ಗ್ರೀನ್‌ಪೀಸ್



ಎಂಬ ಸರ್ಕಾರೇತರ ಸಂಘಟನೆಯೊಂದು ಆಂಡರ್‌ಸನ್ ಮಹಾಶಯ ಐಷಾರಾಮಿಯಾಗಿ ತನ್ನ ಎಸ್ಟೇಟ್‌ನಲ್ಲಿ ದಿನಕಳೆಯುತ್ತಿದ್ದಾನೆಂದು ಹುಡುಕಿ ಮಾಹಿತಿ ನೀಡಿತು. ನಮ್ಮ ದೇಶದ ಅಥವಾ ಅಮೇರಿಕಾದ ಪೊಲೀಸರಿಗೆ ಸಿಗದ ಈತನನ್ನು ಅತಿ ಸುಲಭವಾಗಿ ಹುಡುಕಿಕೊಟ್ಟ ಮೇಲಾದರೂ ಅವನನ್ನು ಬಂಧಿಸಲು ಎರಡೂ ದೇಶಗಳ ಆಳುವ ವರ್ಗಗಳು ಹಿಂಜರಿದವು.

ಭೋಪಾಲ್ ಸಂತ್ರಸ್ತರಿಗೆ ಬಿಜೆಪಿ ಸರ್ಕಾರದ ದ್ರೋಹ:

2001ರ ಆಗಸ್ಟ್‌ನಲ್ಲಿ ಕೇಂದ್ರದಲ್ಲಿ ವಾಜಪೇಯಿ ನೇತೃತ್ವದ ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದಾಗ, ಅವರಿಗೆ ಸಲಹೆ ನೀಡುವ ಅಟಾರ್ನಿ ಸಾಲಿಸಿಟರ್ ಜನರಲ್ ಆಗಿ ಸೋಲಿ ಸೊರಬ್ಜಿಯವರು ಇದ್ದರು. 'ಅಪರಾಧಿ ಆಂಡರ್‌ಸನ್‌ಗೆ ಈಗಾಗಲೇ 81 ವರ್ಷ ವಯಸ್ಸಾಗಿರುವುದರಿಂದ ಅಪರಾಧಿಯನ್ನು ಬಂಧಿಸಿ ಶಿಕ್ಷಿಸಲು ಕಷ್ಟ' ಎಂಬ ಸಲಹೆ ನೀಡಿದ್ದರು. ಅದರಂತೆ ಬಿಜೆಪಿ ಸರ್ಕಾರದ ನೇತೃತ್ವದಲ್ಲಿ ಸಿಬಿಐ ಕೂಡ ಅಪರಾಧಿಯ ವಿರುದ್ಧದ ದೋಷಾರೋಪಣೆಯನ್ನು ಸಡಿಲಗೊಳಿಸಿತ್ತು.

ಭಾರತ ಮತ್ತು ಅಮೇರಿಕಾ ಹಸ್ತಾಂತರ ಒಪ್ಪಂದ

ಭಾರತ ಮತ್ತು ಅಮೇರಿಕಾ ನಡುವೆ ಅಪರಾಧಿಗಳ ಹಸ್ತಾಂತರ ಒಪ್ಪಂದ ಜಾರಿಯಲ್ಲಿದ್ದರೂ, ಅಪರಾಧಿಯನ್ನು ಅಮೇರಿಕಾ ಭಾರತಕ್ಕೆ ಹಸ್ತಾಂತರಿಸಲು ಸಿದ್ಧವಿರಲಿಲ್ಲ, ಹೇಗಾದರೂ ಮಾಡಿ ಅಪರಾಧಿಯನ್ನು ಶಿಕ್ಷಿಸಬೇಕೆಂದು ಭಾರತದ ಆಳುವ ವರ್ಗಗಳಿಗೆ ಮನಸ್ಸಿರಲಿಲ್ಲ.

ಭಾರತ-ಅಮೇರಿಕಾ ಬಂಡವಾಳಶಾಹಿಗಳ ಹಿತಾಸಕ್ತಿ:

'ಅಪರಾಧಿ ಆಂಡರ್‌ಸನ್‌ನ್ನು ಬಂಧಿಸಿ ಶಿಕ್ಷಿಸಿದರೆ ಅದು ಅಮೇರಿಕಾದ ಬಂಡವಾಳಿಗರಿಗೆ ತಪ್ಪು ಸಂದೇಶ ನೀಡಿದಂತಾಗುತ್ತದೆ. ಅಲ್ಲದೆ ವಿದೇಶದಲ್ಲಿ ಅಮೇರಿಕಾದ ಬಂಡವಾಳಿಗರು ಬಂಡವಾಳ ಹೂಡುವಲ್ಲಿ ಅವರ ವಿಶ್ವಾಸಕ್ಕೇ ಪೆಟ್ಟು ನೀಡುತ್ತದೆ. ದುರ್ಘಟನೆಗೆ ಕಾರಣರಾಗಿರುವ ಇತರ ವ್ಯಕ್ತಿಗಳ ಮೇಲೆ ಜವಾಬ್ದಾರಿ ಹೊರಿಸುವುದು ಉತ್ತಮ' ಎಂದು ಅಮೇರಿಕಾದ ಕೈಗಾರಿಕಾ ಸಂಘಗಳ ಅಧ್ಯಕ್ಷ ಅಮೇರಿಕಾದ ಸರ್ಕಾರವನ್ನು ಒತ್ತಾಯಿಸಿದ್ದರು. ಆದರೆ ಯೂನಿಯನ್ ಕಾರ್ಬೈಡ್ ಕಂಪನಿಯ ರಾಸಾಯನಿಕ ಸ್ಥಾವರಗಳ ವಿನ್ಯಾಸ, ಪರೀಕ್ಷೆ, ಸ್ಥಾಪನೆ ಮತ್ತು ಸುರಕ್ಷತಾ ನಿರ್ವಹಣೆ ಇವೆಲ್ಲ ಹಂತಗಳಲ್ಲಿ ಆಂಡರ್‌ಸನ್‌ದೇ ಪ್ರಮುಖ ಪಾತ್ರವಿತ್ತು.

ಹೀಗಾಗಿ, ಭಾರತ-ಅಮೇರಿಕಾ ಬಂಡವಾಳಿಗರ ಲಾಭದೂಟಕ್ಕೆ ಅಡಚಣೆಯಾಗುವ ಭೋಪಾಲ್ ದುರ್ಘಟನೆಯನ್ನು ನಮ್ಮ ಸರ್ಕಾರಗಳು ತಮ್ಮ ಪ್ರಮುಖ ಕಾರ್ಯಸೂಚಿಯಾಗಿ ಕೈಗೆತ್ತಿಕೊಳ್ಳಲೇ ಇಲ್ಲ.

ಜಯ



ನವೆಂಬರ್ 26 ರಂದು ಹಾಸ್ಟೆಲ್ ವಿದ್ಯಾರ್ಥಿಗಳ ಸಮಸ್ಯೆಗಳ ಪರಿಹಾರಕ್ಕಾಗಿ ಒತ್ತಾಯಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ನೇತೃತ್ವದಲ್ಲಿ ಬೆಂಗಳೂರಿನಲ್ಲಿ ನಡೆದ ರಾಜ್ಯಮಟ್ಟದ ಬೃಹತ್ ಪ್ರತಿಭಟನಾ ರ್‍ಯಾಲಿಯ ಚಿತ್ರ

ಕವಿತೆ

ಸಂಕೇತ

ಮೂಡಣ, ಮುಗಿಲು ಕೆಂಪಾಗಲು
ಕತ್ತಲು, ಭಯವಿಲ್ಲವೋ
ಜೀವನ ಸಂಕುಲಕ್ಕೆ
ಚಿಗುರುವ ಮೊಳಕೆ ಕೆಂಪಾಗಲು
ತಂಪು, ಕಂಪು ತುಂಬಿತ್ತೋ
ಭೂಮಿ, ಮುಗಿಲು
ದುಡಿವವರ ಆಲೋಚನೆ ಕೆಂಪಾಗಲು
ಧಣಿಗಳ ಕೋಟೆ, ಕೊತ್ತಲು
ಬಟಾಬಯಲು
ಕೆಂಬಾವುಟ
ಬಣ್ಣ, ಗುರುತ್ತಲ್ಲವೋ
ಸಮೃದ್ಧಿ ಸಮಾನತೆ
ಸ್ನೇಹ, ಸಹಬಾಳ್ವೆ
ಸಂಕೇತವೋ.

■ ಲಕ್ಷ್ಮಣ

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12. 18th Cross, S.R.Nagar, BANGALORE - 560 027 Karnataka (State) and Published at BANGALORE No 12 18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027 Editor S.Y.GURUSHANTH